PREUNIVERSITY

MATHEMATICS PART II

ಪ್ರೀಯುನಿವರ್ಸಿಟಿ

ಗಣಿತಶಾಸ್ತ್ರ

ಭಾಗ 2

GEOMETRY AND TRIGONOMETRY

ಜ್ಯಾಮಿತಿ ಮತ್ತು ತ್ರಿಕೋಣಮಿತಿ

A BANGALORE UNIVERSITY PUBLICATION

PREUNIVERSITY MATHEMATICS

ಪ್ರೀಯುನಿವರ್ಸಿಟಿ ಗಣಿತಶಾಸ್ತ್ರ

PART II

GEOMETRY AND TRIGONOMETRY

ಭಾಗ 2

ಜ್ಯಾಮಿತಿ ಮತ್ತು ತ್ರಿಕೋಣಮಿತಿ

A BANGALORE UNIVERSITY PUBLICATION

1968

BANGALORE UNIVERSITY PUBLICATION DIVISION

Chief Editor — Dr R. S. Mugali

Publication No. 13

© BANGALORE UNIVERSITY, 1968

MATHEMATICS TEXT BOOK COMMITTEE

Prof. F. J. NORONHA (*Chairman*)
Dr C. N. SRINIVASIENGAR
Sri G. T. NARAYANA RAO
Sri D. V. RAMANNA
Sri K. R. SRIKANTIAH
Sri D. S. CHANDRASEKHARIAH

PRINTED AT THE GOVERNMENT PRESS, BANGALORE

Price : Rs. 4-50

PREFACE

Part II of Preuniversity Mathematics covers the subjects of Geometry and Trigonometry. It is written primarily to meet the requirements of the new syllabus adopted by the Mysore, Karnatak and Bangalore Universities.

Chapter I introduces a new modern approach to the basic concepts of Geometry. A clear distinction is made between undefined terms and definitions. A minimum number of postulates are introduced to serve as a base for the logical development of the subject. The important notion of **betweenness** is explained in a simple manner.

Chapters IV, V and VI provide an elementary introduction to Analytic Geometry including the straight line and circle.

The last four chapters deal with Trigonometry in a simple and compact manner.

Like Part I this book also presents the subject matter simultaneously in English and Kannada. This special feature facilitates a more ready grasp of new mathematical concepts by students with a knowledge of both languages.

I take this opportunity to thank my colleagues on the Committee for their good work and generous cooperation in the preparation of the manuscript.

We are grateful to the Director of the Government Press and his staff for the high standard of printing and the neat appearance of the book. The diagrams were skillfully prepared by Sri K. N. Gopala Rao of the Department of Civil Engineering, University College of Engineering.

F. J. Noronha,
Chairman,
Mathematics Text Book Committee,
Bangalore University

Central College,
Bangalore,
1st August 1968

ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಾಶನ ವಿಭಾಗ

ಪ್ರಕಟಣೆಗಳು

ಪಠ್ಯ ಪುಸ್ತಕಗಳು

1 ಪ್ರೀಯೂನಿವರ್ಸಿಟಿ ಗಣಿತಶಾಸ್ತ್ರ ಭಾಗ I, ಬೀಜಗಣಿತ ಮತ್ತು ಸುಲಭ ಕಲನ ಶಾಸ್ತ್ರ ... ... 4·00
ಪ್ರೊ. ಎಫ್. ಜೆ. ನೊರೊನ್ಹಾ ಮತ್ತು ಇತರರಿಂದ

2 ಕಾವ್ಯಲಹರಿ (ಪಿ ಯು ಸಿ) ... ... 2·00
ಡಾ. ರಂ. ಶ್ರೀ. ಮುಗಳಿ ಮತ್ತು ಇತರರಿಂದ ಸಂಪಾದಿತ

3 ಮನಃಶಾಸ್ತ್ರ ಪ್ರವೇಶಿಕೆ (I ಬಿ.ಎ.) ... ... 3·50
ಪ್ರೊ. ಎಸ್. ಕೆ. ರಾಮಚಂದ್ರರಾವ್

4 ಬೀಜರೇಖಾಗಣಿತ ಮತ್ತು ತ್ರಿಕೋಣಮಿತಿ (I ಬಿ.ಎಸ್.ಸಿ.) ... 3·20
ಜಿ ಟಿ. ನಾರಾಯಣರಾವ್

5 ರಾಜ್ಯಶಾಸ್ತ್ರ ಪ್ರವೇಶಿಕೆ (I ಬಿ.ಎ.) .... 3·80
ಹೆಚ್. ಆರ್. ದಾಸೇಗೌಡ ಮತ್ತು ಎಂ. ಎ. ಸಿಂಗಮ್ಮಾಳ್

6 ಸಂಗೀತ ಶಾಸ್ತ್ರ ಪ್ರಕಾಶಿಕೆ (I ಬಿ.ಎ.)... .... 3·20
ಟಿ. ಆರ್. ನಾಗರತ್ನ

7 ಸಂಗೀತಶಾಸ್ತ್ರ ಬೋಧಿನಿ (ಪಿ ಯು ಸಿ) .... 2·50
ಜಿ. ಚನ್ನಮ್ಮ

8 ಅರ್ಥಶಾಸ್ತ್ರ (ಪಿ ಯು ಸಿ) ... . 3·20
ಹೆಚ್. ಆರ್. ಸಾಬರೆ

9 ಭೌತ ಶಾಸ್ತ್ರ (ಪಿ ಯು ಸಿ) ....
ಬಿ. ವಿ. ನಾರಾಯಣರಾವ್

10 ಸಾಮಾನ್ಯ ಭೌತ ಶಾಸ್ತ್ರ (I ಬಿ.ಎಸ್.ಸಿ.) ....
ಕೆ. ಶೇಷಾದ್ರಿ ಅಯ್ಯಂಗಾರ್

11 ವಾಣಿಜ್ಯ ಶಾಸ್ತ್ರ (ಪಿ ಯು ಸಿ) 3.00
ಟಿ. ಹೆಚ್. ನಾರಾಯಣರಾವ್

12 ಭೂಗೋಳ ಶಾಸ್ತ್ರ (ಪಿ ಯು ಸಿ) ... ...
ಎ. ಕುಮಾರಸ್ವಾಮಿ

13 ಪ್ರೀಯುನಿವರ್ಸಿಟಿ ಗಣಿತ ಶಾಸ್ತ್ರ ಭಾಗ II 4.50
ಜ್ಯಾಮಿತಿ ಮತ್ತು ತ್ರಿಕೋಣಮಿತಿ
ಪ್ರೊ. ಎಫ್. ಜೆ. ನೊರೊನ್ಹಾ ಮತ್ತು ಇತರರಿಂದ

14 ಆರ್ಥಿಕ ಅಭಿವೃದ್ಧಿ (I ಬಿ.ಎ.)
ಡಾ. ಟಿ. ಎನ್. ವಿಜಯಪ್ಪ ಮತ್ತು ಕೃಷ್ಣನಾಯಕ್

15 ನೀತಿಶಾಸ್ತ್ರ (I ಬಿ.ಎ.)
ಎಸ್. ರಂಗಾಚಾರ್

16 ಗಣಿತ ತರ್ಕ ಶಾಸ್ತ್ರ (II ಬಿ.ಎಸ್.ಸಿ.)
ಪ್ರೊ॥ ಎಫ್. ಜೆ. ನೊರೊನ್ಹಾ ಮತ್ತು ಇತರರಿಂದ

17 ಧ್ವನಿ ಮತ್ತು ಪ್ರಾಯೋಗಿಕ ಭೌತಶಾಸ್ತ್ರ (I ಬಿ.ಎಸ್.ಸಿ.)
ಕೆ. ಶೇಷಾದ್ರಿ ಅಯ್ಯಂಗಾರ್

18 ಮತ ಧರ್ಮ ತತ್ತ್ವಶಾಸ್ತ್ರ (I ಬಿ.ಎ.)
ಎಂ. ಯಾಮುನಾಚಾರ್ಯ

19 ರಸಾಯನ ಶಾಸ್ತ್ರ (I ಬಿ.ಎಸ್.ಸಿ.)
ಡಾ॥ ಶೆಟ್ಟಿ, ಡಾ॥ ರೆಡ್ಡಿ, ಸೇತುರಾವ್, ಲಕ್ಷ್ಮಣರಾವ್

20 ವಿಶ್ಲೇಷಣ ಗಣಿತಶಾಸ್ತ್ರ (I ಬಿ. ಎಸ್.ಸಿ.)
ಆರ್. ಗುರುರಾಜರಾವ್

ಪಠ್ಯೇತರ ಪುಸ್ತಕ

1 ಕುದುರೆ ಮುಖದೆಡೆಗೆ ... ... 3·00
(ಪ್ರವಾಸ ಚಿತ್ರ) ಜಿ. ಟಿ. ನಾರಾಯಣರಾವ್

Trade enquiries :

The Bangalore University Consumers' Cooperative Society Ltd., Palace Road, Bangalore - 9

CONTENTS—ವಿಷಯಸೂಚಿ

GEOMETRY—ರೇಖಾಗಣಿತ

1 Basic concepts in Geometry 2
ರೇಖಾಗಣಿತದ ಮೂಲ ಭಾವನೆಗಳು

2 Ratio and Proportion 15
ಪ್ರಮಾಣ ಮತ್ತು ಅನುಪ ತ

3 Similar triangles 27
ಸಮರೂಪ ತ್ರಿಭುಜಗಳು

4 Preliminary Concepts of Analytic Geometry 46
ಬೀಜರೇಖಾಗಣಿತದ ಪ್ರಾರಂಭಿಕ ಭಾವನೆಗಳು

5 The Straight line 69
ಸರಳ ರೇಖೆ

6 The Circle 114
ವೃತ್ತ

TRIGONOMETRY—ತ್ರಿಕೋಣಮಿತಿ

7 Trigonometry 138
ತ್ರಿಕೋಣಮಿತಿ

8 Rightangled triangle 167
ಲಂಬಕೋನ ತ್ರಿಕೋಣ

9	Compound angles ಸಂಯುಕ್ತ ಕೋನಗಳು	....	....	185
10	Simple Equations ಸುಲಭ ಸಮೀಕರಣಗಳು	....	....	197
	Answers	....	....	214
	Index ಅನುಬಂಧ	....	....	228

GEOMETRY

ರೇಖಾಗಣಿತ

CHAPTER 1

Basic Concepts in Geometry

1.1 Point, line, plane and space—

All branches of Mathematics including geometry have been built up on certain basic concepts some of which are definable in terms of other concepts, but some of which cannot be defined at all. For example, there have been attempts to define a point as that which has no dimension and a line as that which has only one dimension. It is easily seen that the above statements are not precise. Similar is the case for the plane. The word "dimension" requires definition. So we take *point*, *line* and *plane* as undefined terms. Every line is a set of points and every plane is a set of points.

Space may be explained as the set of all points or elements.

However a line may be denoted as follows :

Fig. 1.1 (a)

It extends bothways infinitely. It has no end points.

Notation $\overleftrightarrow{AB}$.

A *Ray* has only one end point. $\overrightarrow{AB}$
A *segment* has both the end points. $\overline{AB}$



Fig. 1.1(b)

ಅಧ್ಯಾಯ 1

ರೇಖಾಗಣಿತದ ಮೂಲ ಭಾವನೆಗಳು

1.1. ಬಿಂದು, ರೇಖೆ, ಸಮತಲ ಮತ್ತು ಆಕಾಶ

ಗಣಿತ ಶಾಸ್ತ್ರದ ಎಲ್ಲ ಭಾಗಗಳನ್ನೂ ಕೆಲವು ಮೂಲ ಭಾವನೆಗಳ ಮೇಲೆ ರಚಿಸಲಾಗಿದೆ. ರೇಖಾಗಣಿತವೂ ಇವುಗಳಲ್ಲಿ ಒಂದು. ಈ ಮೂಲ ಭಾವನೆಗಳಲ್ಲಿ ಕೆಲವಕ್ಕೆ ಉಳಿದವುಗಳಿಂದ ವ್ಯಾಖ್ಯೆಯನ್ನು ಕೊಡಬಹುದು. ಆದರೆ ಕೆಲವು ಮೂಲ ಭಾವನೆಗಳಿಗೆ ವ್ಯಾಖ್ಯೆಯನ್ನು ಕೊಡುವುದು ಅಸಾಧ್ಯ. ಉದಾಹರಣೆಗೆ ಬಿಂದುವಿಗೆ ಪರಿಮಾಣ ರಹಿತವಾದದ್ದೆಂದೂ ರೇಖೆಗೆ ಒಂದೇ ಒಂದು ಪರಿಮಾಣವುಳ್ಳದ್ದೆಂದೂ ವ್ಯಾಖ್ಯೆ ನೀಡಲು ಪ್ರಯತ್ನಿಸಲಾಗಿದೆ. ಈ ಹೇಳಿಕೆಗಳು ಸ್ಪಷ್ಟವಾಗಿಲ್ಲವೆಂಬುದು ನಮಗೆ ಸುಲಭವಾಗಿ ತಿಳಿಯುವುದು. ಸಮತಲದ ವ್ಯಾಖ್ಯೆಯೂ ಹೀಗೆಯೇ. ಮೊದಲು ಪರಿಮಾಣ ಎಂಬ ಪದವೇ ವ್ಯಾಖ್ಯೆಯನ್ನು ಅಪೇಕ್ಷಿಸುವುದು. ಆದ್ದರಿಂದ ನಾವು ಬಿಂದು, ರೇಖೆ ಮತ್ತು ಸಮತಲ ಇವುಗಳನ್ನು ವ್ಯಾಖ್ಯೆ ನೀಡಲಾಗದ ಇರುವ ಪದಗಳಾಗಿ ತೆಗೆದು ಕೊಳ್ಳುತ್ತೇವೆ. ಪ್ರತಿಯೊಂದು ರೇಖೆಯೂ ಬಿಂದುಗಳ ಗಣ ಮತ್ತು ಪ್ರತಿಯೊಂದು ಸಮತಲವೂ ಬಿಂದುಗಳ ಗಣ.

ಎಲ್ಲಾ ಬಿಂದುಗಳ ಅಥವಾ ಗಣಾಂಶಗಳ ಗಣವನ್ನು ಆಕಾಶ ಎಂದು ವಿವರಿಸಬಹುದು.

ಚಿತ್ರ 1.1 (ಎ)

ರೇಖೆಯನ್ನು ಇಲ್ಲಿ ತೋರಿಸಿರುವಂತೆ ಸೂಚಿಸಬಹುದು. ಇದಕ್ಕೆ ಅಂತ್ಯ ಬಿಂದುಗಳಿಲ್ಲ, ಎರಡೂ ಕಡೆಗೆ ರೇಖೆಯನ್ನು ಅನಂತವಾಗಿ ವೃದ್ಧಿಸಬಹುದು. ಇದರ ಚಿಹ್ನೆ $\overleftrightarrow{AB}$. ಕಿರಣ (Ray) ಎಂಬುದಕ್ಕೆ ಒಂದು ಅಂತ್ಯ ಬಿಂದು ಮಾತ್ರ ಇದೆ. ಇದರ ಚಿಹ್ನೆ $\overleftarrow{AB}$. ರೇಖಾಖಂಡವೊಂದಕ್ಕೆ ಎರಡೂ ಅಂತ್ಯ ಬಿಂದುಗಳಿವೆ. ಇದರ ಚಿಹ್ನೆ $\overline{AB}$.



ಚಿತ್ರ 1.1 (ಬಿ)

1.2 Axioms and postulates—

These are accepted or self-evident truths. No attempt is made to give a proof to these axioms or postulates. The difference between them is not clearly marked. Axioms are those accepted truths which have an appeal to our intuition looking as obvious. Postulates are accepted truths which are not so evident to our intuition.

The number of postulates to be accepted is kept at a minimum necessary for the development of the subject. The subject is developed logically basing the logic on these postulates. We arrive at conclusions by making use of these postulates and the conclusions that have been derived already.

Postulate 1: *Given any two different points, there is exactly one line which contains both of them.*

If A and B are different points, the line contained by them is $\overleftrightarrow{AB}$. A set of points is said to be collinear if there exists a line which contains all the points of the set. If the points A, B, C are collinear we say that $\overleftrightarrow{AB}$ passes through C or C lies on $\overleftrightarrow{AB}$.

1.3 Measurement of Distance—

Measurement of distance requires a unit. The length of any line segment is measured in terms of this unit. Let $\overleftrightarrow{AB}$ be a line. Choose a point O on it and represent it by the number 0. Represent another suitable point P on



the line by the number 1. Then we say that the segment $\overline{OP}$ has unit length and $OP=1$. We mark the numbers 2, 3,. . . . . .to the right of OP and to the left of 0 we mark the numbers —1, —2, —3. . . . . In doing so, we are indeed assuming one of the basic postulates.

1.2. ಸ್ವತಸ್ಸಿದ್ಧಾಂತಗಳು ಮತ್ತು ಸ್ವೀಕೃತ ಭಾವನೆಗಳು

ಇವುಗಳು ನಾವು ಸ್ವೀಕರಿಸಿದ ಅಥವಾ ಸ್ಪಷ್ಟವಾದ ಸತ್ಯಗಳು. ಇವುಗಳಿಗೆ ಸಾಧನೆಯನ್ನು ಕೊಡಲು ನಾವು ಪ್ರಯತ್ನಿಸುವುದಿಲ್ಲ. ಸ್ವತಸ್ಸಿದ್ಧಾಂತಗಳಿಗೂ ಸ್ವೀಕೃತ ಭಾವನೆಗಳಿಗೂ ಸ್ಪಷ್ಟವಾದ ಭೇದವೇನೂ ಇಲ್ಲ. ನಮ್ಮ ಅಂತರ್ಬೋಧೆಗೆ ಸಹಜವಾಗಿ ವೇದ್ಯವಾಗುವಂತಹ ಸ್ವೀಕೃತ ಸತ್ಯಗಳಿಗೆ ಸ್ವತಸ್ಸಿದ್ಧಾಂತಗಳೆಂದು ಹೆಸರು. ಅಂತರ್ಬೋಧೆಗೆ ಅಷ್ಟು ಸ್ಪಷ್ಟವಲ್ಲದೆ ಇರುವ ಸ್ವೀಕೃತ ಸತ್ಯಗಳಿಗೆ, ಸ್ವೀಕೃತ ಭಾವನೆಗಳೆಂದು ಹೆಸರು.

ವಿಷಯದ ಬೆಳವಣಿಗೆಗೆ ಅತ್ಯವಶ್ಯವೆನಿಸುವಷ್ಟು ಮಾತ್ರ ಸ್ವೀಕೃತ ಭಾವನೆಗಳನ್ನು ಆರಿಸಿಕೊಂಡು ವಿಷಯವನ್ನು ಈ ಭಾವನೆಗಳ ಮೇಲೆ ತರ್ಕಬದ್ಧವಾಗಿ ರಚಿಸಲಾಗುವುದು. ಈ ಸ್ವೀಕೃತ ಭಾವನೆಗಳನ್ನೂ, ಮೊದಲೇ ಪಡೆದಿರುವ ತೀರ್ಮಾನಗಳನ್ನೂ ಉಪಯೋಗಿಸಿಕೊಂಡು ಹೊಸ ತೀರ್ಮಾನಗಳನ್ನು ಪಡೆಯಲಾಗುವುದು.

ಸ್ವೀಕೃತ ಭಾವನೆ 1 : ಬೇರೆ ಬೇರೆ ಎರಡು ಬಿಂದುಗಳನ್ನು ಕೊಟ್ಟಾಗ ಇವೆರಡನ್ನೂ ಹೊಂದಿರುವಂತಹ ಒಂದೇ ಒಂದು ರೇಖೆ ಇರುವುದು.

A ಮತ್ತು B ಎಂಬುವು ಬೇರೆಯಾದ ಎರಡು ಬಿಂದುಗಳಾದಲ್ಲಿ ಅವುಗಳನ್ನು ಹೊಂದಿರುವ ರೇಖೆಯು $\overleftrightarrow{AB}$ ಆಗಿರುವುದು. ಬಿಂದುಗಳ ಗಣವೊಂದರ ಎಲ್ಲಾ ಬಿಂದುಗಳನ್ನೂ ಹೊಂದಿರುವ ರೇಖೆಯೊಂದಿದ್ದರೆ, ಆ ಬಿಂದುಗಳು ಏಕರೇಖಸ್ಥವಾಗಿವೆಯೆಂದು ಹೇಳುತ್ತೇವೆ. A, B, C ಗಳು ಏಕರೇಖಸ್ಥವಾಗಿದ್ದರೆ $\overleftrightarrow{AB}$ ಯು C ಯ ಮೂಲಕ ಹಾದು ಹೋಗುವುದು ಅಥವಾ C ಯು $\overleftrightarrow{AB}$ ಯ ಮೇಲಿದೆ ಎನುತ್ತೇವೆ.

1.3 ದೂರದ ಅಳತೆ

ದೂರದ ಅಳತೆಗೆ ಒಂದು ಮೂಲಮಾನವು ಬೇಕು. ಯಾವುದೇ ರೇಖಾಖಂಡದ ಉದ್ದವನ್ನು ಈ ಮೂಲಮಾನದಿಂದ ಅಳೆಯುತ್ತೇವೆ. AB ಯು ಒಂದು ರೇಖೆಯಾಗಿರಲಿ. ಅದರಲ್ಲಿ O ಎಂಬ ಬಿಂದುವೊಂದನ್ನು ಆರಿಸಿಕೊಂಡು ಅದನ್ನು 0 ಎಂಬ ಸಂಖ್ಯೆಯಿಂದ ಸೂಚಿಸಿ. ರೇಖೆಯ ಮೇಲೆ ಮತ್ತೊಂದು ಸೂಕ್ತವಾದ ಬಿಂದು Pಯನ್ನು 1 ಎಂಬ ಸಂಖ್ಯೆಯಿಂದ ಸೂಚಿಸಿ. ಈಗ ರೇಖಾಖಂಡ $\overline{OP}$ ಯು ಒಂದು ಮೂಲಮಾನ ಉದ್ದವಿದೆ ಎಂದು ಹೇಳುತ್ತೇವೆ ಮತ್ತು $OP = 1$ ಎಂದು ಸೂಚಿಸುತ್ತೇವೆ.



OPಯ ಬಲಭಾಗಕ್ಕೆ 2,3, ... ಮುಂತಾದ ಸಂಖ್ಯೆಗಳನ್ನೂ ಮತ್ತು O ಬಿಂದುವಿನ ಎಡಭಾಗಕ್ಕೆ —1, —2, —3 . . . ಮುಂತಾದ ಸಂಖ್ಯೆಗಳನ್ನೂ ಗುರುತಿಸುತ್ತೇವೆ. ಹೀಗೆ ಮಾಡುವಾಗ ನಿಜವಾಗಿಯೂ ನಾವು ಒಂದು ಮೂಲ ಸ್ವೀಕೃತ ಭಾವನೆಯನ್ನು ಒಪ್ಪಿದಂತಾಗಿದೆ.

Postulate 2 : *There exists a one-to-one correspondence between points of a line and the set of all real numbers.*

In other words, with every point on a given line we associate a real number and conversely, every real number corresponds to a point on the line. We call this number as the coordinate of the point. If A and B are any two points on the line with coordinates a and b such that $a<b$ then the length of the segment $\overline{AB}$ is given by $AB=(b-a)$. For example, in the above figure, the length of segment $PQ=1-(-3)=4$ units.

We note that the distance between two points on the line (or the length of the segment) is a positive number. PQ is the same as QP. The unit that we choose may be centimeters, meters, feet, inches, or any other that we may like to choose.

1.4 Betweenness—



Fig. 1.3

Definition :—

If A, B, C are three points on a line, then B is between A and C if $AB+BC=AC$.

Postulate 3 : If three distinct points lie on a line, one of them lies between the other two.

Theorem :

If A, B, C are points on a line with a, b, c as co-ordinates such that $a<b<c$ then B lies between A and C

Proof :— Since $a<b$, $AB=b-a$

Since $b<c$, $BC=c-b$

Since $a<c$ $AC=c-a$

$$AB+BC=(b-a)+(c-b)=c-a=AC$$

$\therefore$ by definition B lies between A and C

ಸ್ವೀಕೃತಭಾವನೆ 2 : ಒಂದು ರೇಖೆಯ ಬಿಂದುಗಳಿಗೂ ಮತ್ತು ಎಲ್ಲಾ ವಾಸ್ತವಿಕ ಸಂಖ್ಯೆಗಳ ಗಣಕ್ಕೂ ಒಂದು-ಒಂದು ಸಹಗಾಮಿತ ಇದೆ.

ಈ ಉಕ್ತಿಯನ್ನು ಕೆಳಕಂಡಂತೆ ವಿವರಿಸಬಹುದು. ದತ್ತ ರೇಖೆಯ ಪ್ರತಿಯೊಂದು ಬಿಂದುವಿಗೂ ಸಹ ಒಂದು ವಾಸ್ತವಿಕ ಸಂಖ್ಯೆಯನ್ನು ನಾವು ಹೊಂದಿಸಬಹುದು ಮತ್ತು ವಿಲೋಮವಾಗಿ ಪ್ರತಿಯೊಂದು ವಾಸ್ತವಿಕ ಸಂಖ್ಯೆಗೂ ಸಹಗಾಮಿಯಾಗಿ ರೇಖೆಯ ಬಿಂದುವೊಂದಿರುವುದು. A ಮತ್ತು Bಗಳು a ಮತ್ತು b ಎಂಬ ಸಂಖ್ಯೆಗಳಿಂದ ಸೂಚಿಸಿರುವ ಎರಡುಬಿಂದುಗಳಾಗಿರಲಿ. $a<b$ ಆಗಿದ್ದಲ್ಲಿ ರೇಖಾಖಂಡ ABಯ ಉದ್ದವು, $AB=(b-a)$ ಆಗಿರುವುದು. ಉದಾಹರಣೆಗೆ ಮೇಲಿನ ಚಿತ್ರದಲ್ಲಿ ರೇಖಾ ಖಂಡ PQವಿನ ಉದ್ದವು $PQ= 1-(-3)=4$ ಮೂಲಮಾನಗಳು.

ರೇಖೆಯ ಮೇಲಿನ ಎರಡು ಬಿಂದುಗಳಿಗೆ ಇರುವ ದೂರವು (ಅಥವಾ ರೇಖಾ ಖಂಡದ ಉದ್ದವು) ಒಂದು ಧನ ಸಂಖ್ಯೆಯಾಗಿರುವುದು ಎಂಬುದನ್ನು ನಾವು ಇಲ್ಲಿ ಗಮನಿಸುತ್ತೇವೆ. ನಾವು ಆರಿಸುವ ಮೂಲಮಾನವು ಸೆಂಟಿಮೀಟರ್, ಮೀಟರ್, ಅಡಿ, ಇಂಚು, ಅಥವಾ ಬೇರೆ ಯಾವುದಾದರೂ ಆಗಿರಬಹುದು.

1.4 ಅಂತರತೆ



ಚಿತ್ರ 1.3

A, B, C ಎಂಬುವು ರೇಖೆಯೊಂದರ ಮೇಲಿನ ಮೂರು ಬಿಂದುಗಳಾಗಿರಲಿ. $AB+BC=AC$ ಆಗಿದ್ದರೆ B ಯು A ಮತ್ತು C ಗಳ ನಡುವೆ ಇದೆ ಎಂದು ಹೇಳುತ್ತೇವೆ.

ಸ್ವೀಕೃತ ಭಾವನೆ 3 : ಮೂರು ಬಿಂದುಗಳು ಏಕ ರೇಖಸ್ಥವಾಗಿದ್ದರೆ, ಅವುಗಳಲ್ಲಿ ಒಂದು ಉಳಿದೆರಡರ ನಡುವೆ ಇರುವುದು.

ಪ್ರಮೇಯ : ರೇಖೆಯೊಂದರ ಮೇಲೆ A, B, C ಎಂಬುವುಗಳು a, b, c, ನಿರ್ದೇಶಕಗಳಿರುವ ಬಿಂದುಗಳಾಗಿರಲಿ. $a<b<c$ ಆಗಿದ್ದರೆ, Bಯು A ಮತ್ತು Cಗಳ ನಡುವೆ ಇರುವುದು.

ಸಾಧನೆ : $a<b$ ಆಗಿರುವುದರಿಂದ $AB=(b-a)$

$b<c$ ಆಗಿರುವುದರಿಂದ $BC=(c-b)$

$a<c$ ಆಗಿರುವುದರಿಂದ $AC=(c-a)$

$$AB+BC=(b-a) + (c-b) = (c-a) = AC.$$

ಆದ್ದರಿಂದ Bಯು A ಮತ್ತು Cಗಳ ನಡುವೆ ಇರುವುದು.

Definition :

A point B is said to be the mid-point of a segment AC if B is between A and C and $AB = BC$.

Theorem :

Every segment has exactly one mid-point.

Suppose that B is the mid-point of AC,

Fig. 1.4

then $AB + BC = AC$

also $AB = BC$

Hence we have $2AB = AC$ or $AB = 1/2\ AC$

By postulate 2 we see that there is exactly one such point. B is said to bisect the segment AC.

1.5 Planes—

A plane is specified by the following postulates :

Postulate 4: Given any three non-collinear points, there is exactly one plane containing them.

Postulate 5: Given two distinct points P and Q on a plane, then the line $\overleftrightarrow{PQ}$ containing these points lies in the same plane.

Postulate 6: If two different planes intersect, they intersect in a line.

Theorem :

If two lines intersect, they intersect in only one point.

Proof :—If two lines l and m intersect in two points P and Q, then each of P and Q belong to both l and m. But by postulate 1, there is only one line containing the two points. This contradicts our assumption. Hence the theorem.

ವ್ಯಾಖೆ : B ಬಿಂದುವು A ಮತ್ತು Cಗಳ ನಡುವೆ ಇದ್ದು $AB=BC$ ಆಗಿದ್ದರೆ Bಯನ್ನು ACಯ ಮಧ್ಯ ಬಿಂದುವೆಂದು ಕರೆಯುತ್ತೇವೆ.

ಪ್ರಮೇಯ : ಪ್ರತಿಯೊಂದು ರೇಖಾಖಂಡಕ್ಕೂ ಒಂದೇ ಒಂದು ಮಧ್ಯ ಬಿಂದುವಿದೆ.

ಸಾಧನೆ: B ಯು ACಯು ಮಧ್ಯಬಿಂದುವಾಗಿರಲಿ.



ಚಿತ್ರ 1.4

ಈಗ $AB+BC=AC$

ಮತ್ತು $AB=BC$

ಆದ್ದರಿಂದ $2AB=AC$ ಅಥವಾ $AB=\frac{1}{2}AC$. 2 ನೆಯ ಸ್ವೀಕೃತಭಾವನೆಯಿಂದ ಇಂತಹ ಬಿಂದು ಒಂದೇ ಒಂದು ಇರುವುದು, ರೇಖಾಖಂಡ ACಯನು Bಯು ಅರ್ಧಿಸುವುದೆಂದು ಹೇಳುತ್ತೇವೆ.

1.5 ಸಮತಲಗಳು

ಸಮತಲವನ್ನು ಈ ಕೆಳಗಿನ ಭಾವನೆಗಳಿಂದ ನಿಶ್ಚಿತಗೊಳಿಸಲಾಗುವುದು.

ಸ್ವೀಕೃತ ಭಾವನೆ 4 : ಏಕರೇಖಸ್ಥವಲ್ಲದ ಮೂರು ಬಿಂದುಗಳು ದತ್ತವಾದಾಗ ಅವುಗಳನ್ನು ಹೊಂದಿರುವಂತಹ ಒಂದೇ ಒಂದು ಸಮತಲ ಇರುವುದು,

ಸ್ವೀಕೃತ ಭಾವನೆ 5 : ಸಮತಲ ಒಂದರಮೇಲೆ P, Q ಎಂಬ ಎರಡು ಪ್ರತ್ಯೇಕ ಬಿಂದುಗಳು ದತ್ತವಾದಾಗ ಈ ಬಿಂದುಗಳನ್ನು ಹೊಂದಿರುವ ರೇಖೆ $\overleftrightarrow{PQ}$ ಅದೇ ಸಮತಲದಲ್ಲಿರುವುದು.

ಸ್ವೀಕೃತ ಭಾವನೆ 6 : ಎರಡು ಸಮತಲಗಳು ಛೇದಿಸಿದರೆ, ಅವುಗಳ ಛೇದನವು ಒಂದು ಸರಳ ರೇಖೆಯಾಗಿರುವುದು.

ಪ್ರಮೇಯ: ಎರಡು ಸರಳರೇಖೆಗಳು ಛೇದಿಸಿದರೆ, ಅವುಗಳ ಛೇದನವು ಒಂದೇ ಒಂದು ಬಿಂದುವಾಗಿರುವುದು.

ಸಾಧನೆ: ಪ್ರಮೇಯಕ್ಕೆ ವಿರುದ್ಧವಾಗಿ l ಮತ್ತು m ಎಂಬ ರೇಖೆಗಳು P ಮತ್ತು Q ಎಂಬ ಎರಡು ಬಿಂದುಗಳಲ್ಲಿ ಛೇದಿಸಲಿ. ಈಗ P ಮತ್ತು Q ಗಳೆರಡೂ, l ಮತ್ತು m ಗಳಿಗೆ ಸೇರಿರುತ್ತವೆ. ಆದರೆ 1ನೆಯ ಸ್ವೀಕೃತ ಭಾವನೆಯಿಂದ ಈ ಎರಡು ಬಿಂದುಗಳನ್ನು ಹೊಂದಿರುವ ಒಂದೇ ಒಂದು ರೇಖೆ ಇರುವುದು. ಇದು ದತ್ತಾಂಶವನ್ನು ವಿರೋಧಿಸುವುದರಿಂದ ಪ್ರಮೇಯುವು ಸಾಧಿತವಾಗುವುದು.

Theorem :

If a line and a plane not containing it, intersect, their intersection is a single point.

For, if the intersection consists of two points of the line then by postulates, the line must entirely lie in the plane.

Theorem :

A line and a point not on the line, determine one and only one plane.



Fig. 1·5

Take two points P and Q on the given line l. These two points determine the line l. Now the three non-collinear points P, Q, R determine a plane.

Theorem :

Given two intersecting lines, there is exactly one plane containing them. Let the two lines have A as their intersection. Let B and C be points lying on l and m. Now the three **non**-collinear points determine a plane.



Fig. 1.6

1.6 The Measurement of an angle

Definition :

An angle is defined as the union of two rays having the same end point. The union of $\overrightarrow{AB}$ and $\overrightarrow{AC}$ having the

ಪ್ರಮೇಯ: ಒಂದು ರೇಖೆ ಮತ್ತು ಅದನ್ನು ಹೊಂದದೆ ಇರುವ ಒಂದು ಸಮತಲ, ಇವೆರಡೂ ಛೇದಿಸಿದರೆ ಅವುಗಳ ಛೇದನವು ಒಂದೇ ಒಂದು ಬಿಂದುವಾಗಿರುವುದು.

ಇದಕ್ಕೆ ಕಾರಣ, ಛೇದನದಲ್ಲಿ ರೇಖೆಯ ಎರಡು ಬಿಂದುಗಳಿದ್ದರೆ, ಆಗ 5 ನೆಯ ಸ್ವೀಕೃತ ಭಾವನೆಯಿಂದ ರೇಖೆಯು ಪೂರ್ಣವಾಗಿ ಸಮತಲದಲ್ಲಿಯೇ ಇರಬೇಕಾಗುವುದು.

ಪ್ರಮೇಯ: ಒಂದು ರೇಖೆಯೂ ಮತ್ತು ರೇಖೆಯ ಮೇಲಿಲ್ಲದೆ ಇರುವ ಒಂದು ಬಿಂದುವೂ ಸೇರಿ ಒಂದೇ ಒಂದು ಸಮತಲವನ್ನು ನಿಶ್ಚಿತಗೊಳಿಸುತ್ತವೆ.



ಚಿತ್ರ 1.5

ದತ್ತರೇಖೆ l ಮೇಲೆ P ಮತ್ತು Q ಎಂಬ ಎರಡು ಬಿಂದುಗಳನ್ನು ತೆಗೆದುಕೊಳ್ಳಿ. ಈ ಎರಡು ಬಿಂದುಗಳು l ರೇಖೆಯನ್ನು ನಿಶ್ಚಿತಗೊಳಿಸುತ್ತವೆ. ಈಗ ಏಕರೇಖಸ್ಥವಲ್ಲದ P, Q, R, ಮೂರು ಬಿಂದುಗಳು ಒಂದೇ ಒಂದು ಸಮತಲವನ್ನು ನಿಶ್ಚಿತಗೊಳಿಸುತ್ತವೆ.

ಪ್ರಮೇಯ: ಪರಸ್ಪರ ಛೇದಿಸುವ ಎರಡು ರೇಖೆಗಳು ದತ್ತವಾದಾಗ ಅವುಗಳನ್ನು ಹೊಂದಿರುವ ಒಂದೇ ಒಂದು ಸಮತಲವಿರುವುದು.



ಚಿತ್ರ 1.6

A ಎಂಬುದು ಈ ರೇಖೆಗಳ ಛೇದನವಾಗಿರಲಿ. B ಮತ್ತು C ಗಳು l ಮತ್ತು m ಗಳ ಮೇಲಿರುವ ಬಿಂದುಗಳಾಗಿರಲಿ. ಈಗ ಏಕರೇಖಸ್ಥವಲ್ಲದ ಈ ಮೂರು ಬಿಂದುಗಳು ಒಂದು ಸಮತಲವನ್ನು ನಿಶ್ಚಿತಗೊಳಿಸುತ್ತವೆ.

1·6 ಕೋನದ ಅಳತೆ

ಒಂದೇ ಅಂತ್ಯಬಿಂದುವಿರುವಂತಹ ಎರಡು ಕಿರಣಗಳ ಸಂಯೋಜನೆಗೆ ಕೋನವೆಂದು ಹೆಸರು. $\overrightarrow{AB}$ ಮತ್ತು $\overrightarrow{AC}$ ಕಿರಣಗಳಿಗೆ A ಎಂಬುದು ಸಾಮಾನ್ಯ ಅಂತ್ಯ

same end point A is the angle denoted by $\angle BAC$ or $\angle CAB$. Sometimes it is also written as $\angle A$



Fig. 1·7

Postulate 7: To every angle there corresponds a number between 0 and 180. It is called the measure of the angle.

The measure of an angle is represented in degrees. Since the measure of an angle is a positive real number, angles may be added and subtracted in the same way as real numbers.



Fig. 1.8

For example, if $\angle BAC = 40°$
and $\angle CAD = 60°$
then $\angle BAC + \angle CAD = 100°$

The ray $\overrightarrow{AC}$ is said to be between $\overrightarrow{AB}$ and $\overrightarrow{AD}$ if C lies to the same side of AB as D and C lies to the same side of AD as B.

ಬಿಂದು. ಇವುಗಳ ಸಂಯೋಜನೆಯಿಂದಾದ ಕೋನವನ್ನು $\angle BAC$ ಅಥವಾ $\angle CAB$ ಅಥವಾ $\angle A$ ಎಂದು ಬರೆಯುತ್ತೇವೆ.



ಚಿತ್ರ 1.7

<u>ಸ್ವೀಕೃತ ಭಾವನೆ 7 :</u> ಪ್ರತಿಯೊಂದು ಕೋನಕ್ಕೂ ಸಹಗಾಮಿಯಾಗಿ 0 ಮತ್ತು 180 ಇವುಗಳ ನಡುವಿನ ಒಂದು ಸಂಖ್ಯೆ ಇದೆ. ಈ ಸಂಖ್ಯೆ ಆ ಕೋನವನ್ನು ಅಳತೆ ಮಾಡುವುದು. ಅದ್ದರಿಂದ ಇದು ಆ ಕೋನದ ಅಳತೆ.

ಕೋನದ ಅಳತೆಯನ್ನು ಡಿಗ್ರಿಗಳಲ್ಲಿ ನಿರೂಪಿಸುತ್ತೇವೆ. ಕೋನದ ಅಳತೆಯು ಧನ ವಾಸ್ತವಿಕ ಸಂಖ್ಯೆಯಾದುದರಿಂದ ಕೋನಗಳನ್ನು ವಾಸ್ತವಿಕ ಸಂಖ್ಯೆಗಳ ರೀತಿಯಲ್ಲಿ ಕೂಡಬಹುದು ಮತ್ತು ಕಳೆಯಬಹುದು.



ಚಿತ್ರ 1.8

ಉದಾಹರಣೆಗೆ $\angle BAC = 40^\circ$ ಮತ್ತು $\angle CAD = 60^\circ$ ಆದರೆ

$$\angle BAC + \angle CAD = 100^\circ$$

C ಮತ್ತು D ಗಳು AB ಯ ಒಂದೇ ಪಾರ್ಶ್ವದಲ್ಲಿಯೂ ಮತ್ತು C ಮತ್ತು B ಗಳು AD ಯ ಒಂದೇ ಪಾರ್ಶ್ವದಲ್ಲಿರುವಂತೆಯೂ ಇದ್ದರೆ, $\overrightarrow{AC}$ ಯು $\overrightarrow{AB}$ $\overrightarrow{AD}$ ಗಳ ನಡುವೆ ಇದೆ ಎನ್ನುತ್ತೇವೆ.

We have :

(i) $\angle BAD + \angle CAD = \angle BAC$
(ii) $\angle BAC = \angle BAD - \angle CAD$
(iii) $\angle CAD = \angle BAD - \angle BAC$

Two rays $\overrightarrow{AB}$ and $\overrightarrow{AC}$ are said to form an opposite pair if $\angle BAC = 180°$.

Definition : Two angles are said to be supplementary if the sum of their measures is 180° and complementary if the sum of their measure is 90°.

Example : The supplement of an angle of measure 50° is an angle of measure 130°. The complement is an angle of measure 40°.



Fig. 1.9

Definition: If $\overrightarrow{AB}$ and $\overrightarrow{AC}$ are opposite pairs and $\overrightarrow{AD}$ another ray, then the angles $\angle BAD$ and $\angle DAC$ are said to form a linear pair.

The sum of the measures of a linear pair of angles is 180°. The angles of a linear pair are supplementary.

Definition: If the two angles of a linear pair have the same measure, then each is said to be right angle.

Note :—We have proved that there is only one mid-point for a line segment. Similarly, there is only one ray bisecting a given angle. The measure of a right angle is 90°. Two lines are said to be perpendicular if they

ಕೊಟ್ಟಿರುವ ಚಿತ್ರದಲ್ಲಿ

(i) $\angle BAD + \angle CAD = \angle BAC$

(ii) $\angle BAC = \angle BAD - \angle CAD$

(iii) $\angle CAD = \angle BAD - \angle BAC$

$\angle BAC = 180^\circ$ ಆದರೆ, AB ಮತ್ತು AC ಗಳು ವಿರುದ್ಧವಾಗಿವೆ ಅಥವಾ ಎದುರು ಬದುರಾಗಿವೆ ಎನ್ನುತ್ತೇವೆ.

ವ್ಯಾಖ್ಯೆ : ಎರಡುಕೋನಗಳ ಅಳತೆಗಳ ಮೊತ್ತವು 180° ಆದರೆ ಆ ಎರಡು ಕೋನಗಳು ಒಂದಕ್ಕೊಂದು ಸರಳಕೋನಪೂರಕವೆಂದೂ, 90° ಆದರೆ ಅವು ಒಂದಕ್ಕೊಂದು ಸಮಕೋನಪೂರಕವೆಂದೂ ಕರೆಯುತ್ತೇವೆ.

ಉದಾಹರಣೆಗೆ: 50° ಅಳತೆ ಇರುವ ಕೋನದ ಸರಳಕೋನ ಪೂರಕವು 130° ಅಳತೆ ಇರುವ ಒಂದು ಕೋನ. ಅದರ ಸಮಕೋನ ಪೂರಕವು 40° ಅಳತೆಯಿರುವ ಒಂದು ಕೋನ.



ಚಿತ್ರ 1.9

$\overrightarrow{AB}$ ಮತ್ತು $\overrightarrow{AC}$ ಗಳು ವಿರುದ್ಧವಾಗಿದ್ದು $\overrightarrow{AD}$ ಯು ಮತ್ತೊಂದು ಕಿರಣವಾದರೆ, $\angle BAD$ ಮತ್ತು $\angle DAC$ ಗಳಿಗೆ ಒಂದು ಜತೆ ಪಂಕ್ತೀಯ ಕೋನಗಳೆಂದು ಹೆಸರು. ಒಂದು ಜತೆ ಪಂಕ್ತೀಯ ಕೋನಗಳಲ್ಲಿ, ಎರಡೂ ಕೋನಗಳ ಅಳತೆಗಳು ಸಮವಾಗಿದ್ದರೆ, ಪ್ರತಿಯೊಂದಕ್ಕೂ ಸಮಕೋನವೆಂದು ಹೆಸರು.

ಸೂಚನೆ: ರೇಖಾಖಂಡಕ್ಕೆ ಒಂದೇ ಒಂದು ಮಧ್ಯಬಿಂದುವಿದೆಯೆಂದು ನಾವು ಸಾಧಿಸಿದ್ದೇವೆ. ಹೀಗೆಯೇ ದತ್ತಕೋನವೊಂದನ್ನು ಅರ್ಧಿಸುವ ಒಂದೇ ಒಂದು ಕಿರಣವಿರುವುದು. ಸಮಕೋನದ ಅಳತೆಯು 90° ಇರುವುದು. ಎರಡು ರೇಖೆಗಳು ಒಂದು ಸಮಕೋನವನ್ನು ಹೊಂದಿದ್ದರೆ, ಅವು ಪರಸ್ಪರ ಲಂಬವಾಗಿವೆ ಎಂದು ಹೇಳುತ್ತೇವೆ.

contain a right angle. We also say that $\overleftrightarrow{AB}$ is perpendicular to $\overrightarrow{AC}$ or the segment $\overline{AB}$ is perpendicular to segment $\overline{AC}$



Fig 1.10

1.7. Definition of a triangle—

If A, B, C are any three non-collinear points, then the union of the segments $\overline{AB}$, $\overline{BC}$ and $\overline{AC}$ is called a triangle. It is denoted by $\triangle ABC$. The segments $\overline{AB}$, $\overline{BC}$, and $\overline{AC}$ are called its sides ; and A, B, C are called its vertices.

The triangle determines three angles :

$$\angle BAC, \quad \angle BCA \text{ and } \angle ABC.$$

$\angle BAC$ is the angle formed by the rays $\overrightarrow{AB}$ and $\overrightarrow{AC}$. The sides of an angle are rays and the sides of a triangle are segments. So the triangle determines three angles while it does not actually contain them.



Fig. 1.11

$\overrightarrow{AB}$ ಯು $\overrightarrow{AC}$ ಗೆ ಲಂಬವಾಗಿದೆಯೆಂದೂ ಅಥವಾ ರೇಖಾಖಂಡ $\overline{AB}$ ಯು ರೇಖಾ ಖಂಡ $\overline{AC}$ಗೆಲಬವಾಗಿದೆಯೆಂದೂ ಹೇಳುತ್ತೇವೆ.



ಚಿತ್ರ 1.10

1·7 ತ್ರಿಭುಜದ ವ್ಯಾಖ್ಯೆ

A, B, Cಗಳು ಏಕರೇಖಸ್ಥವಲ್ಲದ ಯಾವುದಾದರೂ ಮೂರು ಬಿಂದುಗಳಾದರೆ, $\overline{AB}$, $\overline{BC}$ ಮತ್ತು $\overline{AC}$ ರೇಖಾಖಂಡಗಳ ಸಂಯೋಜನೆಗೆ ಒಂದು ತ್ರಿಭುಜವೆಂದು ಹೆಸರು. ಇದನ್ನು $\triangle ABC$ ಎಂಬುದಾಗಿ ಸೂಚಿಸುತ್ತೇವೆ. $\overline{AB}$, $\overline{BC}$ ಮತ್ತು $\overline{AC}$ ರೇಖಾಖಂಡಗಳಿಗೆ ತ್ರಿಭುಜದ ಬಾಹುಗಳೆಂದೂ A, B, C ಗಳಿಗೆ ತ್ರಿಭುಜದ ಶೃಂಗಗಳೆಂದೂ ಹೆಸರು. ತ್ರಿಭುಜವು ಮೂರು ಕೋನಗಳನ್ನು ನಿರ್ಧರಿಸುವುದು: $\angle BCA$, $\angle BAC$ ಮತ್ತು $\angle ABC$.

$\angle BAC$ ಯು $\overrightarrow{AB}$ ಮತ್ತು $\overrightarrow{AC}$ ಕಿರಣಗಳಿಂದಾದ ಕೋನ. ಕೋನದ ಬಾಹುಗಳು ಕಿರಣಗಳು, ತ್ರಿಭುಜದ ಬಾಹುಗಳು ರೇಖಾಖಂಡಗಳು. ಆದ್ದರಿಂದ ಒಂದು ತ್ರಿಭುಜವು ಮೂರು ಕೋನಗಳನ್ನು ನಿರ್ಧರಿಸುತ್ತದೆ. ಆದರೆ ಅವುಗಳನ್ನು ವಾಸ್ತವವಾಗಿ ಹೊಂದಿರುವುದಿಲ್ಲ.

ಚಿತ್ರ 1·11

1.8 Polygon—



Fig. 1.12

ABCDEF is a polygon while the other two figures are not polygons.

A polygon is the union of a number of line segments in a plane such that the beginning and the end points coincide, and no two segments intersect except at their end points. The segments are called sides. A triangle is a special case of a polygon. A polygon with n sides has n vertices, and determines n angles.

1·8 ಬಹು ಭುಜಗಳು



ಚಿತ್ರ 1.12

ಚಿತ್ರದಲ್ಲಿ $ABCDEF$ ಎಂಬುದು ಬಹುಭುಜ, ಆದರೆ ಉಳಿದೆರಡು ಚಿತ್ರಗಳೂ ಬಹುಭುಜಗಳಲ್ಲ.

ಮೊದಲನೆಯ ಮತ್ತು ಕೊನೆಯ ಬಿಂದುಗಳು ಒಂದೇ ಆಗಿರುವಂತಹ ಅನೇಕ ರೇಖಾಖಂಡಗಳ ಸಂಯೋಜನೆಯು ಒಂದು ಬಹುಭುಜ. ಇದರಲ್ಲಿ ಯಾವುದೇ ಎರಡು ರೇಖಾಖಂಡಗಳು ಅವುಗಳ ಅಂತ್ಯಬಿಂದುಗಳಲ್ಲಿ ವಿನಾ ಬೇರೆಲ್ಲಿಯೂ ಛೇದಿಸುವುದಿಲ್ಲ. ಈ ರೇಖಾಖಂಡಗಳಿಗೆ ಬಾಹುಗಳೆಂದು ಹೆಸರು. ತ್ರಿಭುಜವೂ ಸಹ ಮೂರು ಬಾಹುಗಳಿರುವ ಒಂದು ಬಹುಭುಜ. n ಬಾಹುಗಳಿರುವ ಬಹುಭುಜಕ್ಕೆ n ಶೃಂಗಗಳಿರುತ್ತವೆ ಮತ್ತು ಅದು n ಕೋನಗಳನ್ನು ನಿರ್ಧರಿಸುತ್ತದೆ.

1.9 Parallel lines—

Fig. 1.13

Definition : Two different lines lying in the same plane are said to be parallel if they have no point in common.

$\overleftrightarrow{AB}$ and CD are parallel if $\overleftrightarrow{AB} \cap \overleftrightarrow{CD} = \phi$

We also say that the segment AB is parallel to segment CD. We denote them by writing $\overleftrightarrow{AB} \parallel \overleftrightarrow{CD}$ and $\overline{AB} \parallel \overline{CD}$

Given a line $\overleftrightarrow{AB}$, the existence of a line parallel to $\overleftrightarrow{AB}$ is assured by the following postulate.

Postulate 8: Given a line and a point not on the line, there is one and only one line through the given point parallel to the given line.

This postulate is often referred to as 'Euclid's fifth postulate' or the parallel postulate.



Fig. 1.14

1·9 ಸಮಾನಾಂತರ ರೇಖೆಗಳು

ಒಂದೇ ಸಮತಲದಲ್ಲಿರುವ ಎರಡು ರೇಖೆಗಳಿಗೆ ಸಾಮಾನ್ಯ ಬಿಂದುವೊಂದಿಲ್ಲದಿದ ರೆ, ಅಂತಹ ರೇಖೆಗಳಿಗೆ ಸಮಾನಾಂತರ ರೇಖೆಗಳೆಂದು ಹೆಸರು.



ಚಿತ್ರ 1.13

$\overleftrightarrow{AB} \cap \overleftrightarrow{CD} = \phi$ ಆದರೆ, $\overleftrightarrow{AB}$ ಮತ್ತು $\overleftrightarrow{CD}$ ಗಳು ಸಮಾನಾಂತರವಾಗಿವೆ. $\overline{AB}$ ರೇಖಾಖಂಡವು $\overline{CD}$ ರೇಖಾಖಂಡಕ್ಕೆ ಸಮಾನಾಂತರ ವಾಗಿದೆ ಎಂಬುದಾಗಿಯೂ ಹೇಳುತ್ತೇವೆ. ಇದನ್ನು $\overleftrightarrow{AB} \parallel \overleftrightarrow{CD}$ ಅಥವಾ $\overline{AB} \parallel \overline{CD}$ ಎಂದು ಸೂಚಿಸುತ್ತೇವೆ.

AB ರೇಖೆಯನ್ನು ಕೊಟ್ಟಾಗ ಅದಕ್ಕೆ ಸಮಾನಾಂತರವಾಗಿರುವ ರೇಖೆಯೊಂದಿರು ವುದನ್ನು ಈ ಕೆಳಗಿನ ಸ್ವೀಕೃತ ಭಾವನೆಯು ದೃಢಪಡಿಸುವುದು.

<u>ಸ್ವೀಕೃತ ಭಾವನೆ 8</u>:—ಒಂದು ರೇಖೆಯನ್ನೂ, ರೇಖೆಯ ಮೇಲಿಲ್ಲದ ಒಂದು ಬಿಂದುವನ್ನೂ ಕೊಟ್ಟಾಗ, ರೇಖೆಗೆ ಸಮಾನಾಂತರವಾಗಿ ಬಿಂದುವಿನ ಮೂಲಕ ಹಾದು ಹೋಗುವಂತಹ ಒಂದೇ ಒಂದು ರೇಖೆ ಇರುವುದು. ಇದನ್ನು ಯೂಕ್ಲಿಡನ 5ನೆಯ ಸ್ವೀಕೃತ ಭಾವನೆ ಎಂದೂ ಹೇಳುವುದುಂಟು.



ಚಿತ್ರ 1.14

Let l and m be two parallel lines. The line t in the figure is called a transversal. The angles 2, 6 and 3, 7 are called alternate angles, and the angles 1,3 ; 2,4 ; 5, 7 ; 6,8 are called corresponding angles.

Theorem :

Given two lines and a transversal, the two lines are parallel if the alternate angles are equal.

Suppose, the lines are not parallel, let them intersect in C. Then ABC is a triangle and the exterior angle (1) is greater than the interior opposite angle (2). But this contradicts the hypothesis. Hence the theorem.



Fig. 1.15

We merely, state the converse of this theorem viz., 'If the alternate angles are equal then the two lines are parallel'.

John Playfair a British Mathematician in 1858 stated the parallel postulate in a different form :—"Two intersecting lines cannot both be parallel to the same straight line". We easily see that this is equivalent to Postulate 8.

Exercises 1.1

1 If l and m are two intersecting lines, what is $l \cap m$?

2 Let A be the set of numbers $\{2, 3, 4, 6, 7, 8\}$ and B be $\{1, 2, 4, 5, 6, 9\}$. (*a*) State whether the following statements are true or false :

(i) $8 \in A$ (ii) $4 \notin A$ (iii) $9 \in B$ (iv) $5 \in A \cup B$, (v) 4 belongs to both A and B

l ಮತ್ತು m ಗಳು ಎರಡು ಸಮಾನಾಂತರ ರೇಖೆಗಳಾಗಿರಲಿ. ಚಿತ್ರದಲ್ಲಿರುವ ರೇಖೆ t ಎಂಬುದನ್ನು ಛೇದಕ ರೇಖೆ ಎನ್ನುತ್ತೇವೆ. 2, 6 ಮತ್ತು 3, 7 ಕೋನಗಳಿಗೆ ಪರ್ಯಾಯ ಕೋನಗಳೆಂದೂ 1,3 ; 2,4 ; 5,7 ; 6,8 ; ಕೋನಗಳಿಗೆ ಸಹಗಾಮಿ ಕೋನಗಳೆಂದೂ ಹೆಸರು.

ಪ್ರಮೇಯ: ಎರಡು ರೇಖೆಗಳನ್ನೂ ಮತ್ತು ಒಂದು ಛೇದಕ ರೇಖೆಯನ್ನೂ ಕೊಟ್ಟಾಗ, ಪರ್ಯಾಯಕೋನಗಳು ಸಮನಾಗಿದ್ದರೆ, ಆ ರೇಖೆಗಳು ಸಮಾನಾಂತರವಾಗಿರುವುವು.



ಚಿತ್ರ 1.15

ಸಾಧನೆ: ರೇಖೆಗಳು ಸಮಾನಾಂತರವಾಗಿಲ್ಲದಿದ್ದರೆ ಅವುಗಳು C ಯಲ್ಲಿ ಛೇದಿಸಲಿ. ಈಗ ತ್ರಿಭುಜ ABC ಯಲ್ಲಿ, ಹೊರಕೋನ (1), ಅಂತಸ್ಥಾಭಿಮುಖ ಕೋನ (2) ಕ್ಕಿಂತ ಗುರುತರವಾಗಿರುವುದು. ಇದು ದತ್ತಾಂಶವನ್ನು ವಿರೋಧಿಸುವುದರಿಂದ ಪ್ರಮೇಯವು ಸಾಧಿತವಾಗುವುದು. ರೇಖೆಗಳು ಸಮಾನಾಂತರವಾಗಿದ್ದರೆ ಪರ್ಯಾಯ ಕೋನಗಳು ಸಮವೆಂಬ ಮೇಲಣ ಪ್ರಮೇಯದ ವಿಲೋಮವನ್ನು ಇಲ್ಲಿ ನಿರೂಪಣೆ ಮಾಡುತ್ತೇವೆ. ಜಾನ್ ಪ್ಲೇಫರ್ ಎಂಬ ಬ್ರಿಟನ್ನಿನ ಗಣಿತಶಾಸ್ತ್ರಜ್ಞನು 1858ರಲ್ಲಿ ಸಮಾನಾಂತರ ರೇಖೆಗಳ ಸ್ವೀಕೃತ ಭಾವನೆಯನ್ನು ಬೇರೆ ರೀತಿಯಲ್ಲಿ ನಿರೂಪಿಸಿದನು. "ಪರಸ್ಪರ ಛೇದಿಸುವಂತಹ ಎರಡು ರೇಖೆಗಳೂ ಮತ್ತೊಂದು ಸರಳ ರೇಖೆಗೆ ಸಮಾನಾಂತರವಾಗಿರಲು ಸಾಧ್ಯವಿಲ್ಲ." ಇದು 8ನೆಯ ಸ್ವೀಕೃತ ಭಾವನೆಗೆ ಸಮಾನವೆಂಬುದು ಸುಸ್ಪಷ್ಟ.

ಅಭ್ಯಾಸಗಳು 1.1

1 l ಮತ್ತು m ಎಂಬುವು ಎರಡು ಛೇದಿಸುವ ರೇಖೆಗಳಾದರೆ $l \cap m = ?$

2 $A = \{2, 3, 4, 6, 7, 8\}$ ಮತ್ತು $B = \{1, 2, 4, 5, 6, 9\}$ ಎಂಬ ಸಂಖ್ಯೆಗಳ ಗಣಗಳಾದರೆ,

(a) ಈ ಉಕ್ತಿಗಳು ಸರಿಯೋ ತಪ್ಪೋ ತಿಳಿಸಿ.

(i) $8 \in A$ (ii) $4 \notin A$ (iii) $9 \in B$ (iv) $5 \in A \cup B$ (v) 4 ಎಂಬುದು A ಮತ್ತು B ಗಳೆರಡಕ್ಕೂ ಸೇರಿದೆ.

(*b*) What is the union of A and B ?

(*c*) What is the intersection of A and B ?

3 If a circle be one set and a line be another set find the intersection of the two in each of the following cases :



Fig. 1·16

4 A co-ordinate system is set up on a line. What is the distance between the following pairs of points :

(i) 0,5 (ii) 6,3 (iii) $-5,8$ (iv) $-3,-7$ (v) 4,$-$3.

5 A co-ordinate system is set up on a line. A new coordinate system is set up on the line by the following

(*b*) A ಮತ್ತು Bಗಳ ಸಂಯೋಜನೆ ಏನು ?

(*c*) A ಮತ್ತು Bಗಳ ಛೇದನ ಏನು ?

3 1.16 ಚಿತ್ರದಲ್ಲಿ ವೃತ್ತವು ಒಂದು ಗಣವಾಗಿಯೂ, ರೇಖೆಯು ಮತ್ತೊಂದು ಗಣವಾಗಿಯೂ ಇದ್ದರೆ ಪ್ರತಿಯೊಂದು ಸಂದರ್ಭದಲ್ಲಿಯೂ ಈ ಗಣಗಳ ಛೇದನವನ್ನು ತಿಳಿಸಿ.



ಚಿತ್ರ 1.16

4 ರೇಖೆಯೊಂದರ ಮೇಲೆ ಒಂದು ನಿರ್ದೇಶಕ ವ್ಯೂಹವನ್ನು ಏರ್ಪಡಿಸಲಾಗಿದೆ. ಈ ಪ್ರತಿಯೊಂದು ಜತೆ ಬಿಂದುಗಳ ನಡುವೆ ಇರುವ ದೂರವೇನು ?

(i) 0, 5 (ii) 6, 3 (iii) —5, 8 (ii) —3, —7 (v) 4,—3.

5 ರೇಖೆಯೊಂದರ ಮೇಲೆ ಒಂದು ನಿರ್ದೇಶಕ ವ್ಯೂಹವನ್ನು ಏರ್ಪಡಿಸಲಾಗಿದೆ. ಈ ಕೆಳಗೆ ಕೊಟ್ಟಿರುವ ನಿಯಮದಿಂದ ರೇಖೆಯ ಮೇಲೆ ಮತ್ತೊಂದು ಹೊಸ ನಿರ್ದೇಶಕ

rule "The new coordinate of a point is its old co-ordinate plus 2". The distance between any two points in the new system is the same as in the old system—Is this statement true ? Why ?.

6 3 towns A, B, C are in a line. The distance from A to B is 20 miles, from B to C is 30 miles and from A to C is 10 miles. Which of them is between the other two ?

7 A, B, C are 3 collinear points. $AB = 12''$ and $BC = 16''$. Is there only one way of arranging these points ?

8 a, b, c, are the co-ordinates of 3 points with $b < a$ and $c > a$. Which point lies between the other two ?

9 There are 10 points in a line. How many of them are such that "the point lies between the other two points"?

10 If four points on a plane are given, no three of them being collinear, how many lines can be drwan passing through them taken two at a time ?

11 How many planes contain a given point? two given points ? three given points ?

12 The points A, B, C, D lie in a plane. The points A, B, C, E also lie in a plane. Are A, B, D and E in the same plane ?

13 Prove that two parallel lines determine a plane.

ವ್ಯೂಹವನ್ನು ಏರ್ಪಡಿಸಿದೆ—"ಒಂದು ಬಿಂದುವಿನ ಹೊಸ ನಿರ್ದೇಶಕವು ಹಳೆಯ ನಿರ್ದೇಶಕಕ್ಕೆ 2ನ್ನು ಕೂಡುವುದರಿಂದ ಬರುವುದು.'' ಯಾವುದೇ ಎರಡು ಬಿಂದುಗಳಿಗೆ ಹೊಸ ನಿರ್ದೇಶಕ ವ್ಯೂಹದಲ್ಲಿ ಇರುವ ದೂರವು ಹಳೆಯ ನಿರ್ದೇಶಕ ವ್ಯೂಹದಲ್ಲಿರುವಷ್ಟೇ ಇರುವುದು.—ಈ ಉಕ್ತಿಯು ಸರಿಯೇ ತಪ್ಪೇ ? ಏಕೆ ?

6 $A,B,C,$ ಎಂಬ ಮೂರು ಪಟ್ಟಣಗಳು ಏಕರೇಖಸ್ಥವಾಗಿವೆ. A ಯಿಂದ B ಗೆ ಇರುವ ದೂರ 20 ಮೈಲಿ, B ಯಿಂದ C ಗೆ 30 ಮೈಲಿ ಮತ್ತು A ಯಿಂದ C ಗೆ 10 ಮೈಲಿ. ಯಾವ ಪಟ್ಟಣವು ಉಳಿದೆರಡರ ನಡುವೆ ಇದೆ ?

7 A,B,C ಗಳು ಮೂರು ಏಕರೇಖಸ್ಥ ಬಿಂದುಗಳು. $AB=12''$, $BC=16''$ ಆದರೆ ಇವುಗಳನ್ನು ಅಳವಡಿಸುವ ವಿಧಾನ ಒಂದು ಮಾತ್ರವೇ ಇದೆಯೇ ?

8 ಒಂದು ರೇಖೆಯ ಮೇಲಿರುವ ಮೂರುಬಿಂದುಗಳ ನಿರ್ದೇಶಕಗಳು $a, b, c,$ ಆಗಿವೆ. $b<a$ ಮತ್ತು $c>a$ ಆದರೆ ಯಾವ ಬಿಂದುವು ಉಳಿದೆರಡರ ನಡುವೆ ಇರುವುದು ?

9 ಒಂದು ರೇಖೆಯ ಮೇಲೆ 10 ಬಿಂದುಗಳಿವೆ. ಅವುಗಳಲ್ಲಿ ಎಷು ಬಿಂದು ಗಳು ಬೇರೆ ಎರಡು ಬಿಂದುಗಳ ನಡುವೆ ಇವೆ ?

10 ಸಮತಲವೊಂದರ ಮೇಲೆ 4 ಬಿಂದುಗಳನ್ನು ಕೊಟ್ಟಿದೆ. ಯಾವ ಮೂರು ಬಿಂದುಗಳೂ ಏಕರೇಖಸ್ಥವಾಗಿಲ್ಲ. ಹಾಗಿದ್ದರೆ, ಎರಡೆರಡು ಬಿಂದುಗಳ ಮೇಲೆ ಹಾದುಹೋಗುವಂತೆ ಎಷ್ಟು ರೇಖೆಗಳನ್ನು ಎಳೆಯುವುದು ಸಾಧ್ಯ ?

11 ದತ್ತ ಬಿಂದುವೊಂದನ್ನು ಹೊಂದಿರುವ ಎಷ್ಟು ಸಮತಲಗಳಿರುತ್ತವೆ ? ಎರಡು ಬಿಂದುಗಳನ್ನು ಹೊಂದಿರುವ ಸಮತಲಗಳೆಷ್ಟು ? ಮೂರು ಬಿಂದುಗಳನ್ನು ಹೊಂದಿರುವ ಸಮತಲಗಳೆಷ್ಟು ?

12 A,B,C,D ಬಿಂದುಗಳು ಒಂದೇ ಸಮತಲದಲ್ಲಿವೆ. A,B,C,E ಬಿಂದುಗಳೂ ಸಹ ಒಂದೇ ಸಮತಲದಲ್ಲಿವೆ. A,B,D ಮತ್ತು E ಬಿಂದುಗಳೂ ಸಹ ಒಂದೇ ಸಮತಲ ದಲ್ಲಿವೆಯೇ ?

13 ಎರಡು ಸಮಾನಾಂತರ ರೇಖೆಗಳು ಒಂದು ಸಮತಲವನ್ನು ನಿಶ್ಚಿತ ಗೊಳಿಸುತ್ತವೆಂದು ಸಾಧಿಸಿ.

CHAPTER 2

Ratio and Proportion

2.1 Comparison of two quantities of the same kind is done by means of ratios. The ratio of two quantities of the same kind is defined as the quotient of their measures in the same unit. For example, the ratio of Rs. 2.30 p. and Rs. 8.05 p. is $\frac{230}{805}$ or $\frac{2}{7}$. It is also written as 2 : 7. Similarly the ratio of 1 hr. 3m. 36 secs.; 2 hrs. 7m. 12 secs. and 2 hrs. 49m. 36 secs. is 3816 : 7632 : 10176 or 3 : 6 : 8.

When two ratios are equal we say that the terms of the ratios are in Proportion. For example, if

$$\frac{a}{b} = \frac{c}{d} \quad (or\ a:b=c:d)$$

then a, b, c, d are said to be in proportion and d is called the fourth proportional. Similarly if $a : b : c = d : e : f$ then the six terms are said to be in proportion. In geometry we compare lengths of line segments, areas of figures, measures of angles, etc.

2.2 Division of a line segme

In the previous chapter we have stated a postulate that there exists a one-to-one correspondence between points of a line and the set of all real numbers. Also given three points on a line, we stated that one of them lies between the other two. Suppose the point C lies between the other two points A and B. Let the length of the line segment $\overline{AC}=m$ units and $\overline{CB}=n$ units. Then the ratio of the two lengths is $m : n$ (m and n are positive real numbers). We say that the line segment $\overline{AB}$ is divided internal y in the ratio $m : n$ at the point C.

Fig. 2.1

For Example : If $AC=2.6$ cms and $CB=3.9$ cms $AC : CB=2.6 : 3.9=2 : 3$ Or we write $\frac{AC}{CB} = \frac{2}{3}$.

ಅಧ್ಯಾಯ 2

ಪ್ರಮಾಣ ಮತ್ತು ಅನುಪಾತ

2·1 ಸಜಾತೀಯವಾದ ಎರಡು ವಸ್ತುಗಳ ಪರಿಮಾಣವನ್ನು ಹೋಲಿಸಲು 'ಪ್ರಮಾಣ'ವನ್ನು ಉಪಯೋಗಿಸುತ್ತೇವೆ. ಸಜಾತೀಯ ಎರಡು ವಸ್ತುಗಳ ಪರಿಮಾಣಗಳ ಪ್ರಮಾಣವು, ಒಂದೇ ಮೂಲಮಾನದಲ್ಲಿ ಒಂದು ಇನ್ನೊಂದರ ಎಷ್ಟು ಪಾಲು ಇದೆ ಎಂಬುದನ್ನು ತೋರಿಸುವ ಸಂಖ್ಯೆಯಾಗಿರುವುದು. ಉದಾಹರಣೆಗೆ ರೂ. 2-30 ಪೈ. ಮತ್ತು ರೂ. 8-05 ಪೈ. ಇವುಗಳ ಪ್ರಮಾಣವು $\frac{230}{805}$ ಅಥವಾ $\frac{2}{7}$. ಇದನ್ನು $2:7$ ಎಂದೂ ಬರೆಯುತ್ತೇವೆ. ಹೀಗೆಯೇ 1 ಗಂ. 3 ನಿ. 36 ಸೆ., 2 ಗಂ. 7 ನಿ. 12 ಸೆ. ಮತ್ತು 2 ಗಂ. 49 ನಿ. 36 ಸೆ. ಇವುಗಳ ಪ್ರಮಾಣವು $3816:7632:10176$ ಅಥವಾ $3:6:8$.

ಎರಡು ಪ್ರಮಾಣಗಳು ಒಂದೇ ಆದಾಗ ಪ್ರಮಾಣದಲ್ಲಿರುವ ಪದಗಳು ಅನುಪಾತದಲ್ಲಿವೆ ಎನ್ನುತ್ತೇವೆ. ಉದಾಹರಣೆಗೆ $\frac{a}{b} = \frac{c}{d}$ (ಅಥವಾ $a:b=c:d$) ಆದರೆ, a, b, c, d ಗಳು ಅನುಪಾತದಲ್ಲಿವೆ. d ಯು a, b, c ಗಳ ಚತುರ್ಥಾನುಪಾತಿ ಎನ್ನುತ್ತೇವೆ. ಹೀಗೆಯೇ $a:b:c=d:e:f$ ಆದಾಗ, ಇಲ್ಲಿರುವ ಆರುಪದಗಳು ಅನುಪಾತದಲ್ಲಿರುತ್ತವೆ. ರೇಖಾಗಣಿತದಲ್ಲಿ ನಾವು ರೇಖಾಖಂಡಗಳ ಉದ್ದ, ಆಕೃತಿಗಳ ಕ್ಷೇತ್ರಫಲಗಳು, ಕೋನಗಳ ಅಳತೆಗಳು ಮುಂತಾದುವುಗಳನ್ನು ಹೋಲಿಸುತ್ತೇವೆ.

2·2 ರೇಖಾ ಖಂಡವನ್ನು ವಿಭಾಗಿಸುವುದು

ಒಂದು ರೇಖೆಯ ಬಿಂದುಗಳಿಗೂ ಮತ್ತು ಎಲ್ಲಾ ವಾಸ್ತವಿಕ ಸಂಖ್ಯೆಗಳ ಗಣಕ್ಕೂ ಒಂದು-ಒಂದು ಸಹಗಮ್ಯತೆ ಇದೆ ಎಂಬ ಸ್ವೀಕೃತ ಭಾವನೆಯನ್ನು ಹಿಂದಿನ ಅಧ್ಯಾಯದಲ್ಲಿ ಹೇಳಿದ್ದೇವೆ. ಇದೂ ಅಲ್ಲದೆ, ದತ್ತ ರೇಖೆಯಮೇಲೆ ಮೂರು ಬಿಂದುಗಳನ್ನು ಕೊಟ್ಟಾಗ ಅವುಗಳಲ್ಲಿ ಒಂದು ಉಳಿದೆರಡರ ನಡುವೆ ಇರುವುದು ಎಂಬುದಾಗಿಯೂ ಹೇಳಿದ್ದೇವೆ. C ಬಿಂದುವು, A ಮತ್ತು B ಗಳ ನಡುವೆ ಇದೆ ಎಂದು ಭಾವಿಸೋಣ. $\overline{AC}$ ರೇಖಾಖಂಡದ ಉದ್ದವು m ಮೂಲ ಮಾನಗಳಾಗಿರಲಿ. ಮತ್ತು $\overline{CB}=n$ ಮೂಲ ಮಾನಗಳಾಗಿರಲಿ. ಈ ಎರಡು ಉದ್ದಗಳ ಪ್ರಮಾಣವು $m:n$ ಆಗಿರುವುದು. (m ಮತ್ತು n ಗಳು ಧನಸಂಖ್ಯೆಗಳು). $\overline{AB}$ ರೇಖಾಖಂಡವನ್ನು C ಯಲ್ಲಿ $m:n$ ಪ್ರಮಾಣದಲ್ಲಿ ಅಂತರೀಯವಾಗಿ ವಿಭಾಗಿಸಲಾಗಿದೆ ಎಂದು ಹೇಳುತ್ತೇವೆ.

ಚಿತ್ರ 2.1

ಉದಾಹರಣೆಗೆ: $AC = 2.6$ Cms, ಮತ್ತು $CB = 3.9$ Cms ಆದರೆ $AC:CB = 2.6 : 3.9 = 2:3$ ಅಥವಾ $\frac{AC}{CB} = \frac{2}{3}$ ಎಂಬುದಾಗಿಯೂ ಬರೆಯುತ್ತೇವೆ.

Now let D be a point on the extended line segment AB.

Fig. 2·2

We make a convention here that the length of the line segment measured in the direction $\overrightarrow{AB}$ is positive and measured in the opposite direction is negative.

Hence we write $AD : DB = m : -n$

$$\text{Or} \quad \frac{AD}{DB} = \frac{m}{-n} .$$

We say that D divides AB externally in the ratio $m : n$

Note that either the negative sign or the word externally is used.

For example if $AD = 12$ cms and $BD = 8$ cms then

$$\frac{AD}{DB} = \frac{12}{-8} = -\frac{3}{2} .$$

Theorem 2.1 :

Given a line segment there is exactly one point which divides it in a given ratio.

We have assumed that there exists a one-one correspondence between the points of a line and the set of all real numbers.

Let $\overline{AB}$ be the given segment. Let the co-ordinates of A and B be a and b respectively.
Let C be a point which divides it in the ratio $m : n$. Let the co-ordinate of C be x.

Fig. 2.3

ಈಗ D ಎಂಬುದು AB ರೇಖಾಖಂಡದ ವೃದ್ಧಿಸಿದ ಭಾಗದ ಮೇಲಿನ ಒಂದು

ಚಿತ್ರ 2.2

ಬಿಂದುವಾಗಿರಲಿ. ಇಲ್ಲಿ AB ದಿಕ್ಕಿನಲ್ಲಿ ಅಳತೆ ಮಾಡುವ ಉದ್ದವನ್ನು ಧನವಾಗಿಯೂ ಮತ್ತು ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಅಳತೆಮಾಡುವ ಉದ್ದವನ್ನು ಋಣವಾಗಿಯೂ ತೆಗೆದು ಕೊಳ್ಳೋಣ.

ಆದ್ದರಿಂದ $AD:DB=m:-n$ ಅಥವಾ $\frac{AD}{DB}=\frac{m}{-n}$ ಎಂದು ಬರೆಯುತ್ತೇವೆ. D ಯು AB ಯನ್ನು $m:n$ ಪ್ರಮಾಣದಲ್ಲಿ ಬಾಹ್ಯವಾಗಿ ವಿಭಾಗಿಸುತ್ತದೆ ಎಂದು ಹೇಳುತ್ತೇವೆ. ಬಾಹ್ಯ ವಿಭಾಗವನ್ನು ಸೂಚಿಸಲು ಋಣ ಚಿಹ್ನೆಯನ್ನಾಗಲೀ ಅಥವಾ ಬಾಹ್ಯವಿಭಾಗ ಎಂಬ ಪದವನ್ನಾಗಲೀ ಉಪಯೋಗಿಸುತ್ತೇವೆ ಎಂಬುದನ್ನು ಗಮನಿಸಿ.

ಉದಾಹರಣೆಗೆ: $AD=12$ ಸೆಂ.ಮಿ. ಮತ್ತು $DB=8$ ಸೆಂ.ಮಿ.

ಆದರೆ, $\frac{AD}{DB} = \frac{12}{-8} = -\frac{3}{2}$ ಆಗಿರುವುದು.

ಪ್ರಮೇಯ 2.1: ದತ್ತ ರೇಖಾಖಂಡವನ್ನು ದತ್ತ ಪ್ರಮಾಣದಲ್ಲಿ ವಿಭಾಗಿಸುವ ಒಂದೇ ಒಂದು ಬಿಂದುವಿರುವುದು.

ದತ್ತರೇಖೆಯ ಬಿಂದುಗಳಿಗೂ ಮತ್ತು ವಾಸ್ತವಿಕ ಸಂಖ್ಯೆಗಳ ಗಣಕ್ಕೂ ಒಂದು–ಒಂದು ಸಹಗಮ್ಯತೆ ಇದೆ ಎಂಬುದಾಗಿ ಈ ಹಿಂದೆಯೇ ತೆಗೆದುಕೊಂಡಿದ್ದೇವೆ.

$\overline{AB}$ ಯು ದತ್ತ ರೇಖಾಖಂಡವಾಗಿರಲಿ. A ಮತ್ತು B ಗಳ ನಿರ್ದೇಶಕಗಳು ಕ್ರಮವಾಗಿ a ಮತ್ತು b ಇರಲಿ. C ಬಿಂದುವು $\overline{AB}$ ಯನ್ನು $m:n$ ಪ್ರಮಾಣದಲ್ಲಿ ವಿಭಾಗಿಸಲಿ. C ಯ ನಿರ್ದೇಶಕವು x ಇರಲಿ.

ಚಿತ್ರ 2.3

then $\dfrac{AC}{CB} = \dfrac{m}{n}$ gives

$$\frac{x-a}{b-x} = \frac{m}{n}$$

$$\therefore x = \frac{an+bm}{m+n}.$$

Obviously only one such real number exists and the point corresponding to this real number divides $\overline{AB}$ in the ratio $m : n$.

Definition :

Three numbers a, b, c, are said to be in continued proportion if $a/b = b/c$. Then $b^2 = ac$ and b is said to be the mean proportional of a and c. C is called the third proportional of a and b.

Since the length of a line segments is a real number, similar statement holds good for line segments also.

If $\dfrac{AB}{CD} = \dfrac{EF}{GH}$ then we have

(i) $AB.GH = CD.EF$

(ii) $\dfrac{CD}{AB} = \dfrac{GH}{EF}$

(iii) $\dfrac{AB}{EF} = \dfrac{CD}{GH}$

(iv) $\dfrac{AB}{CD} + 1 = \dfrac{EF}{GH} + 1$ or

$$\frac{AB+CD}{CD} = \frac{EF+GH}{GH}$$

(v) $\dfrac{AB-CD}{CD} = \dfrac{EF-GH}{GH}$

(vi) $\dfrac{AB+CD}{AB-CD} = \dfrac{EF+GH}{EF-GH}$

ಈಗ $\dfrac{AC}{CB} = \dfrac{m}{n}$ ಆಗಿರಬೇಕಾದುದರಿಂದ,

$$\frac{x-a}{b-x} = \frac{m}{n} \text{ ಅಥವಾ } x = \frac{an+bm}{m+n}.$$

ಇಂತಹ ಒಂದೇ ಒಂದು ಸಂಖ್ಯೆ ಇರುವುದೆಂಬುದು ಸುಸ್ಪಷ್ಟ. ಈ ಸಂಖ್ಯೆಗೆ ಸಹಗಾಮಿಯಾದ ಬಿಂದುವು $\overline{AB}$ ಯನ್ನು $m : n$ ಪ್ರಮಾಣದಲ್ಲಿ ವಿಭಾಗಿಸುವುದು.

ವ್ಯಾಖ್ಯೆ : a, b, c ಮೂರು ಸಂಖ್ಯೆಗಳಲ್ಲಿ $\dfrac{a}{b} = \dfrac{b}{c}$ ಆದರೆ, a, b, c ಗಳು ಸರಾನುಪಾತದಲ್ಲಿವೆ ಎಂದು ಹೇಳುತ್ತೇವೆ. ಆಗ $b^2 = ac$ ಆಗಿರುವುದು. b ಗೆ a ಮತ್ತು c ಗಳ ಮಧ್ಯಾನುಪಾತಿ ಎಂದು ಹೆಸರು. c ಯು a ಮತ್ತು b ಗಳ ತೃತೀಯಾನುಪಾತಿ ಎಂದು ಕರೆಯುತ್ತೇವೆ.

ರೇಖಾಖಂಡದ ಉದ್ದವು ವಾಸ್ತವಿಕ ಸಂಖ್ಯೆಯಾದುದರಿಂದ, ಈ ಮೇಲಿನ ರೀತಿಯ ಉಕ್ತಿಗಳು ರೇಖಾಖಂಡಗಳಿಗೂ ಅನ್ವಯಿಸುತ್ತವೆ.

ಹೀಗೆ $\dfrac{AB}{CD} = \dfrac{EF}{GH}$ ಆದರೆ,

(i) $AB.\,GH = CD.\,EF$

(ii) $\dfrac{CD}{AB} = \dfrac{GH}{EF}$

(iii) $\dfrac{AB}{EF} = \dfrac{CD}{GH}$

(iv) $\dfrac{AB}{CD} + 1 = \dfrac{EF}{GH} + 1$ ಅಥವಾ

$$\frac{EF+GH}{GH} = \frac{AB+CD}{CD}$$

(v) $\dfrac{AB-CD}{CD} = \dfrac{EF-GH}{GH}$

(vi) $\dfrac{AB+CD}{AB-CD} = \dfrac{EF+GH}{EF-GH}$

Theorem 2.2 :

The areas of two triangles having equal altitudes are proportional to their bases.

We know that the area of a triangle $= \frac{1}{2}$ base $\times$ altitude



Fig. 2·4

$$\therefore \quad \frac{\text{Area of } \triangle ABC}{\text{Area of } \triangle DEF} = \frac{\frac{1}{2}\, BC.h}{\frac{1}{2}\, EF.h} = \frac{BC}{EF}.$$

Similarly the areas of two triangles having equal bases are proportional to their altitudes and the areas of triangles having equal bases and equal altitudes are equal.

ಪ್ರಮೇಯ 2.2 : ಒಂದೇ ಎತ್ತರವಿರುವ ತ್ರಿಭುಜಗಳ ಕ್ಷೇತ್ರಫಲಗಳು ಅವುಗಳ ಪಾದಗಳ ಅನುಪಾತದಲ್ಲಿರುತ್ತವೆ.

ತ್ರಿಭುಜದ ಕ್ಷೇತ್ರಫಲ $= \frac{1}{2} \times$ ಪಾದ $\times$ ಎತ್ತರ ಎಂದು ತಿಳಿದಿದ್ದೇವೆ.



(*i*)



(*ii*)

ಚಿತ್ರ 2.4

$$\therefore \frac{\triangle\ ABC \text{ ಯ ಕ್ಷೇತ್ರಫಲ}}{\triangle\ DEF \text{ ನ ಕ್ಷೇತ್ರಫಲ}} = \frac{\frac{1}{2}\ BC \cdot h}{\frac{1}{2}\ EF \cdot h} = \frac{BC}{EF}.$$

ಇದೇ ರೀತಿಯಲ್ಲಿ, ಸಮವಾದ ಪಾದಗಳಿರುವ ತ್ರಿಭುಜಗಳ ಕ್ಷೇತ್ರಫಲಗಳು, ಅವುಗಳ ಎತ್ತರಗಳ ಅನುಪಾತದಲ್ಲಿಯೂ ಮತ್ತು ಎತ್ತರ ಮತ್ತು ಪಾದಗಳು ಸಮವಾಗಿರುವ ತ್ರಿಭುಜಗಳ ಕ್ಷೇತ್ರಫಲಗಳು ಸಮವಾಗಿಯೂ ಇರುತ್ತವೆ.

Thorem 2.3 :

A straight line drawn parallel to one side of a triangle divides the other two sides proportionally.

Given : ABC is a triangle. Let XY be drawn parallel to BC, to meet AB and AC (produced if necessary) in X and Y.



Fig 2.5

To Prove : $\frac{AX}{XB} = \frac{AY}{YC}$

Construction : Join C, X and B, Y

ಪ್ರಮೇಯ 2.3 : ತ್ರಿಭುಜದ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳ ರೇಖೆಯು ಉಳಿದೆರಡು ಬಾಹುಗಳನ್ನು ಅನುಪಾತದಲ್ಲಿ ವಿಭಾಗಿಸುತ್ತದೆ.

ದತ್ತ : ABC ಯು ಒಂದು ತ್ರಿಭುಜ. XY ಎಂಬುದು BC ಗೆ ಸಮಾನಾಂತರವಾಗಿ ಎಳೆದಿರುವ ರೇಖೆ. XY ರೇಖೆಯು AB ಯನ್ನು X ನಲ್ಲಿಯೂ AC ಯನ್ನು Y ನಲ್ಲಿಯೂ ಸಂಧಿಸುವುದು (ಅವಶ್ಯವಾದಲ್ಲಿ AB, AC ಗಳನ್ನು ವೃದ್ಧಿಸಿದಮೇಲೆ)



(*i*)



ii

ಚಿತ್ರ 2.5

ಸಾಧನೀಯ : $\dfrac{AX}{XB} = \dfrac{AY}{YC}$

ರಚನೆ : C, X ಮತ್ತು B, Y ಗಳನ್ನು ಸೇರಿಸಿ

Proof : By theorem 2.2,

$$\frac{\triangle AYX}{\triangle XYB} = \frac{AX}{XB} \text{ and } \frac{\triangle AXY}{\triangle CYX} = \frac{AY}{YC}$$

But $\triangle XYB = \triangle CYX$

(Since they stand on the same base between the same parallels)

$$\therefore \quad \frac{AX}{XB} = \frac{AY}{YC}$$

Cor :--By the properties of ratios we have

$$\frac{AX}{AB} = \frac{AY}{AC} \quad \text{and} \quad \frac{BX}{AB} = \frac{CY}{AC}$$

Theorem 2.4 (*Converse of theorem* 2.3) :

A line which divides two sides of a triangle proportionally is parallel to the third side.

Let a line l meet AB and AC at X and Y and let

$$\frac{AX}{XB} = \frac{AY}{YC}$$



Fig. 2.6

ಸಾಧನೆ : ಪ್ರಮೇಯ 2.2 ರಿಂದ.

$$\frac{\triangle AYX}{\triangle XYB} = \frac{AX}{XB} \text{ ಮತ್ತು } \frac{\triangle AXY}{\triangle CYX} = \frac{AY}{YC}.$$

ಆದರೆ, $\triangle XYB = \triangle CYX$

(ಕಾರಣ ಅವು ಏಕಪಾದದ ಮೇಲೆ ಒಂದೇ ಜತೆ ಸಮಾನಾಂತರ ಸರಳರೇಖೆಗಳ ನಡುವೆ ಇವೆ.)

ಆದ್ದರಿಂದ $\frac{AX}{XB} = \frac{AY}{YC}$

ಅನುಮಿತ : ಪ್ರಮಾಣಗಳ ಗುಣದಿಂದಾಗಿ,

$$\frac{AX}{AB} = \frac{AY}{AC} \text{ ಮತ್ತು } \frac{BX}{AB} = \frac{CY}{AC} \text{ ಆಗಿರುವುದು.}$$

ಪ್ರಮೇಯ 2·4 : (ಪ್ರಮೇಯ 2·3ರ ವಿಲೋಮ).

ತ್ರಿಭುಜದ ಎರಡು ಬಾಹುಗಳನ್ನು ಅನುಪಾತದಲ್ಲಿ ವಿಭಾಗಿಸುವ ಸರಳ ರೇಖೆಯು ಮೂರನೆಯ ಬಾಹುವಿಗೆ ಸಮಾನಾಂತರವಾಗಿರುವುದು.

l ರೇಖೆಯು AB ಮತ್ತು ACಗಳನ್ನು X ಮತ್ತು Y ಬಿಂದುಗಳಲ್ಲಿ ಸಂಧಿಸಲಿ ಮತ್ತು $\frac{AX}{XB} = \frac{AY}{YC}$ ಆಗಿರಲಿ.



ಚಿತ್ರ 2.6

To Prove :

$$XY \parallel BC$$

Proof : If XY is not parallel to BC, draw the line parallel to BC through X. Let it meet AC in Z

Now, by the above theorem,

$$\frac{AX}{XB} = \frac{AZ}{ZC}$$

$$\therefore \text{ We have } \frac{AY}{YC} = \frac{AZ}{ZC}$$

But by theorem 2.1, there is only one point which divides a line segment in a given ratio.

Hence this is absurd.

$\therefore \quad XY \parallel BC$

Theorem **2.5 :**

The internal (external) bisector of the vertical angle of a triangle divides the base internally (externally) in the ratio of the sides containing the angle.



Fig. 2.7

Given : In the $\triangle ABC$, AP is the internal (external) bisector of $\angle A$

To Prove : $\dfrac{BP}{PC} = \dfrac{AB}{AC}$

Construction : Draw $CE \parallel AP$ to meet AB (produced if necessary) at E.

ಸಾಧನೀಯ : $XY \parallel BC$.

ಸಾಧನೆ : XY ರೇಖೆಯು BC ಗೆ ಸಮಾನಾಂತರವಾಗಿಲ್ಲದಿದ್ದಲ್ಲಿ, X ನ ಮೂಲಕ BCಗೆ ಸಮಾನಾಂತರವಾದ ರೇಖೆಯನ್ನೆಳೆಯಿರಿ. ಇದು ACಯನ್ನು Zನಲ್ಲಿ ಸಂಧಿಸಲಿ.

ಈಗ, ಮೇಲಿನ ಪ್ರಮೇಯದಿಂದ $\frac{AX}{XB} = \frac{AZ}{ZC}$

$$\therefore \frac{AY}{YC} = \frac{AZ}{ZC} \text{ ಆಗಿರುವುದು.}$$

ಆದರೆ ಪ್ರಮೇಯ 2.1ರಿಂದ, ರೇಖಾಖಂಡವನ್ನು ದತ್ತ ಪ್ರಮಾಣದಲ್ಲಿ ವಿಭಾಗಿಸುವ ಒಂದೇ ಒಂದು ಬಿಂದುವಿರುವುದು.

ಆದ್ದರಿಂದ ಇದು ಅಸಂಗತ.

$$\therefore XY \parallel BC$$

ಪ್ರಮೇಯ 2·5 : ತ್ರಿಭುಜದ ಶೀರ್ಷ ಕೋನದ ಅಂತರೀಯ (ಬಾಹ್ಯ) ಕೋನಾರ್ಧಕವು ಪಾದವನ್ನು ಬಾಹುಗಳ ಪ್ರಮಾಣದಲ್ಲಿ ಅಂತರೀಯ (ಬಾಹ್ಯ)ವಾಗಿ ವಿಭಾಗಿಸುವುದು.



(i)



ii

ಚಿತ್ರ 2.7

ದತ್ತ : ABC ತ್ರಿಭುಜದಲ್ಲಿ AP ಯು $\angle A$ ಕೋನದ ಅಂತರೀಯ (ಬಾಹ್ಯ) ಸಮಭಾಜಕ.

ಸಾಧನೀಯ : $\frac{BP}{PC} = \frac{AB}{AC}$

ರಚನೆ : APಗೆ ಸಮಾನಾಂತರವಾಗಿ CE ಎಳೆಯಿರಿ. ಇದು ABಯನ್ನು (ಅವಶ್ಯವಿದ್ದಲ್ಲಿ AB ವೃದ್ಧಿಸಿದ ಭಾಗವನ್ನು) Eನಲ್ಲಿ ಸಂಧಿಸಲಿ.

Proof : Let D be a point in the segment BA in fig. (i) and in the segment BA produced in fig. (ii).

We have $\angle DAP = \angle PAC$

Since $AP \parallel CE$, $\angle DAP = \angle AEC$ (Corresp. angles) and $\angle PAC = \angle ACE$ (alt. angles)

But $\angle DAP = \angle PAC$ gives

$$\angle AEC = \angle ACE$$

$$\therefore \quad AE = AC$$

Now since $AP \parallel CE$,

$$\frac{BA}{AE} = \frac{BP}{PC} \text{ in either figure}$$

$$i.\,e.\ \frac{BA}{AC} = \frac{BP}{PC}$$

The converse of the above theorem is also true.

$$i.e. \text{ if } \frac{BP}{PC} = \frac{AB}{AC} \text{ then } AP \text{ bisects } \angle A$$

Proof : Taking the same figures and using the same construction as before,

$$\angle DAP = \angle AEC \quad \text{(Corresp. angles)}$$

$$\text{and } \angle PAC = \angle ACE \text{ (alt. angles)}$$

Also since $AP \parallel CE$, we have

$$\frac{BP}{PC} = \frac{AB}{AE}$$

$$\text{But } \frac{BP}{PC} = \frac{AB}{AC} \text{ by hypothesis}$$

$$\therefore \frac{AB}{AC} = \frac{AB}{AE} \qquad \therefore AE = AC$$

ಸಾಧನೆ:— Dಯು ಚಿತ್ರ (i) ರಲ್ಲಿ BA ರೇಖಾಖಂಡದಲ್ಲಿಯೂ ಮತ್ತು ಚಿತ್ರ (ii) ರಲ್ಲಿ, ವೃದ್ಧಿಸಿದ BA ಖಂಡದಲ್ಲಿಯೂ ಇರುವ ಒಂದು ಬಿಂದುವಾಗಿರಲಿ.

$\angle DAP = \angle PAC$ ಆಗಿರುವುದು.

$AP \parallel CE$ ಆಗಿರುವುದರಿಂದ, $\angle DAP = \angle AEC$ (ಸಹಗಮ್ಯ ಕೋನಗಳು)

ಮತ್ತು $\angle PAC = \angle ACE$ (ಪರ್ಯಾಯ ಕೋನಗಳು)

ಆದರೆ $\angle DAP = \angle PAC$ ಆಗಿರುವುದರಿಂದ,

$\angle AEC = \angle ACE$ ಆಗಿರುವುದು.

$\therefore AE = AC$.

ಪುನಃ $AP \parallel CE$ ಆಗಿರುವುದರಿಂದ, ಎರಡೂ ಚಿತ್ರಗಳಲ್ಲಿ,

$\frac{BA}{AE} = \frac{BP}{PC}$ ಆಗಿರುವುದು.

ಅಥವಾ $\frac{BA}{AC} = \frac{BP}{PC}$.

ಈ ಪ್ರಮೇಯದ ವಿಲೋಮವೂ ಸಹ ಸತ್ಯವಾಗಿರುವುದು.

ಅಂದರೆ, $\frac{BP}{PC} = \frac{AB}{AC}$ ಆದಾಗ,

APಯು $\angle A$ನ್ನು ಅರ್ಧಿಸುವುದು.

ಸಾಧನೆ :— ಮೇಲಿನ ಚಿತ್ರಗಳನ್ನೂ ರಚನೆಯನ್ನೂ ಉಪಯೋಗಿಸಿಕೊಂಡು,

ಪುನಃ $\angle DAP = \angle AEC$ (ಸಹಗಮ್ಯ ಕೋನಗಳು)

ಮತ್ತು $\angle PAC = \angle ACE$ (ಪರ್ಯಾಯ ಕೋನಗಳು)

$AP \parallel CE$ ಆಗಿರುವುದರಿಂದ,

$$\frac{BP}{PC} = \frac{AB}{AE}$$

ಆದರೆ $\frac{BP}{PC} = \frac{AB}{AC}$ (ದತ್ತಾಂಶ)

$\therefore \frac{AB}{AC} = \frac{AB}{AE}$ $\quad \therefore AE = AC$

$\therefore \angle AEC = \angle ACE$

Hence we have $\angle DAP = \angle PAC$

Or AP bsiects $\angle A$

Theorem 2.6 :

Given base, the ratio of the sides of a triangle, the locus of the vertex is a circle.

Given: base $BC = a$ and $\dfrac{AB}{AC} = \dfrac{m}{n}$

To Prove: Locus of the vertex A is a circle.



Fig. 2.8

Proof: Let P and Q divide BC internally and externally in the ratio $m : n$

Now let A be a point on the required locus

$$\text{Then } \frac{AB}{AC} = \frac{m}{n} \doteq \frac{BP}{PC} = \frac{BQ}{CQ}$$

Then AP and AQ bisect $\angle A$ internally and externally.

$\therefore \quad \angle PAQ = 90°$

$\therefore$ 'A' lies on the circle with PQ as diameter.

Conversely ;

Any point A on the circle with PQ as diameter satisfies the given condition. Let O be the centre of the circle.

$\therefore \quad \angle AEC = \angle ACE$

ಆದ್ದರಿಂದ $\angle DAP = \angle PAC$

ಅಥವಾ APಯು $\angle A$ ನ್ನು ಅರ್ಧಿಸುವುದು.

ಪ್ರಮೇಯ 2·6: ತ್ರಿಭುಜದ ಪಾದ ಮತ್ತು ಉಳಿದೆರಡು ಬಾಹುಗಳ ಪ್ರಮಾಣವನ್ನು ಕೊಟ್ಟಾಗ ಶೀರ್ಷ ಬಿಂದುವಿನ ಪಥವು ಒಂದು ವೃತ್ತವಾಗಿರುವುದು.

ದತ್ತ: ಪಾದ $BC = a$ ಮತ್ತು $\frac{AB}{AC} = \frac{m}{n}$.

ಸಾಧನೀಯ: A ಶೀರ್ಷ ಬಿಂದುವಿನ ಪಥವು ಒಂದು ವೃತ್ತವಾಗಿರುವುದು.



ಚಿತ್ರ 2.8

ಸಾಧನೆ: P ಮತ್ತು Qಗಳು BC ಯನ್ನು $m:n$ ಪ್ರಮಾಣದಲ್ಲಿ ಅಂತರೀಯವಾಗಿ ಮತ್ತು ಬಾಹ್ಯವಾಗಿ ವಿಭಾಜಿಸಲಿ.

ಬೇಕಾಗಿರುವ ಪಥದಲ್ಲಿ Aಯು ಒಂದು ಬಿಂದುವಾಗಿರಲಿ.

ಈಗ $\frac{AB}{AC} = \frac{m}{n} = \frac{BP}{PC} = \frac{BQ}{CQ}$

ಆದ್ದರಿಂದ AP ಮತ್ತು AQ ಗಳು $\angle A$ ಕೋನವನ್ನು ಅಂತರೀಯವಾಗಿ ಮತ್ತು ಬಾಹ್ಯವಾಗಿ ಅರ್ಧಿಸುತ್ತವೆ.

$\therefore \quad \angle PAQ = 90^\circ$.

ಆದ್ದರಿಂದ Aಯು PQ ವ್ಯಾಸವಾಗಿರುವ ವೃತ್ತದ ಮೇಲಿರುವುದು.

ವಿಲೋಮವಾಗಿ, PQ ವ್ಯಾಸವಾಗಿರುವ ವೃತ್ತದ ಮೇಲಿನ ಯಾವುದೇ ಬಿಂದುವು ದತ್ತ ನಿಯಮವನ್ನು ಪಾಲಿಸುವುದು. (O ಎಂಬುದು ವೃತ್ತದ ಕೇಂದ್ರವಾಗಿರಲಿ.)

$$\text{Since } \frac{BP}{PC} = \frac{BQ}{CQ},$$

$$\text{we have } \frac{BQ}{BP} = \frac{CQ}{PC}$$

$$\text{and } \frac{BQ+BP}{BQ-BP} = \frac{CQ+PC}{CQ-PC}$$

Now $BQ+BP=BP+PQ+BP=2BP+2PO=2BO$
and $BQ-BP=PQ=2PO$

Also $CQ+PC=PQ=2PO$ and
$CQ-PC=(CO+OQ)-(PO-CO)=2\,CO$ (since $PO=OQ$)
Hence we have,

$$\frac{2OB}{2OP} = \frac{2OP}{2OC}$$

Or $OC.OB=OP^2=OA^2$

$\therefore$ OA is a tangent to the circle passing through A, B, C.

$\therefore$ $\angle OAC = \angle OBA$

Or $\angle OAP - \angle PAC = \angle OPA - \angle BAP = \angle OAP - \angle BAP$

$\therefore$ $\angle BAP = \angle PAC$. *i.e.*, AP bisects $\angle A$ internally

$$\therefore \quad \frac{AB}{AC} = \frac{BP}{PC} = \frac{m}{n}.$$

Therefore the locus of A is a circle with PQ as diameter. This circle is called the "Apollonius' Circle."

Exercises 2.1

1 A segment AB is 3.5 inches long. A point X divides AB in the ratio 3 : 2. Find the lengths of segments AX and XB. Verify the calculation by construction.

$$\frac{BP}{PC} = \frac{BQ}{QC} \text{ ಆಗಿರುವುದರಿಂದ, } \frac{BQ}{BP} = \frac{CQ}{PC}$$

ಮತ್ತು $\dfrac{BQ + BP}{BQ - BP} = \dfrac{CQ + PC}{CQ - PC}$

ಈಗ $BQ + BP = BP + PQ + BP = 2\ BP + 2\ PO$
$= 2\ BO$

$BQ - BP = PQ = 2\ PO.$

ಮತ್ತು $CQ + PC = PQ = 2\ PO$

$CQ - PC = (CO + OQ) - (PO - CO) = 2\ CO$
(ಕಾರಣ, $PO = OQ$)

ಆದ್ದರಿಂದ, $\dfrac{2\ OB}{2\ OP} = \dfrac{2\ OP}{2\ OC}$

ಅಥವಾ $OC.OB = OP^2 = OA^2$

ಆದ್ದರಿಂದ A, B, ಮತ್ತು Cಗಳ ಮೂಲಕ ಹಾದು ಹೋಗುವ ವೃತ್ತಕ್ಕೆ OA ಸ್ಪರ್ಶರೇಖೆಯಾಗಿರುವುದು.

ಆದ್ದರಿಂದ $\angle OAC = \angle OBA$
ಅಥವಾ $\angle OAP - \angle PAC = \angle OPA - \angle BAP =$
$\angle OAP - \angle BAP$

$\therefore\ \angle BAP = \angle PAC$ ಅಥವಾ APಯು $\angle A$ಕೋನದ ಅಂತರೀಯ ಕೋನಾರ್ಧಕ.

$$\therefore\ \frac{AB}{AC} = \frac{BP}{PC} = \frac{m}{n}.$$

ಆದ್ದರಿಂದ A ಬಿಂದುವಿನ ಪಥವು, PQ ವ್ಯಾಸವಾಗಿರುವ ವೃತ್ತವಾಗಿರುವುದು.
ಈ ವೃತ್ತಕ್ಕೆ 'ಅಪೊಲೋನಿಯಸ್ ವೃತ್ತ' ಎಂದು ಹೆಸರು.

ಅಭ್ಯಾಸಗಳು 2.1

1 AB ರೇಖಾ ಖಂಡವು 3.5 ಅಂಗುಲ ಉದ್ದವಿದೆ. X ಬಿಂದುವು AB ಯನ್ನು 3:2 ಪ್ರಮಾಣದಲ್ಲಿ ವಿಭಾಗಿಸುವುದು. AX ಮತ್ತು XB ರೇಖಾ ಖಂಡಗಳ ಉದ್ದವನ್ನು ಕಂಡುಹಿಡಿಯಿರಿ. ಲೆಕ್ಕಾಚಾರವನ್ನು ರಚನೆಯಿಂದ ತಾಳೆ ನೋಡಿ.

2 ABC and DBC are two traingles having altitudes AX and DY in the ratio 5 : 3. Find the ratio of their areas.

3 $ABCD$ is a parallelogram and P is a point on the diagonal BD such that $BP : PD = 1 : 3$. Prove that $\triangle APD = \frac{3}{8}$ parallelogram $ABCD$.

4 $ABCD$ is a trapezium in which $AB \parallel CD$. Prove that the line joining the middle points of BC and AD is parallel to AB.

5 $ABCD$ is a trapezium in which $AB \parallel CD$. The diagonals AC and BD meet in E.

Prove that $AE : EC = BE : ED$.

6 The side AB of a $\triangle ABC$ is cut at D in the ratio 5 : 3. If DF drawn parallel to AC, cuts BC at F, find the ratio of the segments of BC.

7 If AP bisects $\angle A$ of triangle ABC show that

$$BP = \frac{ac}{b+c} \text{ and } CP = \frac{ab}{b+c}.$$

If the bisector of $\angle B$ meets AP in I, calculate $AI : IP$.

8 The bisector of $\angle A$ of $\triangle ABC$ meets BC at D and DE is drawn parrallel to BC to cut AC at E and DF is drawn parallel to AC to cut AB at F. Show that

$$BF : CE = AB^2 : AC^2.$$

9 If the bisectors of angles A and C of a quadrilateral $ABCD$ meet on the diagonal AB, Show that the bisectors of angles B and D meet on AC.

10 $ABCD$ is a quadrilateral having $AB = AD$. The angles $\angle BAC$ and $\angle CAD$ are bisected by lines which meet BC and CD in E and F respectively. Prove that EF is parallel to BD.

2 ABC ಮತ್ತು DBC ಗಳು BC ಪಾದದ ಮೇಲಿರುವ ಎರಡು ತ್ರಿಭುಜ ಗಳು. AX ಮತ್ತು DY ಗಳು BC ಗೆ ಎಳೆದಿರುವ ಲಂಬಗಳು $5:3$ ಪ್ರಮಾಣ ದಲ್ಲಿವೆ. ಆ ತ್ರಿಭುಜಗಳ ಕ್ಷೇತ್ರಫಲಗಳ ಪ್ರಮಾಣವನ್ನು ಕಂಡುಹಿಡಿಯಿರಿ.

3 $ABCD$ಯು ಒಂದು ಸಮಾನಾಂತರ ಚತುರ್ಭುಜ. $BP : PD = 1:3$ ಆಗುವಂತೆ BD ಕರ್ಣದ ಮೇಲೆ P ಬಿಂದುವನ್ನು ಗುರ್ತಿಸಿದೆ.

$\triangle APD = \frac{3}{8}$ ಸಮಾನಾಂತರ ಚತುರ್ಭುಜ $ABCD$ ಎಂದು ಸಾಧಿಸಿ.

4 $ABCD$ ತ್ರಾಪಿಜ್ಯದಲ್ಲಿ $AB \parallel CD$. BC ಮತ್ತು ADಗಳ ಮಧ್ಯ ಬಿಂದುಗಳನ್ನು ಸೇರಿಸುವ ಸರಳರೇಖೆಯು ABಗೆ ಸಮಾನಾಂತರವಾಗಿದೆಯೆಂದು ಸಾಧಿಸಿ.

5 $ABCD$ ತ್ರಾಪಿಜ್ಯದಲ್ಲಿ $AB \parallel CD$. AC ಮತ್ತು BD ಕರ್ಣಗಳು E ನಲ್ಲಿ ಸಂಧಿಸುತ್ತವೆ. $AE : EC = BE : ED$ ಎಂದು ಸಾಧಿಸಿ.

6 ABC ತ್ರಿಭುಜದಲ್ಲಿ AB ಬಾಹುವನ್ನು Dಯಲ್ಲಿ $5:3$ ಪ್ರಮಾಣದಲ್ಲಿ ವಿಭಾಗಿಸಿದೆ. ABಗೆ ಸಮಾನಾಂತರವಾಗಿ ಎಳೆದ DF ರೇಖೆಯು BCಯನ್ನು F ನಲ್ಲಿ ಸಂಧಿಸುವುದು. BCಯ ರೇಖಾಖಂಡಗಳ ಪ್ರಮಾಣವನ್ನು ಕಂಡು ಹಿಡಿಯಿರಿ.

7 ABC ತ್ರಿಭುಜದಲ್ಲಿ AP ಯು $\angle A$ ನ್ನು ಅರ್ಧಿಸುವುದು. $BP = \dfrac{ac}{b+c}$ ಮತ್ತು $CP = \dfrac{ab}{b+c}$ ಎಂದು ತೋರಿಸಿ. $\angle B$ ಕೋನದ ಅರ್ಧಕ ರೇಖೆಯು APಯನ್ನು Iನಲ್ಲಿ ಸಂಧಿಸಿದರೆ, $AI : IP$ ಕಂಡುಹಿಡಿಯುರಿ.

8 ABC ತ್ರಿಭುಜದಲ್ಲಿ $\angle A$ ಕೋನದ ಅರ್ಧಕ ರೇಖೆಯು BCಯನ್ನು D ನಲ್ಲಿ ಸಂಧಿಸುವುದು. AB ಗೆ ಸಮಾನಾಂತರವಾಗಿ ಎಳೆದ DE ಸರಳರೇಖೆಯು AC ಯನ್ನು E ನಲ್ಲಿ ಸಂಧಿಸುವುದು. AC ಗೆ ಸಮಾನಾಂತರವಾಗಿ ಎಳೆದ DF ಸರಳರೇಖೆಯು AB ಯನ್ನು F ನಲ್ಲಿ ಸಂಧಿಸುವುದು.

$BF : CE = AB^2 : AC^2$ ಎಂದು ತೋರಿಸಿ!

9 $ABCD$ ಚತುರ್ಭುಜದ $\angle A$ ಮತ್ತು $\angle C$ ಕೋನಾರ್ಧಕಗಳು BD ಕರ್ಣದ ಮೇಲೆ ಸಂಧಿಸಿದರೆ, $\angle B$ ಮತ್ತು $\angle D$ ಕೋನಾರ್ಧಕಗಳು AC ಕರ್ಣದ ಮೇಲೆಯೇ ಸಂಧಿಸುತ್ತವೆಯೆಂದು ಸಾಧಿಸಿ.

10 $ABCD$ ಚತುರ್ಭುಜದಲ್ಲಿ $AB = AD$. $\angle BAC$ ಮತ್ತು $\angle CAD$ ಗಳ ಕೋನಾರ್ಧಕಗಳು BC ಮತ್ತು CD ಗಳನ್ನು ಕ್ರಮವಾಗಿ E ಮತ್ತು F ಗಳಲ್ಲಿ ಸಂಧಿಸುತ್ತವೆ. $EF \parallel BD$ ಎಂದು ಸಾಧಿಸಿ.

11 AD is the median of a $\triangle ABC$ meeting BC in D. The angles $\angle ADB$ and $\angle ADC$ are bisected by lines which meet AB and AC in E and F respectively. Prove that EF is parallel to BC.

12 P is a point on the side BC of $\triangle ABC$. The angle APB is bisected by the line DPE meeting the other sides AB, AC, (produced if necessary) in D and E respectively.

Prove that $BP.\ CE.\ AD = PC.\ EA.\ DB.$

11 ABC ತ್ರಿಭುಜದ AD ಮಧ್ಯರೇಖೆಯು BC ಯನ್ನು D ಯಲ್ಲಿ ಸಂಧಿಸುತ್ತದೆ. $\angle ADB$ ಮತ್ತು $\angle ADC$ ಗಳ ಕೋನಾರ್ಧಕಗಳು AB ಮತ್ತು AC ಗಳನ್ನು ಕ್ರಮವಾಗಿ E ಮತ್ತು F ಗಳಲ್ಲಿ ಸಂಧಿಸುತ್ತವೆ. $EF \parallel BC$ ಎಂದು ಸಾಧಿಸಿ.

12 ABC ತ್ರಿಭುಜದ BC ಪಾದದಲ್ಲಿ P ಬಿಂದುವೊಂದನ್ನು ತೆಗೆದುಕೊಂಡಿದೆ. DPE ರೇಖೆಯು $\angle APB$ ನ್ನು ಅರ್ಧಿಸುತ್ತದೆ ಮತ್ತು AB, AC ಗಳನ್ನು (ಅವಶ್ಯವಿದ್ದರೆ ವೃದ್ಧಿಸಿದೆ) ಕ್ರಮವಾಗಿ D ಮತ್ತು E ಗಳಲ್ಲಿ ಸಂಧಿಸುತ್ತವೆ. $BP.CE.AD = PC.EA.DB$ ಎಂದು ಸಾಧಿಸಿ.

CHAPTER 3

Similar Triangles

Two polygons are said to be similar if (i) corresponding sides are proportional *and* (ii) corresponding angles are equal.



Fig. 3·1

If the two figures here are similar then,

$$\angle A = \angle P, \quad \angle B = \angle Q \text{ .... etc.}$$

$$\text{and } \frac{AB}{PQ} = \frac{BC}{QR} = \frac{CD}{RS} = \text{ .... etc.}$$



Fig. 3.2

A square and a rhombus have their sides proportional but they are not similar.

ಅಧ್ಯಾಯ 3

ಸಮರೂಪ ತ್ರಿಭುಜಗಳು

ಎರಡು ಬಹುಭುಜಗಳಲ್ಲಿ

(i) ಸಹಗಮ್ಯ ಬಾಹುಗಳು ಅನುಪಾತದಲ್ಲಿಯೂ ಮತ್ತು

(ii) ಸಹಗಮ್ಯ ಕೋನಗಳು ಸಮವಾಗಿಯೂ

ಇದ್ದರೆ, ಅಂತಹ ಬಹುಭುಜಗಳಿಗೆ ಸಮರೂಪ ಬಹುಭುಜಗಳೆಂದು ಹೆಸರು.



ಚಿತ್ರ 3.1

ಇಲ್ಲಿ ಕೊಟ್ಟಿರುವ ಬಹುಭುಜಗಳು ಸಮರೂಪವಾಗಿದ ಲ್ಲಿ,

$\angle A = \angle P, \ \angle B = \angle Q$ .... ಇತ್ಯಾದಿ

ಮತ್ತು $\dfrac{AB}{PQ} = \dfrac{BC}{QR} = \dfrac{CD}{RS} =$ .... ಇತ್ಯಾದಿ



ಚಿತ್ರ 3.2

ಒಂದು ಚಚ್ಚೌಕದ ಮತ್ತು ಒಂದು ವಜ್ರಾಕೃತಿಯ ಬಾಹುಗಳು ಅನುಪಾತ ದಲ್ಲಿದ್ದರೂ ಅವುಗಳು ಸಮರೂಪತೆಯನ್ನು ಹೊಂದಿಲ್ಲ. ಹೀಗೆಯೇ ಒಂದು ಆಯದ

A rectangle and a square have their corresponding angles equal, but they are not similar.

Fig. 3.3

However, in the case of triangles, we prove below (Theorems 3.1 and 3.2) that one of the conditions (i) or (ii) implies the other: So, two triangles will be similar either (i) if they are equiangular or (ii) if the sides are proportional.

Theorem 3.1 :

If two triangles are equiangular then the corresponding sides are proportional.



Fig. 3.4

Given : In triangles ABC and DEF

$\angle A = \angle D$, $\angle B = \angle E$ and $\angle C = \angle F$

To prove :

$$\frac{AB}{DE} = \frac{BC}{EF} = \frac{AC}{DF}$$

Construction : Along DE, take $DX = AB$ and along DF take $DY = AC$. Join XY.

ಮತ್ತು ಒಂದು ಚಚ್ಚೌಕದ ಸಹಗಮ್ಯ ಕೋನಗಳು ಸಮವಾಗಿದ್ದರೂ, ಅವುಗಳು ಸಮರೂಪತೆಯನ್ನು ಹೊಂದಿಲ್ಲ.

ಚಿತ್ರ 3.

ಆದರೆ, ತ್ರಿಭುಜಗಳಲ್ಲಿ ಮೇಲೆ ಹೇಳಿದ ಎರಡೂ ನಿಯಮಗಳ ಆವಶ್ಯಕತೆ ಇರುವುದಿಲ್ಲ. ಯಾವುದೇ ಒಂದನ್ನು ತೆಗೆದುಕೊಂಡರೂ ಸಹ ಮತ್ತೊಂದನ್ನು ಸಾಧಿಸ ಬಹುದೆಂದು ಈ ಕೆಳಕಂಡ ಪ್ರಮೇಯಗಳಲ್ಲಿ (ಪ್ರ. 3.1, 3.2) ಸಾಧಿಸಿದೆ. ಆದ್ದರಿಂದ ಎರಡು ತ್ರಿಭುಜಗಳಲ್ಲಿ ಒಂದರ ಕೋನಗಳು ಮತ್ತೊಂದರ ಕೋನಗಳಿಗೆ ಸಮವಾಗಿದ್ದರೂ ಅಥವಾ ಅನುಗಮ್ಯ ಬಾಹುಗಳು ಅನುಪಾತದಲ್ಲಿದ್ದರೂ ಆ ತ್ರಿಭುಜಗಳು ಸಮರೂಪತೆ ಯನ್ನು ಹೊಂದಿರುವುವು.

ಪ್ರಮೇಯ 3.1 :

ಸಮಾನ ಕೋನಗಳಿರುವ ಎರಡು ತ್ರಿಭುಜಗಳ ಅನುರೂಪ ಬಾಹುಗಳು ಅನುಪಾತ ದಲ್ಲಿರುತ್ತವೆ.



ಚಿತ್ರ 3.4

ದತ್ತ: ABC ಮತ್ತು DEF ತ್ರಿಭುಜಗಳಲ್ಲಿ

$\angle A = \angle D$, $\angle B = \angle E$ ಮತ್ತು $\angle C = \angle F$

ಸಾಧನೀಯ : $\dfrac{AB}{DE} = \dfrac{BC}{EF} = \dfrac{AC}{DF}$

ರಚನೆ: DE ಯಲ್ಲಿ $DX = AB$ ಆಗುವಂತೆ X ಬಿಂದುವನ್ನೂ ಮತ್ತು DF ನಲ್ಲಿ $DY = AC$ ಆಗುವಂತೆ Y ಬಿಂದುವನ್ನೂ ತೆಗೆದುಕೊಂಡು XY ಸೇರಿಸಿ.

Proof :

In triangles ABC and DXY, $AB = DX$, $AC = DY$ and $\angle BAC = \angle XDY$ (given).

$\therefore \triangle ABC \equiv \triangle DXY$.

$\therefore \angle DXY = \angle ABC = \angle DEF$

$\therefore XY \parallel EF$.

$$\therefore \frac{DX}{DE} = \frac{DY}{DF}$$

$$i.e. \frac{AB}{DE} = \frac{AC}{DF}$$

$$\text{Similarly } \frac{AB}{DE} = \frac{BC}{EF}$$

$$\therefore \frac{AB}{DE} = \frac{BC}{EF} = \frac{AC}{DF}.$$

Theorem : 3·2

If two triangles have the three sides of one proportional to the three sides of the other, the triangles are equiangular.

Given : In triangles ABC and DEF (Fig. 3·4)

$$\frac{AB}{DE} = \frac{BC}{EF} = \frac{AC}{DF}$$

To prove : $\angle A = \angle D$, $\angle B = \angle E$ and $\angle C = \angle F$

Construction : Along DE take $DX = AB$ and aonlg DF take $DY = AC$. Join XY.

Proof : By data $\frac{AB}{DE} = \frac{AC}{DF}$

$$\because \frac{DX}{DE} = \frac{DY}{DF} \quad (\because AB = DX \text{ and } AC = DY)$$

$\therefore XY$ is parallel to EF.

$\therefore$ triangles DXY and DEF are equiangular.

$$\therefore \frac{XY}{EF} = \frac{DX}{DE} = \frac{DY}{DF} = \frac{BC}{EF} \text{ by data.}$$

$\therefore XY = BC$.

ಸಾಧನೆ: ABC ಮತ್ತು DXY ತ್ರಿಭುಜಗಳಲ್ಲಿ

$AB = DX$, $AC = DY$ ಮತ್ತು $\angle BAC = \angle XDY$

$\therefore \triangle ABC \cong \triangle DXY$

$\therefore \angle DXY = \angle ABC = \angle DEF$

ಆದ್ದರಿಂದ, $XY \parallel EF$

$$\therefore \frac{DX}{DE} = \frac{DY}{DF}$$

ಅಥವಾ $\dfrac{AB}{DE} = \dfrac{AC}{DF}$

ಹೀಗೆಯೇ $\dfrac{AB}{DE} = \dfrac{BC}{EF}$ ಎಂದು ಸಾಧಿಸಬಹುದು.

$$\therefore \frac{AB}{DE} = \frac{BC}{EF} = \frac{AC}{DF}.$$

ಪ್ರಮೇಯ 3·2:

ಅನುಪಾತದಲ್ಲಿರುವ ಬಾಹುಗಳಿರುವ ಎರಡು ತ್ರಿಭುಜಗಳು ಸಮಾನ ಕೋನಗಳನು ಹೊಂದಿರುತ್ತವೆ.

ದತ್ತ: ABC ಮತ್ತು DEF ತ್ರಿಭುಜಗಳಲ್ಲಿ, $\dfrac{AB}{DE} = \dfrac{BC}{EF} = \dfrac{AC}{DF}$

(ಚಿತ್ರ 3.4)

ಸಾಧನೀಯ: $\angle A = \angle D$, $\angle B = \angle E$ ಮತ್ತು $\angle C = \angle F$.

ರಚನೆ: DEಮೇಲೆ $DX = AB$ ಆಗುವಂತೆ X ಬಿಂದುವನ್ನೂ ಮತ್ತು DF ಮೇಲೆ $DY = AC$ ಆಗುವಂತೆ Y ಬಿಂದುವನ್ನೂ ತೆಗೆದುಕೊಂಡು XY ಸೇರಿಸಿ.

ಸಾಧನೆ: $\dfrac{AB}{DE} = \dfrac{AC}{DF}$ (ದತ್ತ)

$\therefore \dfrac{DX}{DE} = \dfrac{DY}{DF}$ ($\because AB = DX$ ಮತ್ತು $AC = DY$)

$\therefore$ XY ರೇಖೆಯು EFಗೆ ಸಮಾನಾಂತರವಾಗಿದೆ.

$\therefore$ DXY ಮತ್ತು DEF ತ್ರಿಭುಜಗಳು ಸಮಾನ ಕೋನಗಳನ್ನು ಹೊಂದಿವೆ.

$\therefore \dfrac{XY}{EF} = \dfrac{DX}{DE} = \dfrac{DY}{DF} = \dfrac{BC}{EF}$ (ದತ್ತ)

$\therefore XY = BC$.

Now in triangles ABC and DXY, $AB=DX$, $AC=DY$ and $BC=XY$.

$\therefore$ the triangles are congruent. But triangles DXY and DEF are equiangular.

$\therefore$ triangles ABC and DEF are equiangular.

i.e. $\angle A=\angle D$, $\angle B=\angle E$ and $\angle C=\angle F$.

Theorem 3.3 :

If two triangles have one angle of one equal to one angle of the other and the sides about them proportional, the triangles are similar.

Given : In triangles ABC and DEF,

$$\frac{AB}{DE}=\frac{AC}{DF} \text{ and } \angle A=\angle D$$

To prove : triangles ABC and DEF are similar.

Construction : Along DE take $DX=AB$ and along DF take $DY=AC$. Join XY.



Fig. 3 5

Proof : Again traingles ABC and DXY are congruent.

$\therefore \angle B=\angle DXY$ and $\angle C=\angle DYX$

Also by data $\dfrac{AB}{DE}=\dfrac{AC}{DF}$

$$\therefore \frac{DX}{DE}=\frac{DY}{DF}$$

$\therefore$ XY is parallel to EF

$\therefore \angle DXY=\angle E$ and $\angle DYX=\angle F$

$\therefore \angle B=\angle E$ and $\angle C=\angle F$

ಈಗ ABC ಮತ್ತು DXY ತ್ರಿಭುಜಗಳಲ್ಲಿ

$AB = DX$, $AC = DY$ ಮತ್ತು $BC = XY$

∴ ತ್ರಿಭುಜಗಳು ಎಲ್ಲಾ ವಿಧದಲ್ಲಿಯೂ ಸಮವಾಗಿವೆ.

ಆದರೆ DXY ಮತ್ತು DEF ತ್ರಿಭುಜಗಳು ಸಮಾನ ಕೋನಗಳನ್ನು ಹೊಂದಿವೆ.

∴ ABC ಮತು DEF ತ್ರಿಭುಜಗಳು ಸಮಾನ ಕೋನಗಳನ್ನು ಹೊಂದಿವೆ.

ಅಥವಾ, $\angle A = \angle D$, $\angle B = \angle E$ ಮತ್ತು $\angle C = \angle F$

ಪ್ರಮೇಯ 3·3:

ಎರಡು ತ್ರಿಭುಜಗಳಲ್ಲಿ ಒಂದರ ಒಂದು ಕೋನವು ಮತ್ತೊಂದರ ಒಂದು ಕೋನಕ್ಕೆ ವಾಗಿದ್ದು, ಈ ಕೋನಗಳ ಬಾಹುಗಳು ಅನುಪಾತ ದಲ್ಲಿದ್ದರೆ, ಆ ತ್ರಿಭುಜಗಳು ರೂಪವಾಗಿರುತ್ತವೆ.

ದತ್ತ: ABC ಮತ್ತು DEF ತ್ರಿಭುಜಗಳಲ್ಲಿ

$$\frac{AB}{DE} = \frac{AC}{DF}$$ ಮತ್ತು $\angle A = \angle D$

ಸಾಧನೀಯ: ABC ಮತ್ತು DEF ತ್ರಿಭುಜಗಳು ಸಮರೂಪವಾಗಿರುತ್ತವೆ.

ರಚನೆ: DE ಮೇಲೆ $DX = AB$ ಆಗುವಂತೆ X ಬಿಂದುವನ್ನೂ ಮತ್ತು F ಮೇಲೆ $DY = AC$ ಆಗುವಂತೆ Y ಬಿಂದುವನ್ನೂ ತೆಗೆದುಕೊಂಡು XY ಸಿ.



ಚಿತ್ರ 3·5

ಸಾಧನೆ: ಮೇಲಿನ ಪ್ರಮೇಯುಗಳಂತೆಯೇ ABC ಮತ್ತು DXY ತ್ರಿಭುಜ ಸರ್ವಸಮವಾಗಿವೆ.

∴ $\angle B = \angle DXY$ ಮತ್ತು $\angle C = \angle DYX$, ಮತ್ತು ದತ್ತಾಂಶದಿಂದ

$$\frac{AB}{DE} = \frac{AC}{DF}$$

$$\therefore \frac{DX}{ED} = \frac{DY}{DF}$$

∴ XY ರೇಖೆಯು EFಗೆ ಸಮಾನಾಂತರವಾಗಿರುವುದು.

∴ $\angle B = \angle E$ ಮತ್ತು $\angle C = \angle F$

Therefore the two triangles are equiangular and he similar.

Theorem 3.4:

3.4 If two triangles have two sides of one proportic to two sides of the other, and the angles opposite to one of corresponding sides are equal, then the angles oppo to the other pair are either equal or supplimentary. the former case the triangles are similar.

(This is called the ambiguous case for the similarlity of two triangles.)



Fig. 3.6

Given : In triangles ABC and DEF

$$\frac{AB}{DE} = \frac{AC}{DF} \text{ and } \angle B = \angle E.$$

To prove : either $\angle C = \angle F$ or $\angle C + \angle F = 180°$.

Proof : The angles $\angle BAC$ and $\angle EDF$ are either e or unequal.

Case (i) Suppose $\angle BAC = \angle EDF$ as in figures (i) and

Also since $\angle B = \angle E$, we have $\angle C = \angle F$ and the triangles are similar.

ಎರಡು ತ್ರಿಭುಜಗಳೂ ಸಮಾನ ಕೋನಗಳನ್ನು ಹೊಂದಿರುವುದರಿಂದ ಅವು ಸರೂಪವಾಗಿರುತ್ತವೆ.

ಪ್ರಮೇಯ 3·4:

ಎರಡು ತ್ರಿಭುಜಗಳಲ್ಲಿ ಒಂದರ ಎರಡು ಬಾಹುಗಳು ಮತ್ತೊಂದರ ಎರಡು ಬಾಹುಗಳೊಡನೆ ಅನುಪಾತದಲ್ಲಿದ್ದು ಅವುಗಳಲ್ಲಿ ಒಂದು ಜೊತೆ ಅನುಗಮ್ಯ ಬಾಹುಗಳಿಗೆ ಎದುರಾಗಿರುವ ಕೋನಗಳು ಸಮವಾಗಿದ್ದರೆ, ಮತ್ತೊಂದು ಜೊತೆ ಅನುಗಮ್ಯ ಕೋನಗಳು ಸಮವಾಗಿರುವುವು, ಇಲ್ಲವೇ ಸರಳಕೋನಪೂರಕಗಳಾಗಿರುವುವು. ಮೊದಲ ಪಕ್ಷದಲ್ಲಿ ಆ ತ್ರಿಭುಜಗಳು ಸಮರೂಪವಾಗಿರುವುವು.

(ಇವನ್ನು ತ್ರಿಭುಜಗಳ ಸಮರೂಪತೆಯ ಸಂದಿಗ್ಧ ಪಕ್ಷ ಎನ್ನುವರು)





ಚಿತ್ರ 3.6

ದತ್ತ : ABC ಮತ್ತು DFE ತ್ರಿಭುಜಗಳಲ್ಲಿ $\dfrac{AB}{DE} = \dfrac{AC}{DF}$

ಮತ್ತು $\angle B = \angle E$

ಸಾಧನೀಯ : $\angle C = \angle F$ ಅಥವಾ $\angle C + \angle F = 180°$

ಸಾಧನೆ :— $\angle BAC$ ಮತ್ತು $\angle EDF$ ಗಳು ಸಮ ಇಲ್ಲವೇ ಅಸಮ

ಪಕ್ಷ (i) ಚಿತ್ರ (i) ಮತ್ತು (ii) ರಲ್ಲಿ ತೋರಿಸಿರುವಂತೆ

$\angle BAC = \angle EDF$ ಆಗಿರಲಿ

ಈಗ $\angle B = \angle E$ ಆಗಿರುವುದರಿಂದ, $\angle C = \angle F$ ಆಗಿರುವುದು. ಆದ್ದರಿಂದ ಎರಡು ತ್ರಿಭುಜಗಳೂ ಸಮರೂಪವಾಗಿರುತ್ತವೆ.

Case (ii) If $\angle BAC \neq \angle EDF$ as in figures (i) and construct $\angle EDG = \angle BAC$ and let DG meet EF prod… at G.

Now $\triangle$les BAC and EDG are equiangular.

$$\therefore \angle ACB = \angle DGF \text{ and } \frac{AB}{DE} = \frac{AC}{DG}$$

$$\text{But } \frac{AB}{DE} = \frac{AC}{DF} \text{ (by data)}$$

$$\therefore DG = DF$$

$$\therefore \angle DFG = \angle DGF = \angle ACB$$

$$\text{But } \angle DFE + \angle DFG = 180^\circ$$

$$\therefore \angle DFE + \angle ACB = 180^\circ$$

$$\text{or } \angle C + \angle F = 180^\circ.$$

Theorem 3.5 :

Areas of two similar triangles are proportional to squares on the corresponding sides.

Given : ABC and DEF are two similar triangles.

To prove : $$\frac{\text{Area } \triangle ABC}{\text{Area } \triangle DEF} = \frac{AB^2}{DE^2}$$

Construction : Draw AX and and DY perpendicu to BC and EF respectively.

Fig. 3.7

ಪಕ್ಷ (ii) : ಚಿತ್ರ (i) ಮತ್ತು (iii) ರಲ್ಲಿ ತೋರಿಸಿರುವಂತೆ

$\angle BAC \neq \angle EDF$ ಆಗಿರಲಿ

ಈಗ $\angle EDG = \angle BAC$ ಆಗಿರುವಂತೆ DG ರೇಖೆಯನ್ನೆಳೆಯಿರಿ. ಇದು ವೃದ್ಧಿಸಿದ EF ನ್ನು G ನಲ್ಲಿ ಸಂಧಿಸಲಿ.

ಈಗ BAC ಮತ್ತು EDG ತ್ರಿಭುಜಗಳು ಸಮಾನ ಕೋನಗಳನ್ನು ಹೊಂದಿರುತ್ತವೆ.

$$\therefore \angle ACB = \angle DGF \text{ ಮತ್ತು } \frac{AB}{DE} = \frac{AC}{DG}$$

$$\text{ಆದರೆ, } \frac{AB}{DE} = \frac{AC}{DF}$$

$$\therefore \frac{AC}{DG} = \frac{AC}{DF}$$

$$\therefore DG = DF$$

$$\text{ಇದರಿಂದ } \angle DFG = \angle DGF = \angle ACB$$

$$\text{ಆದರೆ, } \angle DFE + \angle DFG = 180°$$

$$\therefore \angle DFE + \angle ACB = 180° \text{ ಅಥವಾ } \angle C + \angle F = 180°.$$

ಪ್ರಮೇಯ 3·5 :

ಸಮರೂಪವಾಗಿರುವ ಎರಡು ತ್ರಿಭುಜಗಳ ಕ್ಷೇತ್ರಫಲಗಳು ಸಹಗಮ್ಯ ಬಾಹುಗಳ ವರ್ಗಗಳ ಅನುಪಾತದಲ್ಲಿರುತ್ತವೆ.

ದತ್ತ: ABC ಮತ್ತು DEF ಎರಡು ಸಮರೂಪ ತ್ರಿಭುಜಗಳು

ಸಾಧನೀಯ : $$\frac{ABC \text{ ತ್ರಿಭುಜದ ಕ್ಷೇತ್ರ ಫಲ}}{DEF \text{ ತ್ರಿಭುಜದ ಕ್ಷೇತ್ರ ಫಲ}} = \frac{AB^2}{DE^2}$$

ರಚನೆ :—AX ಮತ್ತು DY ಗಳನ್ನು ಕ್ರಮವಾಗಿ BC ಮತ್ತು EF ಗಳಿಗೆ ಲಂಬಗಳಾಗಿ ಎಳೆಯಿರಿ.



ಚಿತ್ರ 3.7

Proof : In triangles ABX and DEY, $\angle B = \angle E$ and $\angle AXB = \angle DYE = 90°$.

Hence the remaining angles are also equal and the two triangles are similar.

$$\therefore \quad \frac{AX}{DY} = \frac{AB}{DE}$$

$$\text{Now } \frac{\text{Area } \triangle ABC}{\text{Area } \triangle DEF} = \frac{\frac{1}{2}\, BC.AX}{\frac{1}{2}\, EF.DY}$$

$$= \frac{BC}{EF} \cdot \frac{AB}{DE} = \frac{AB}{DE} \cdot \frac{AB}{DE} = \frac{AB^2}{DE^2}$$

Also Since $\dfrac{AB}{DE} = \dfrac{BC}{EF} = \dfrac{AC}{DF}$ we have ,

$$\frac{\text{Area } \triangle ABC}{\text{Area } \triangle DEF} = \frac{AB^2}{DE^2} = \frac{BC^2}{EF^2} = \frac{AC^2}{DF^2} .$$

Theorem 3.6 :

Areas of two similar polygons are proportional to the squares on the corresponding sides.



Fig. 3.8

Data : $ABCDE$ and $PQRST$ are two similar polygons

To Prove : $\dfrac{\text{Area } ABCDE}{\text{Area } PQRST} = \dfrac{AB^2}{PQ^2}$

Construction :

Take any point X inside the polygon $ABCDE$ and join it to its vertices.

ಸಾಧನೆ : ABX ಮತ್ತು DEY ತ್ರಿಭುಜಗಳಲ್ಲಿ $\angle B = \angle E$ ಮತ್ತು $\angle AXB = \angle DYE = 90°$. ಆದ್ದರಿಂದ ಈ ಎರಡು ತ್ರಿಭುಜಗಳು ಸಮರೂಪವಾಗಿರುತ್ತವೆ.

$$\therefore \quad \frac{AX}{DY} = \frac{AB}{DE}$$

$$\text{ಈಗ } \frac{ABC \text{ ತ್ರಿಭುಜದ ಕ್ಷೇತ್ರಫಲ}}{DEF \text{ ತ್ರಿಭುಜದ ಕ್ಷೇತ್ರಫಲ}} = \frac{\frac{1}{2}\, BC \cdot AX}{\frac{1}{2}\, EF \cdot DY}$$

$$= \frac{BC}{EF} \cdot \frac{AB}{DE} = \frac{AB}{DE} \cdot \frac{AB}{DE} = \frac{AB^2}{DE^2}$$

$$\text{ಅಲ್ಲದೆ, } \frac{AB}{DE} = \frac{BC}{EF} = \frac{AC}{DF} \text{ ಆಗಿರುವುದರಿಂದ}$$

$$\frac{ABC \text{ ತ್ರಿಭುಜದ ಕ್ಷೇತ್ರಫಲ}}{DEF \text{ ತ್ರಿಭುಜದ ಕ್ಷೇತ್ರಫಲ}} = \frac{AB^2}{DE^2} = \frac{BC^2}{EF^2} = \frac{AC^2}{DF^2}.$$

ಪ್ರಮೇಯ 3·6 :

ಎರಡು ಸಮರೂಪ ಬಹುಭುಜಗಳ ಕ್ಷೇತ್ರಫಲಗಳು ಸಹಗಮ್ಯ ಬಾಹುಗಳ ವರ್ಗಗಳ ಅನುಪಾತದಲ್ಲಿರುತ್ತವೆ.



ಚಿತ್ರ 3.8

ದತ್ತ: $ABCDE$ ಮತ್ತು $PQRST$ ಎರಡು ಸಮರೂಪ ಬಹುಭುಜಗಳು

ಸಾಧನೀಯ: $\dfrac{\text{ಕ್ಷೇತ್ರಫಲ } ABCDE}{\text{ಕ್ಷೇತ್ರಫಲ } PQRS} = \dfrac{AB^2}{PQ^2T}$

ರಚನೆ: $ABCDE$ ಬಹುಭುಜದಲ್ಲಿ X ಬಿಂದುವೊಂದನ್ನು ತೆಗೆದುಕೊಳ್ಳಿ. ಅದನ್ನು ಎಲ್ಲಾ ಶೃಂಗ ಬಿಂದುಗಳಿಗೂ ಸೇರಿಸಿ.

Con truct $\angle YPQ = \angle XAB$ and $\angle YQP = XBA$. Let PY and QY meet at Y. Join YR, YS and YT.

Proof :

Triangles XAB and YPQ are equiangular and hence similar.

$$\therefore \quad \frac{\text{Area } \triangle XAB}{\text{Area } \triangle YPQ} = \frac{AB^2}{PQ^2}$$

Now $\angle ABC = \angle PQR$ (Since the polygons are similar)
and $\angle ABX = \angle PQY$ (by construction)

$$\therefore \quad \angle XBC = \angle YQR \ldots . \text{(i)}$$

$$\text{Also } \frac{XB}{YQ} = \frac{AB}{PQ}$$

(since $\triangle$s ABX and PQY are similar)

$$\text{But } \frac{AB}{PQ} = \frac{BC}{QR}$$

$$\therefore \quad \frac{XB}{YQ} = \frac{BC}{QR} \ldots . . \text{(ii)}$$

Hence by (i) and (ii) using theorem 3.3, we have triangles XBC and YQR are similar.

$$\therefore \quad \frac{\text{Area } \triangle XBC}{\text{Area } \triangle YQR} = \frac{BC^2}{QR^2} = \frac{AB^2}{PQ^2}$$

Similarly we can prove that triangles XCD and YRS are similar and so on.

$$\therefore \quad \frac{\triangle XAB}{\triangle YPQ} = \frac{\triangle XBC}{\triangle YQR} = \ldots = \frac{AB^2}{PQ^2}$$

$\therefore$ By the theorem on equal ratios,

$$\frac{\triangle XAB + \triangle XBC + \ldots}{\triangle YPQ + \triangle YQR + \ldots} = \frac{AB^2}{QR^2}$$

$$\therefore \quad \frac{\text{Area } ABCDE}{\text{Area } PQRST} = \frac{AB^2}{QR^2}$$

Theorem 3.7:

If from the vertex of a right angled triangle a perpendicular is drawn to the hypotenuse, it divides the triangle into two similar triangles, similar to the original triangle.

$\angle YPQ = \angle XAB$ ಮತ್ತು $\angle YQP = \angle XBA$ ಆಗುವಂತೆ PY ಮತ್ತು QYಗಳನ್ನೆಳೆಯಿರಿ. ಇವು Y ಬಿಂದುವಿನಲ್ಲಿ, ಸಂಧಿಸಲಿ. YR, YS, YT ಗಳನ್ನು ಸೇರಿಸಿ.

ಸಾಧನೆ: ರಚನೆಯಿಂದ, XAB ಮತ್ತು YPQ ತ್ರಿಭುಜಗಳು ಸಮರೂಪವಾಗಿವೆ.

ಆದ ರಿಂದ $\dfrac{XAB \text{ ತ್ರಿಭುಜದ ಕ್ಷೇತ್ರಫಲ}}{YPQ \text{ ತ್ರಿಭುಜದ ಕ್ಷೇತ್ರಫಲ}} = \dfrac{AB^2}{PQ^2}$

ಈಗ $\angle ABC = \angle PQR$ ($\because$ ಬಹುಭುಜಗಳು ಸಮರೂಪವಾಗಿವೆ)

ಮತ್ತು $\angle ABX = \angle PQY$ (ರಚನೆ)

$\therefore \quad \angle XBC = \angle YQR$ —(i)

ABX ಮತ್ತು PQY ತ್ರಿಭುಜಗಳು ಸಮರೂಪವಾಗಿರುವುದರಿಂದ,

$$\frac{XB}{YQ} = \frac{AB}{PQ}$$

ಆದರೆ $\dfrac{AB}{PQ} = \dfrac{BC}{QR}$

$$\therefore \quad \frac{XB}{YQ} = \frac{BC}{QR} \quad \text{........ (ii)}$$

ಈಗ (i), (ii) ಮತ್ತು ಪ್ರಮೇಯ 3·3 ಇವುಗಳಿಂದ,

XBC ಮತ್ತು YQR ತ್ರಿಭುಜಗಳು ಸಮರೂಪವಾಗಿವೆ.

$$\therefore \quad \frac{XBC \text{ ತ್ರಿಭುಜದ ಕ್ಷೇತ್ರಫಲ}}{YQR \text{ ತ್ರಿಭುಜದ ಕ್ಷೇತ್ರಫಲ}} = \frac{BC^2}{QR^2} = \frac{AB^2}{PQ^2}$$

ಹೀಗೆಯೇ XCD ಮತ್ತು YRS ತ್ರಿಭುಜಗಳೂ ಮತ್ತು ಇತರ ಸಹಗಮ್ಯ ತ್ರಿಭುಜಗಳೂ ಸಮರೂಪವಾಗಿವೆಯೆಂದು ಸಾಧಿಸಬಹುದು.

ಆದ್ದರಿಂದ $\dfrac{\triangle XAB}{\triangle YPQ} = \dfrac{\triangle XBC}{\triangle YQR} = \cdots = \dfrac{AB^2}{PQ^2}$

$\therefore$ ಸಮಪ್ರಮಾಣಗಳ ಗುಣದಿಂದ.

$$\frac{\triangle XAB + \triangle XBC + \cdots}{\triangle YPQ + \triangle YQR + \cdots} = \frac{AB^2}{QR^2}$$

$$\therefore \frac{\text{ಕ್ಷೇತ್ರಫಲ } ABCDE}{\text{ಕ್ಷೇತ್ರಫಲ } PQRST} = \frac{AB^2}{QR^2}$$

ಪ್ರಮೇಯ 3.7 :

ಲಂಬಕೋನ ತ್ರಿಭುಜದ ಶೃಂಗ ಬಿಂದುವಿನಿಂದ ಕರ್ಣಕ್ಕೆ ಒಂದು ಲಂಬವನ್ನೆಳೆದರೆ, ಅದು ತ್ರಿಭುಜವನ್ನು ದತ್ತ ತ್ರಿಭುಜಕ್ಕೆ ಸಮರೂಪವಾಗಿರುವ ಎರಡು ತ್ರಿಭುಜಗಳಾಗಿ ವಿಭಾಗಿಸುವುದು.

Given : $\triangle ABC$ is right angled at A. AX is drawn perpendicular to BC.

To prove : The triangles ABX and ACX are similar to each other and each is similar to $\triangle ABC$.



Fig. 3.9

Proof : in triangles ABX and CBA taken with the vertices in this order, $\angle AXB = \angle BAC$ and $\angle B$ is common.

$\therefore$ the triangles are equiangular and hence similar.

Similarly the triangles CAX and CBA are equiangular and similar.

Hence the triangles ABX and CAX are also equiangular and similar.

Cor 1 : Since triangles ABX and CBA are similar we have

$$\frac{AB}{BC} = \frac{BX}{AB} \text{ or } AB^2 = BC.BX.$$

or AB is the mean proportional between BC and BX. milarly $AC^2 = CB.CX$.

ದತ್ತ: ABC ತ್ರಿಭುಜದಲ್ಲಿ $\angle A$ ಯು ಲಂಬಕೋನ. AX ನ್ನು BC ಗೆ ಲಂಬವಾಗಿ ಎಳೆದಿದೆ.

ಸಾಧನೀಯ: ABX ಮತ್ತು ACX ತ್ರಿಭುಜಗಳು ಸಮರೂಪವಾಗಿವೆ ಮತ್ತು ಇವುಗಳಲ್ಲಿ ಪ್ರತಿಯೊಂದೂ $\triangle ABC$ ಗೆ ಸಮರೂಪವಾಗಿದೆ.



ಚಿತ್ರ 3.9

ಸಾಧನೆ: ABX ಮತ್ತು CBA ತ್ರಿಭುಜಗಳಲ್ಲಿ (ಶೃಂಗಗಳನ್ನು ಈ ಕ್ರಮ ದಲ್ಲಿ ತೆಗೆದುಕೊಂಡಿದೆ)

$$\angle AXB = \angle BAC$$

$\angle B$ ಉಭಯ ಸಾಮಾನ್ಯ.

ಆದ್ದರಿಂದ ತ್ರಿಭುಜಗಳು ಸಮಾನ ಕೋನಗಳನ್ನು ಹೊಂದಿರುತ್ತವೆ ಮತ್ತು ಸಮ ರೂಪವಾಗಿರುತ್ತವೆ.

ಹೀಗೆಯೇ CAX ಮತ್ತು CBA ತ್ರಿಭುಜಗಳು ಸಮರೂಪವಾಗಿರುತ್ತವೆ.

ಅದ್ದರಿಂದ ABX ಮತ್ತು CAX ತ್ರಿಭುಜಗಳೂ ಸಹ ಸಮಾನ ಕೋನಗಳನ್ನು ಹೊಂದಿರುತ್ತವೆ ಮತ್ತು ಸಮರೂಪವಾಗಿರುತ್ತವೆ.

ಅನುಮಿತ 1: ABX ಮತ್ತು CBA ತ್ರಿಭುಜಗಳು ಸಮರೂಪವಾಗಿರುವುದರಿಂದ,

$$\frac{AB}{BC} = \frac{BX}{AB} \text{ ಅಥವಾ } AB^2 = BC \cdot BX$$

ಅಥವಾ ABಯು BC ಮತ್ತು BX ಗಳ ಮಧ್ಯಾನುಪಾತಿಯಾಗಿರುವುದು,

ಹೀಗೆಯೇ $AC^2 = CB.CX$.

Cor 2: Since triangles ABX and CAX are similar, we have

$$\frac{BX}{AX}=\frac{AX}{CX} \text{ or } AX^2=BX.CX.$$

Cor 3 : Using results of Cor 1,

$$AB^2+AC^2=BC\ (BX+CX)=BC^2.$$

This is Bhaskara's proof of Pythagoras' theorem.

Construction 3.1

To divide a given line segment in a given ratio internally and externally.

Let AB be the given line segment and $m : n$ be the given ratio.



Fig. 3.10

Through A and B draw AL and BM parallel to each other. Cut off $AL=m$ units and $BM=BN=n$ units. Join LN. Let it meet AB at P. Join LM and produce it to meet AB produced at Q. P and Q divide AB internally and externally in the ratio $m : n$.

Note.—If $n>m$, we get Q on the other side of AB.

Construction 3.2

To find the fourth proportional to three given lengths a b and c.



Fig. 3.11

ಅನುಮಿತ 2: ABX ಮತ್ತು CAX ತ್ರಿಭುಜಗಳು ಸಮರೂಪವಾಗಿರುವುದರಿಂದ,

$$\frac{BX}{AX} = \frac{AX}{CX} \text{ ಅಥವಾ } AX^2 = BX.CX.$$

ಅನುಮಿತ 3:—ಮೊದಲನೆಯ ಅನುಮಿತದಿಂದ

$$AB^2 + AC^2 = BC\,(BX + CX) = BC^2.$$

ಇದು ಪೈಥಾಗೊರಸನ ಪ್ರಮೇಯಕ್ಕೆ ಭಾಸ್ಕರನ ಸಾಧನೆ.

ರಚನೆ 3·1 :

ದತ್ತ ರೇಖಾಖಂಡವನ್ನು ಕೊಟ್ಟಿರುವ ಪ್ರಮಾಣದಲ್ಲಿ ಅಂತರೀಯವಾಗಿಯೂ ಬಾಹ್ಯವಾಗಿಯೂ ವಿಭಾಗಿಸುವುದು.

ABಯು ದತ್ತ ರೇಖಾಖಂಡ ಮತ್ತು $m:n$ ಕೊಟ್ಟಿರುವ ಪ್ರಮಾಣ



ಚಿತ್ರ 3.10

A ಮತ್ತು B ಗಳ ಮೂಲಕ AL ಮತ್ತು BM ಸಮಾನಾಂತರ ರೇಖೆಗಳನ್ನೆಳೆಯಿರಿ. $AL = m$ ಮೂಲಮಾನಗಳು ಮತ್ತು $BM = BN = n$ ಮೂಲ ಮಾನಗಳಿರುವಂತೆ $L.M,N$ ಗಳನ್ನು ತೆಗೆದುಕೊಳ್ಳಿ. LN ಸೇರಿಸಿ. ಇದು AB ಯನ್ನು P ಯಲ್ಲಿ ಸಂಧಿಸಲಿ. LM ಸೇರಿಸಿ ಇದು ವೃದ್ಧಿಸಿದ AB ಯನು Q ನಲ್ಲಿ ಸಂಧಿಸಲಿ. ಈಗ P ಮತ್ತು Q ಗಳು AB ಯನ್ನು ಕ್ರಮವಾಗಿ ಅಂತರೀಯವಾಗಿ ಮತ್ತು ಬಾಹ್ಯವಾಗಿ $m:n$ ಪ್ರಮಾಣದಲ್ಲಿ ವಿಭಾಗಿಸುತ್ತವೆ.

$n>m$ ಆದಾಗ Q ಬಿಂದುವು ABಯ ಮತ್ತೊಂದು ಪಾರ್ಶ್ವದಲ್ಲಿರುವುದು.

ರಚನೆ 3·2 :

ಕೊಟ್ಟಿರುವ ಮೂರು ಉದ್ದಗಳ ಚತುರ್ಥಾನುಪಾತಿಯನ್ನು ಕಂಡುಹಿಡಿಯುವುದು.



ಚಿತ್ರ 3.11

Draw a line l and on it take $AB = a$ units and $BC = b$ units, on a convenient scale. Now draw another line m through A and cut off $AD = c$ Units. Join BD and through C draw CE parallel to BD to meet m in E. Now the length of the segment DE is the fourth proportional to a, b and c.

Construction 3.3

To find the mean proportional between two lengths.

Given : a and b are two lengths.



Fig. 3.12

Construction : Draw a line l and on it take points B and X such that $BX = a$ and on BX produced take C such that $XC = b$. Construct a semicircle on BC as diameter. Draw $XA \perp BC$ to meet the semicircle at A. Then AX is the required mean proportional, for $AX^2 = BX.XC$ by theorem 3.7, Cor 2.

(Note that AB is the mean proportional between BC and BX).

Construction 3.4

To find the third proportional between two lengths.

Given : a and b are two lengths.

Construction.—Draw a line l and take a segment BC on it such that $BC = b$. Draw a semicircle with BC as diameter

ಯಾವುದಾದರೊಂದು ರೇಖೆ l ಎಳೆದು ಅದರಲ್ಲಿ $AB=a$ ಮೂಲಮಾನಗಳನ್ನೂ ಮತ್ತು $BC=b$ ಮೂಲಮಾನಗಳನ್ನೂ ಯಾವುದಾದರೂ ಅನುಕೂಲವಾದ ಪ್ರಮಾಣದಲ್ಲಿ ತೆಗೆದುಕೊಳ್ಳಿ. ಈಗ Aಯ ಮೂಲಕ ಮತ್ತೊಂದು ರೇಖೆಯನ್ನೆಳೆದು ಅದರಲ್ಲಿ $AD=c$ ಮೂಲಮಾನಗಳನ್ನು ತೆಗೆದುಕೊಳ್ಳಿ. B ಮತ್ತು Dಗಳನ್ನು ಸೇರಿಸಿ. Cಯ ಮೂಲಕ CEಯನ್ನು ABಗೆ ಸಮಾನಾಂತರವಾಗಿ ಎಳೆಯಿರಿ. ಇದು BDಯನ್ನು Eನಲ್ಲಿ ಸಂಧಿಸಲಿ. ಈಗ DE ರೇಖಾಖಂಡದ ಉದ್ದವು a, b, c,ಗಳ ಚತುರ್ಥಾನುಪಾತಿಯಾಗಿರುವುದು.

ರಚನೆ 3·3:

ಕೊಟ್ಟಿರುವ ಎರಡು ಉದ್ದಗಳ ಮಧ್ಯಾನುಪಾತಿಯನ್ನು ಕಂಡು ಹಿಡಿಯುವುದು,

ದತ್ತ: a ಮತ್ತು bಗಳು ಕೊಟ್ಟಿರುವ ಎರಡು ಉದ್ದಗಳಾಗಿರಲಿ.



ಚಿತ್ರ 3.12

ರಚನೆ: ಯಾವುದಾದರೊಂದು l ರೇಖೆಯನ್ನೆಳೆದು ಅದರಲ್ಲಿ $BX=a$ ಆಗಿರುವಂತೆ B ಮತ್ತು Xಗಳನ್ನು ಗುರ್ತಿಸಿ. ವೃದ್ಧಿಸಿದ BX ಮೇಲೆ $XC=b$ ಆಗಿರುವಂತೆ Cಯನು ಗುರ್ತಿಸಿ. BC ವ್ಯಾಸವಾಗಿರುವ ಒಂದು ಅರ್ಧ ವೃತ್ತವನ್ನು ರಚಿಸಿ. ವ ತ ವನ್ನು Aನಲ್ಲಿ ಸಂಧಿಸುವಂತೆ, XA ರೇಖೆಯನ್ನು BCಗೆ ಲಂಬವಾಗಿ ಎಳೆಯಿರಿ. ಈಗ AX ಬೇಕಾಗಿರುವ ಮಧ್ಯಾನುಪಾತಿ. ಕಾರಣ ಮೇಲಿನ ಪ್ರಮೇಯ 3.7ರಿಂದ $AX^2=BX.CX$ ಆಗಿರುವುದು.

ABಯು BC ಮತ್ತು BXಗಳ ಮಧ್ಯಾನುಪಾತಿಯೆಂಬುದನ್ನು ಗಮನಿಸಿ.

ರಚನೆ 3·4:

ಕೊಟ್ಟಿರುವ ಎರಡು ಉದ್ದಗಳಿಗೆ ತೃತೀಯಾನುಪಾತಿಯನ್ನು ಕಂಡುಹಿಡಿಯುವುದು.

ದತ್ತ: a ಮತ್ತು bಗಳು ಕೊಟ್ಟಿರುವ ಎರಡು ಉದ್ದಗಳು.

ರಚನೆ: ಯಾವುದಾದರೂ l ರೇಖೆಯನ್ನು ಎಳೆದು ಅದರಲ್ಲಿ $BC=b$ ಆಗಿರುವಂತೆ B ಮತ್ತು Cಗಳನ್ನು ತೆಗೆದುಕೊಳ್ಳಿ. BC ವ್ಯಾಸವಾಗಿರುವ ಒಂದು ಅರ್ಧವೃತ್ತವನ್ನು ರಚಿಸಿ. ಈಗ $BA=a$ ಆಗಿರುವಂತೆ ವೃತ್ತದಲ್ಲಿ A ಬಿಂದುವನ್ನು

and cut off $BA = a$. Draw $AX \perp BC$. Now BX is the required third proportional, for $AX^2 = BX.BC$.



Fig. 3.13

Construction 3.5

To cut off a given fraction of a triangle by a line drawn parallel to a side.



Fig. 3.14

It is required to draw a line $XY \parallel BC$ such that

$\triangle AXY = \frac{m}{n} \triangle ABC$

Construction : Find a point P on AB such that

$$AP = \frac{m}{n} AB$$

Now let AX be the mean proportional between AP and AB. Through X draw XY parallel to BC then $\triangle AXY = \triangle \frac{m}{n} ABC$.

ತೆಗೆದುಕೊಳ್ಳಿ. AXನ್ನು BCಗೆ ಲಂಬವಾಗಿ ಎಳೆಯಿರಿ. ಈಗ BX ಬೇಕಾಗಿರುವ ತೃತೀಯಾನುಪಾತಿ, ಕಾರಣ $AX^2 = BX.BC$.



ಚಿತ್ರ 3.13

ರಚನೆ 3·5:

ದತ್ತ ತ್ರಿಭುಜದ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ರೇಖೆಯಿಂದ ತ್ರಿಭುಜದ ಕ್ಷೇತ್ರಫಲದ ಗೊತ್ತಾದ ಭಿನ್ನಾಂಶವನ್ನು ವಿಭಾಗಿಸುವುದು.



ಚಿತ್ರ 3.14

ಕರ್ತವ್ಯ: $\Delta AXY = \frac{m}{n} \Delta ABC$ ಆಗುವಂತೆ BCಗೆ ಸಮಾನಾಂತರವಾಗಿ XY ರೇಖೆಯನ್ನು ಎಳೆಯುವುದು.

ರಚನೆ: $AP = \frac{m}{n} AB$ ಆಗಿರುವಂತೆ AB ಯ ಮೇಲೆ P ಬಿಂದುವನ್ನು ಕಂಡುಹಿಡಿಯಿರಿ.

ಈಗ AP ಮತ್ತು AB ಗಳ ಮಧ್ಯಾನುಪಾತಿ AX ಆಗಿರಲಿ. Xನ ಮೂಲಕ XY ನ್ನು BC ಗೆ ಸಮಾನಾಂತರವಾಗಿ ಎಳೆಯಿರಿ.

ಈಗ $\Delta AXY = \frac{m}{n} \Delta ABC$ ಆಗಿರುವುದು.

Proof : Triangles AXY and ABC are similar.

$$\therefore \frac{\triangle AXY}{\triangle ABC} = \frac{AX^2}{AB^2} = \frac{AP.AB}{AB^2} = \frac{AP}{AB} = \frac{m}{n}$$

Construction 3.6

To cut off a given fraction of a triangle by a line drawn perpendicu ar to a side.

It is required to draw a line $XY \perp BC$ such that th area cut off is equa to $\frac{m}{n} \triangle ABC$.



Fig. .15

Construction.—Draw $AL \perp BC$. On BC find P such that $BP = \frac{m}{n} BC$. Find BX the mean proportional between BL and BP. Through X draw $YX \perp BC$. Then area $\triangle BXY = \frac{m}{n} \triangle ABC$.

ಸಾಧನೆ: AXY ಮತ್ತು ABC ತ್ರಿಭುಜಗಳು ಸಮರೂಪವಾಗಿವೆ.

ಆದರಿಂದ $$\frac{\triangle AXY}{\triangle ABC} = \frac{AX^2}{AB^2} = \frac{AP\cdot AB}{AB^2} = \frac{AP}{AB} = \frac{m}{n}$$

ರಚನೆ 3:6

ದತ್ತ ತ್ರಿಭುಜದ ಒಂದು ಬಾಹುವಿಗೆ ಲಂಬವಾಗಿ ಎಳೆದ ರೇಖೆಯಿಂದ ತ್ರಿಭುಜದ ತ್ರದ ಭಿನ್ನಾಂಶವನ್ನು ವಿಭಾಗಿಸುವುದು.

ಕರ್ತವ : ABC ತ್ರಿಭುಜದ $\frac{m}{n}$ ಭಿನ್ನಾಂಶದಷ್ಟು ಕ್ಷೇತ್ರಫಲವನ್ನು BC ಗೆ ಂಬವಾಗಿ ಎಳೆದ XY ರೇಖೆಯಿಂದ ವಿಭಾಗಿಸುವುದು.



ಚಿತ್ರ 3.15

ರಚನೆ: BC ಯ ಮೇಲೆ $BP = \frac{m}{n} BC$ ಆಗಿರುವಂತೆ P ಬಿಂದುವನ್ನು ಂಡು ಹಿಡಿಯಿರಿ. AL ನ್ನು BC ಗೆ ಲಂಬವಾಗಿ ಎಳೆಯಿರಿ. BL ಮತ್ತು BP ಳ ಮಧ್ಯಾನುಪಾತಿಯನ್ನು ಕಂಡುಹಿಡಿಯಿರಿ. ಇದು BX ಆಗಿರಲಿ. XY ನ್ನು BC ಗೆ ಲಂಬವಾಗಿ ಎಳೆಯಿರಿ. ಈಗ $\triangle BXY = \frac{m}{n} \triangle ABC$ ಆಗಿರುವುದು.

Note.—While taking $BP = \frac{m}{n} BC$, if P lies on the other side of L, then take $CP = \frac{m}{n} BC$. In this case,

$$\text{area} \triangle CXY = \frac{m}{n} \triangle ABC$$

Proof : $\frac{\triangle BXY}{\triangle ABL} = \frac{BX^2}{BL^2}$ (since the triangles are similar)

$$= \frac{BP.BL}{BL^2} = \frac{BP}{BL}$$

Also $\frac{\triangle ABL}{\triangle ABC} = \frac{BL}{BC}$ (since they have the same altitude AL)

$$\therefore \quad \frac{\triangle BXY}{\triangle ABC} = \frac{BP}{BL} \cdot \frac{BL}{BC} = \frac{BP}{BC} = \frac{m}{n} .$$

Construction 3.8

To construct a triangle similar to a given triangle and equal in area to another given traingle.

It is required to construct a triangle similar to triangle ABC and equal in area to $\triangle DEF$.



Fig.3 ·16

ಸೂಚನೆ: $BP = \frac{m}{n}\ BC$ ತೆಗೆದುಕೊಳ್ಳುವಾಗ, P ಯು L ಬಿಂದುವಿನ ಮತ್ತೊಂದು ಪಾರ್ಶ್ವದಲ್ಲಿ ಬಂದರೆ, ಆಗ $CP = \frac{m}{n}\ BC$ ತೆಗೆದುಕೊಳ್ಳಿ. ಈ ಸಂದರ್ಭದಲ್ಲಿ $\triangle CXY = \frac{m}{n} \triangle ABC$ ಆಗಿರುವುದು.

ಸಾಧನೆ: $\frac{\triangle BXY}{\triangle ABL} = \frac{BX^2}{BL^2}$ (∵ ತ್ರಿಭುಜಗಳು ಸಮರೂಪವಾಗಿವೆ)

$$= \frac{BP.BL}{BL^2} = \frac{BP}{BL}$$

ಪುನಃ $\frac{\triangle ABL}{\triangle ABC} = \frac{BL}{BC}$ (∵ ಎರಡು ತ್ರಿಭುಜಗಳ ಎತ್ತರವೂ AD ಆಗಿದೆ.)

$$\therefore \quad \frac{\triangle BXY}{\triangle ABC} = \frac{BP}{BL} \cdot \frac{BL}{BC} = \frac{BP}{BC} = \frac{m}{n}\ .$$

ರಚನೆ 3.8:

ದತ್ತ ತ್ರಿಭುಜವೊಂದಕ್ಕೆ ಸಮರೂಪವಾಗಿಯೂ ಮತ್ತೊಂದಕ್ಕೆ ಕ್ಷೇತ್ರಫಲದಲ್ಲಿ ಸಮವಾಗಿಯೂ ಇರುವಂತೆ ತ್ರಿಭುಜವನ್ನು ರಚಿಸುವುದು.

ಕರ್ತವ್ಯ: ABC ತ್ರಿಭುಜಕ್ಕೆ ಸಮರೂಪವಾಗಿಯೂ ಮತ್ತು DEF ತ್ರಿಭುಜದ ಕ್ಷೇತ್ರಫಲಕ್ಕೆ ಸಮವಾಗಿಯೂ ಇರುವ ತ್ರಿಭುಜವನ್ನು ರಚಿಸುವುದು.



ಚಿತ್ರ 3.16

At E construct an angle equal to $\angle B$ and at F construct an angle equal to $\angle C$. Let the two lines meet in G. Draw DH parallel to EF, to meet EG at P.

Find EX the mean proportional between EH and EG. Draw $XY \parallel GF$ to meet EF (or EF produced) at Y. Then XEY is the required traingle.

Proof : $\dfrac{\triangle EXY}{\triangle GEF} = \dfrac{EX^2}{EG^2} = \dfrac{EH.EG}{EG^2} = \dfrac{EH}{EG}$

Also, $\dfrac{\triangle EHF}{\triangle GEF} = \dfrac{EH}{EG}$ since the two traingles have the same altitude from F.

$$\therefore \quad \frac{\triangle EXY}{\triangle GEF} = \frac{\triangle EHF}{\triangle GEF}$$

$\therefore \quad \triangle EXY = \triangle EHF.$

But $\triangle DEF = \triangle EHF$

$\therefore \quad \triangle DEF = \triangle EXY$

Also $\triangle EXY$ is similar to $\triangle GEF$. *i.e.*, to $\triangle ABC$.

$\therefore EXY$ is the required traingle.

Exercises 3.1

1. Prove that two isosceles traingles having their vertical angles equal are similar.

2. ABC and PQR are similar traingles having $AB = 4$ $BC = 5$, $\angle B = 70°$ and $CA = 3$. If $QR = 7.5$, write down the value of $\angle P$, PQ and PR.

3. In any triangle ABC show that the median AD bisects all lines parallel to the base BC.

ರಚನೆ: E ಬಿಂದುವಿನಲ್ಲಿ $\angle B$ಗೆ ಸಮವಾದ ಕೋನವನ್ನೂ ಮತ್ತು F ನಲ್ಲಿ $\angle C$ ಗೆ ಸಮವಾದ ಕೋನವನ್ನೂ ರಚಿಸಿ. ಈ ರೇಖೆಗಳು G ಬಿಂದುವಿನಲ್ಲಿ ಸಂಧಿಸಲಿ. EF ಗೆ ಸಮಾನಾಂತರವಾಗಿರುವಂತೆ DH ಸರಳ ರೇಖೆಯನ್ನೆಳೆಯಿರಿ. ಇದು EG ಯನ್ನು P ಯಲ್ಲಿ ಸಂಧಿಸಲಿ.

ಈಗ EH ಮತ್ತು EG ಗಳಿಗೆ ಮಧ್ಯಾನುಪಾತಿಯಾಗಿರುವಂತೆ EX ನ್ನು ಕಂಡುಹಿಡಿಯಿರಿ. ಈಗ EF ನ್ನು Y ನಲ್ಲಿ ಸಂಧಿಸುವಂತೆ XY ನ್ನು GF ಗೆ ಸಮಾನಾಂತರವಾಗಿ ಎಳೆಯಿರಿ. XEY ಎಂಬುದು ಬೇಕಾದ ತ್ರಿಭುಜ.

ಸಾಧನೆ: $$\frac{\triangle EXY}{\triangle GEF} = \frac{EX^2}{EG^2} = \frac{EH \cdot EG}{EG^2} = \frac{EH}{EG}$$

ಮತ್ತು $$\frac{\triangle EGF}{\triangle GEF} = \frac{EH}{EG}$$ (ಕಾರಣ ಎರಡು ತ್ರಿಭುಜಗಳಲ್ಲಿಯೂ F ನಿಂದ ಅಭಿಮುಖ ಬಾಹುಗಳಿಗೆ ಎಳೆದ ಲಂಬವು ಒಂದೇ ಆಗಿದೆ)

$$\therefore \quad \frac{\triangle EXY}{\triangle GEF} = \frac{\triangle EHF}{\triangle GEF}$$

$$\therefore \quad \triangle EXY = \triangle EHF$$

ಆದರೆ $\triangle DEF = \triangle EHF$

$$\therefore \quad \triangle DEF = \triangle EXY.$$

ಇದೂ ಅಲ್ಲದೆ $\triangle EXY$ ಮತ್ತು $\triangle EGF$ ಸಮರೂಪ ತ್ರಿಭುಜಗಳು

ಅಥವಾ $\triangle EXY$ ಮತ್ತು $\triangle ABC$ ಸಮರೂಪ ತ್ರಿಭುಜಗಳು.
ಆದ್ದರಿಂದ EXY ಬೇಕಾದ ತ್ರಿಭುಜ.

ಅಭ್ಯಾಸಗಳು 3.1

1 ಶಿರಃ ಕೋನಗಳು ಸಮವಾಗಿರುವ ಎರಡು ಸಮದ್ವಿಬಾಹುತ್ರಿಭುಜಗಳು ಸಮರೂಪ ತ್ರಿಭುಜಗಳೆಂದು ಸಾಧಿಸಿ.

2 ABC ಮತ್ತು PQR ಸಮರೂಪ ತ್ರಿಭುಜಗಳಲ್ಲಿ $AB=4$, $BC=5$, $\angle B=70°$ ಮತ್ತು $CA=3$ ಆಗಿದೆ. $QR=7.5$ ಆದರೆ $\angle P$, PQ, ಮತ್ತು PR ಗಳ ಬೆಲೆಗಳನ್ನು ಬರೆಯಿರಿ.

3 ಯಾವುದೇ ತ್ರಿಭುಜ ABC ಯಲ್ಲಿ, BC ಗೆ ಸಮಾನಾಂತರವಾದ ಎಲ್ಲ ರೇಖೆಗಳನ್ನೂ AD ಮಧ್ಯರೇಖೆಯು ಅರ್ಧಿಸುವುದೆಂದು ಸಾಧಿಸಿ.

4 Prove that the chords of two circles which subter equal angles either at the centre or at the circumferen are in the ratio of the diameters of the circles.

5 If two triangles have the sides of one respective parallel to the sides of the other, prove that the triangl are similar.

6 If two triangles have the sides of one respective perpendicular to the sides of the other, prove that tl triangles are similar.

7 If two triangles are similar prove that (i) corre ponding medians (ii) corresponding altitudes (iii) bisecto of corresponding angles (vi) the circumradii (v) the i radii are in the same ratio as the corresponding sides.

8 If AB and CD are two chords of a circle intersecti at X prove that $AX.XB = CX.XD$. (work out both case X an internal point and X outside the circle.)

9 If a secant drawn through O cuts a circle in P and and if OT is a tangent prove that triangles OTQ, ar OPT are similar and deduce that $OT^2 = OP.OQ$.

10 If two lines AB and CD intesect in X and it $AX.XB = CX.XD$, prove that A, B, C, D are concyli (Converse of *ex.* 8)

11 ABC is a triangle. O is a point on BA produce such that $OA.OB = OC^2$. Prove that OC touches th circle ABC. (Converse of *ex.* 9)

12 ABC is a triangle. The tangent to the circun circle of the triangle drawn at A meets BC produced at (Show that

$$\frac{OB}{OC} = \frac{AB^2}{AC^2}.$$

13 The bisector of $\angle A$ of triangle ABC meets B at O and the circumcircle at E, prove that
$AB \cdot AC = AD^2 + AD \cdot AE$ and hence
$AB \cdot AC = AD^2 + BD \cdot DC$.

4 ಕೇಂದ್ರದಲ್ಲಿಯಾಗಲೀ ಅಥವಾ ಪರಿಧಿಯಲ್ಲಿಯಾಗಲೀ ಸಮವಾದ ಕೋನಗಳನ್ನುಂಟುಮಾಡುವ ಎರಡು ವೃತ್ತಗಳ ಜ್ಯಾಗಳು, ಆ ವೃತ್ತಗಳ ವ್ಯಾಸಗಳ ಪ್ರಮಾಣದಲ್ಲಿರುತ್ತವೆಂದು ತೋರಿಸಿ.

5 ಎರಡು ತ್ರಿಭುಜಗಳಲ್ಲಿ ಒಂದರ ಬಾಹುಗಳು ಕ್ರಮವಾಗಿ ಮತ್ತೊಂದರ ಬಾಹುಗಳಿಗೆ ಸಮಾನಾಂತರವಾಗಿದ್ದರೆ ತ್ರಿಭುಜಗಳು ಸಮರೂಪವಾಗಿರುತ್ತವೆಯೆಂದು ಸಾಧಿಸಿ.

6 ಎರಡು ತ್ರಿಭುಜಗಳಲ್ಲಿ ಒಂದರ ಬಾಹುಗಳು ಕ್ರಮವಾಗಿ ಮತ್ತೊಂದರ ಬಾಹುಗಳಿಗೆ ಲಂಬವಾಗಿದ್ದರೆ, ಆ ತ್ರಿಭುಜಗಳು ಸಮರೂಪವಾಗಿರುತ್ತವೆಯೆಂದು ಸಾಧಿಸಿ.

7 ಎರಡು ತ್ರಿಭುಜಗಳು ಸಮರೂಪವಾಗಿದ್ದರೆ, (i) ಸಹಗಮ್ಯವಾದ ಮಧ್ಯರೇಖೆಗಳೂ (ii) ಸಹಗಮ್ಯ ಕೋನಗಳ ಅರ್ಧಕಗಳೂ (iii) ಸಹಗಮ್ಯ ಲಂಬಕಗಳೂ (iv) ಪರಿವೃತ್ತಗಳ ತ್ರಿಜ್ಯಗಳೂ (v) ಅಂತರ್‌ವೃತ್ತಗಳ ತ್ರಿಜ್ಯಗಳೂ, ಸಹಗಮ್ಯ ಬಾಹುಗಳ ಪ್ರಮಾಣದಲ್ಲಿಯೇ ಇರುತ್ತವೆಂದು ಸಾಧಿಸಿ.

8 ಒಂದು ವೃತ್ತದ AB ಮತ್ತು CD ಎರಡು ಜ್ಯಾಗಳು X ನಲ್ಲಿ ಸಂಧಿಸುತ್ತವೆ. $AX.XB = CX.XD$ ಎಂದು ಸಾಧಿಸಿ. [X. ವೃತ್ತದ ಅಂತರೀಯ ಬಿಂದು, ಅಥವಾ ಬಾಹ್ಯ ಬಿಂದು—ಎರಡೂ ಸಂದರ್ಭಗಳನ್ನು ಸಾಧಿಸಿರಿ.]

9 O ಬಿಂದುವಿನ ಮೂಲಕ ವೃತ್ತವೊಂದಕ್ಕೆ ಎಳೆದ ಛೇದಕ ರೇಖೆಯು ವೃತ್ತವನ್ನು P ಮತ್ತು Q ಬಿಂದುಗಳಲ್ಲಿ ಸಂಧಿಸುವುದು. OTಯು ವೃತ್ತಕ್ಕೆ ಸ್ಪರ್ಶರೇಖೆಯಾಗಿದ್ದರೆ, OTQ ಮತ್ತು OPT ತ್ರಿಭುಜಗಳು ಸಮರೂಪವಾಗಿವೆಯೆಂದೂ, $OT^2 = OP.OQ$ ಎಂದೂ ಸಾಧಿಸಿ.

10 AB ಮತ್ತು CD ರೇಖಾಖಂಡಗಳು X ನಲ್ಲಿ ಛೇಧಿಸುತ್ತವೆ. $AX.XB = CX.XD$ ಆಗಿದ್ದರೆ, A, B, C, D ಗಳು ಚಕ್ರೀಯವಾಗಿವೆಯೆಂದು ಸಾಧಿಸಿ. (ಅಭ್ಯಾಸ 8 ರ ವಿಲೋಮ).

11 ABC ಒಂದು ತ್ರಿಭುಜ. ವೃದ್ಧಿಸಿದ BA ಮೇಲೆ $OA.OB = OC^2$ ಆಗುವಂತೆ O ಬಿಂದುವನ್ನು ತೆಗೆದುಕೊಂಡಿದೆ. OCಯು ABC ವೃತ್ತವನ್ನು ಸ್ಪರ್ಶಿಸುವುದೆಂದು ಸಾಧಿಸಿ (ಅಭ್ಯಾಸ 9 ರ ವಿಲೋಮ).

12 ABC ಒಂದು ತ್ರಿಭುಜ. ತ್ರಿಭುಜದ ಪರಿವೃತ್ತಕ್ಕೆ A ಯಲ್ಲಿ ಎಳೆದ ಸ್ಪರ್ಶರೇಖೆಯು BC ಯನ್ನು O ನಲ್ಲಿ ಸಂಧಿಸುವುದು. $\dfrac{OB}{OC} = \dfrac{AB^2}{AC^2}$ ಎಂದು ಸಾಧಿಸಿ.

13 ABC ತ್ರಿಭುಜದ A ಕೋನದ ಅರ್ಧಕವು BC ಯನ್ನು D ನಲ್ಲಿಯೂ ಮತ್ತು ಪರಿವೃತ್ತವನ್ನು E ನಲ್ಲಿಯೂ ಸಂಧಿಸುವುದು $AB.AC = AD^2 + AD.AE$ ಎಂದು ಸಾಧಿಸಿ ಮತ್ತು ಇದರಿಂದ $AB.AC = AD^2 + BD.DC$ ಎಂದು ಸಾಧಿಸಿ.

14 Prove that the rectangle contained by an two sides of a triangle is equal to the rectangle containe by the altitude to the third side and the diameter of th circle circumscribed to the triangle.

(Hint : In $\triangle ABC$, to prove $AB.\ AC =$ altitude AL circum diameter, draw the circum diameter AX an join XB).

15 Two circle intersect at P. The tangents at I to the two circles form chords PQ, PR. Show that PC and PR are proportional to the diameters of the circles.

16 ABC is an isosceles triangle with $AB = AC$ The perpendicular bisector of AB meets BC in D. Sho that $BC \cdot BD = BA^2$.

(Hint : Show that $\triangle ACB$ is similar to $\triangle BAD$).

17 Show that the area of a regular hexagon inscribe in a circle is $\frac{3}{4}$ the area of a regular hexagon circumscribe to the circle.

18 $ABCD$ is a parallelogram. CD is bisected at E AC and BE intersect at P. Show that AC is trisected at P

19 AB is a diameter of a circle and AM, BN ar drawn perpendicular to the tangent at any point C. Sho that the area of triangle ABC is equal to the sum of th areas of triangles ACM and CBN.

(Hint : Show that $\triangle AMC$ is similar to $\triangle BNC$).

20 Triangle ABC is right angled at A. If AD i drawn perpendicular to BC, prove that

$$AB^2 : AC^2 = BD : DC.$$

21 P, Q, R are points on the sides BC, CA, AB o $\triangle ABC$ such that $BP = 2\ PC$, $CQ = \frac{1}{3}\ QA$ and $AR = \frac{3}{4}\ RB$ Show that the area of $\triangle PQR = \dfrac{3}{14}$ area of $\triangle ABC$.

22 D and E are points in the base BC of $\triangle ABC$ such that $\angle ADB = \angle BCA$ and $\angle CAE = \angle CBA$.

Prove that— (i) $BD.CE = AD.AE$ and
(ii) $AB^2 = BC.BD$.

14 ಒಂದು ತ್ರಿಭುಜದ ಎರಡು ಬಾಹುಗಳಿಂದಾದ ಆಯವು, ತ್ರಿಭುಜದ ಲಂಬಕ ಮತ್ತು ಪರಿವೃತ್ತದ ವ್ಯಾಸ ಇವುಗಳಿಂದ ಆದ ಆಯಕ್ಕೆ ಸಮವಾಗಿರುವುದು ಎಂದು ಸಾಧಿಸಿ.

(ಸೂಚನೆ : ABC ತ್ರಿಭುಜದಲ್ಲಿ, $AB.AC =$ ಎತ್ತರ AD. ಪರಿವೃತ್ತದ ತ್ರಿಜ್ಯ ಎಂದು ಸಾಧಿಸಲು, ಪರಿವೃತ್ತದ ವ್ಯಾಸ AXನ್ನು ಎಳೆದು, XB ಸೇರಿಸಿ.)

15 ಎರಡು ವೃತ್ತಗಳು P ಯಲ್ಲಿ ಸಂಧಿಸುವುವು. P ಬಿಂದುವಿನಿಂದ ವೃತ್ತಗಳಿಗೆ ಎಳೆದ ಸ್ಪರ್ಶ ರೇಖೆಗಳು PQ ಮತ್ತು PR ಜ್ಯಾಗಳಾಗಿವೆ. PQ ಮತ್ತು PR ಗಳು ವೃತ್ತಗಳ ವ್ಯಾಸಗಳ ಅನುಪಾತದಲ್ಲಿವೆಯೆಂದು ಸಾಧಿಸಿ.

16 ABC ಒಂದು ಸಮದ್ವಿಬಾಹು ತ್ರಿಭುಜ. ಇದರಲ್ಲಿ $AB = AC$. ABಯ ಲಂಬಾರ್ಧಕವು BCಯನ್ನು Dಯಲ್ಲಿ ಸಂಧಿಸುವುದು $BC \cdot BD = BA^2$ ಎಂದು ಸಾಧಿಸಿ.

(ಸೂಚನೆ : BCA ಮತ್ತು BAD ತ್ರಿಭುಜಗಳು ಸಮರೂಪವೆಂದು ತೋರಿಸಿ.)

17 ವೃತ್ತಾಂತರ್ಗತವಾದ ಒಂದು ಸಮ ಷಡ್ಭುಜದ ಕ್ಷೇತ್ರಫಲವು ಆ ವೃತ್ತದ ವೃತ್ತೋಪರಿ ಸಮ ಷಡ್ಭುಜದ $\frac{3}{4}$ ರಷ್ಟಿರುವುದೆಂದು ಸಾಧಿಸಿ.

18 $ABCD$ಯು ಒಂದು ಸಮಾನಾಂತರ ಚತುರ್ಭುಜ. CD ಯನ್ನು E ನಲ್ಲಿ ಅರ್ಧಿಸಿದೆ. AC ಮತ್ತು BE ಗಳು P ಯಲ್ಲಿ ಸಂಧಿಸುವುವು. AC ಯು P ಯಲ್ಲಿ ತ್ರಿಭಾಗಿಸಲ್ಪಟ್ಟಿದೆಯೆಂದು ಸಾಧಿಸಿ.

19 AB ಯು ಒಂದು ವೃತ್ತದ ವ್ಯಾಸ ಮತ್ತು AM, BN ಗಳನ್ನು ಯಾವುದಾದರೊಂದು ಬಿಂದು C ಯಲ್ಲಿ ಎಳೆದ ಸ್ಪರ್ಶ ರೇಖೆಗೆ ಲಂಬಗಳಾಗಿ ಎಳೆದಿದೆ. ABC ತ್ರಿಭುಜದ ಕ್ಷೇತ್ರಫಲವು, ACM ಮತ್ತು CBN ತ್ರಿಭುಜಗಳ ಕ್ಷೇತ್ರಫಲಗಳ ಮೊತ್ತಕ್ಕೆ ಸಮವೆಂದು ಸಾಧಿಸಿ.

(ಸೂಚನೆ : AMC ಮತ್ತು CNB ತ್ರಿಭುಜಗಳು ಸಮರೂಪವಾಗಿವೆಯೆಂದು ಸಾಧಿಸಿ).

20 ABC ತ್ರಿಭುಜದಲ್ಲಿ $\angle A$ ಯು ಲಂಬ ಕೋನ. AD ಯು BC ಗೆ ಎಳೆದ ಲಂಬವಾದರೆ, $AB^2 : AC^2 = BD : DC$ ಎಂದು ಸಾಧಿಸಿ.

21 ABC ತ್ರಿಭುಜದ ಬಾಹುಗಳ ಮೇಲೆ P, Q, R ಬಿಂದುಗಳನು ಕ್ರಮವಾಗಿ $BP = 2\ PC$, $CQ = \frac{1}{3} QA$ ಮತ್ತು $AR = \frac{3}{4} RB$ ಆಗುವಂತೆ ತೆಗೆದುಕೊಂಡಿದೆ. PQR ತ್ರಿಭುಜದ ಕ್ಷೇತ್ರ ಫಲವು ABC ತ್ರಿಭುಜದ ಕ್ಷೇತ್ರಫಲದ $\frac{3}{14}$ ರಷ್ಟಿರುವುದೆಂದು ಸಾಧಿಸಿ.

22 ABC ತ್ರಿಭುಜದ ಪಾದ BCಯಲ್ಲಿ D ಮತ್ತು E ಬಿಂದುಗಳನು $\angle DAB = \angle BCA$ ಮತ್ತು $\angle CAE = \angle CBA$ ಆಗುವಂತೆ ತೆಗೆದುಕೊಂಡಿದೆ, (i) $BD.CE = AD.AE$ ಮತ್ತು (ii) $AB^2 = BC \cdot BD$ ಎಂದು ಸಾಧಿಸಿ.

23 Two circles touch at O externally. AOB and COD are two straight lines cutting the circles again in A, B and C, D.

Prove that—

$$\frac{OA}{OB} = \frac{OC}{OD}.$$

24 D is a point on the side AB of a $\triangle ABC$ such that $AD = 3\ BD$. If DQ and DP are drawn parallel to BC and CA respectively, show that the area of the parallelogram $DQCB$ is $\frac{3}{8}$ that of triangle ABC.

Practical Exercises :—

1. Draw a line 2·7″ long and divide it in the atio 3 : 2 internally and externally.

2. Draw a line 4·8″ long and divide it in the ratio 5 : 3 internally and externally.

3. Find the third proportional of lengths 4 and 6 units geometrically.

5. Find the sq. roots of 2 and 15 geometrically by the method of mean proportional. Hence again find the square root of $2\sqrt{2}$.

6. Construct $\triangle$ ABC having.

(*a*) $BC = 4{\cdot}5$ cms $AB : AC = 5 : 4$ and median $AD = 5$ cms.

(Hint : Draw the Appolonius' circle. From D the mid point of BC, cut off $DA = 5$ cms).

(*b*) $BC = 3.5''$ $AB : AC = 4 : 3$ Median $AD = 4''$.

(*c*) $BC = 6.7$ cms $AB : AC = 7 : 3$ $\angle A = 50°$.

(Construct a segment of circle on BC containing an angle 50° to meet the Appolonius' circle at A).

23 ಎರಡು ವೃತ್ತಗಳು ಬಾಹ್ಯವಾಗಿ O ಬಿಂದುವಿನಲ್ಲಿ ಸ್ಪರ್ಶಿಸುತ್ತವೆ. AOB ಮತ್ತು COD ಎರಡು ಸರಳ ರೇಖೆಗಳ ವೃತ್ತವನ್ನು ಪುನಃ A, B ಮತ್ತು C, D ಬಿಂದುಗಳಲ್ಲಿ ಛೇದಿಸುವಂತೆ ಎಳೆದಿದೆ.

$$\frac{OA}{OB} = \frac{OC}{OD}$$ ಎಂದು ಸಾಧಿಸಿ.

24 ABC ತ್ರಿಭುಜದ AB ಬಾಹುವಿನ ಮೇಲೆ $AD=3BD$ ಆಗುವಂತೆ D ಬಿಂದುವನ್ನು ತೆಗೆದುಕೊಂಡಿದೆ. DQ ಮತ್ತು DP ಗಳನ್ನು ಕ್ರಮವಾಗಿ BC ಮತ್ತು CA ಗಳಿಗೆ ಸಮಾನಾಂತರವಾಗಿ ಎಳೆದರೆ, $DQCB$ ಸಮಾನಾಂತರ ಚತುರ್ಭುಜದ ಕ್ಷೇತ್ರಫಲವು ABC ತ್ರಿಭುಜದ ಕ್ಷೇತ್ರಫಲದ $\frac{3}{8}$ ರಷ್ಟಿರುವುದೆಂದು ಸಾಧಿಸಿ.

ಪ್ರಾಯೋಗಿಕ ಅಭ್ಯಾಸಗಳು:—

1. $2{\cdot}7''$ ಉದ್ದವಿರುವ ರೇಖಾಖಂಡವನ್ನೆಳೆದು ಅದನ್ನು $3:2$ ಪ್ರಮಾಣದಲ್ಲಿ ಅಂತರೀಯವಾಗಿ ಮತ್ತು ಬಾಹ್ಯವಾಗಿ ವಿಭಾಗಿಸಿ.

2. $4{\cdot}8''$ ಉದ್ದವಿರುವ ರೇಖಾಖಂಡವನ್ನೆಳೆದು ಅದನ್ನು $5:3$ ಪ್ರಮಾಣದಲ್ಲಿ ಅಂತರೀಯವಾಗಿ ಮತ್ತು ಬಾಹ್ಯವಾಗಿ ವಿಭಾಗಿಸಿ.

3. ಕ್ರಮವಾಗಿ 4 ಮತ್ತು 6 ಮೂಲಮಾನಗಳ ಉದ್ದವುಳ್ಳ ರೇಖಾಭಾಗಗಳ ತೃತೀಯಾನುಪಾತಿಯನ್ನು ರೇಖಾಚಿತ್ರದಿಂದ ಕಂಡು ಹಿಡಿಯಿರಿ.

4. 2 ಮತ್ತು 15 ಈ ಸಂಖ್ಯೆಗಳ ವರ್ಗಮೂಲಗಳನ್ನು ರೇಖಾಚಿತ್ರಗಳಿಂದ ಮಧ್ಯಾನುಪಾತಿಗಳ ಕ್ರಮದಲ್ಲಿ ಕಂಡುಹಿಡಿಯಿರಿ. ಇದರಿಂದ $2\sqrt{2}$ ಸಂಖ್ಯೆಯ ವರ್ಗಮೂಲವನ್ನು ಕಂಡು ಹಿಡಿಯಿರಿ.

6. ಈ ಕೆಳಗಿನ ದತ್ತಾಂಶಗಳಿಂದ ABC ತ್ರಿಭುಜವನು ರಚಿಸಿ.

(a) $BC=4{\cdot}5$ ಸೆಂ. ಮಿ. $AB : AC = 5:4$ ಮತ್ತು ಮಧ್ಯ ರೇಖೆ $AD = 5$ ಸೆಂ. ಮಿ.

(ಸೂಚನೆ: ಅಪಲೋನಿಯಸ್ ವೃತ್ತವನ್ನೆಳೆದು, BC ಯ ಮಧ್ಯಬಿಂದು D ಯಿಂದ $DA=5$ ಸೆಂ. ಮಿ. ಕತ್ತರಿಸಿ)

(b) $BC = 3{\cdot}5''$ $AB : AC = 4 : 3$ ಮಧ್ಯರೇಖೆ $AD = 4''$.

(c) $BC=6{\cdot}7$ ಸೆಂ. ಮಿ. $AB : AC = 7 : 3$ $\angle A=50^\circ$. (BCಯ ಮೇಲೆ 50° ಇರುವ ವೃತ್ತಖಂಡವನ್ನು ರಚಿಸಿ. ಇದು ಅಪಲೋನಿಯಸ್ ವೃತ್ತವನ್ನು A ನಲ್ಲಿ ಸಂಧಿಸಲಿ.)

(*d*) $AB : AC = 4 : 3$, $\angle B = 50°$ and perimeter 15 cms

(*e*) $BC = 2.9''$, $AB : AC = 3 : 5$ and internal bisector of angle $A = 2.3''$.

(*f*) $BC = 5.3$ cms, $AB : AC = 5 : 2$ and external bisector of $\angle A = 3.5$ cms.

7. Construct $\triangle ABC$ having $AB = 4.2$ cms, $AC = 5.$ cms and $\angle ABC = 60°$. Construct a triangle similar to this and perimeter 12 cms.

8. Construct $\triangle ABC$ given, $BC = 7$ cms $\angle B = 6$ and $AB = 5$ cms. Cut off $\frac{2}{3}$ of its area (i) by a line drawn parallel to BC (ii) by a line drawn perpendicular to BC.

9. Construct a triangle whose sides are in the ratio $5 : 7 : 9$ and whose area is 10 square cms.

10. Construct an equilateral triangle of area 16 sq. cms.

11. Construct $\triangle ABC$ given, $BC = 6.4$ cms $AB : AC = 5 : 3$ and median $BE = 6.6$ cms.

12. Construct a regular hexagon of area 60 sq. cms.

(Hint : Construct an equilateral $\triangle$ of area 10 sq. cms).

13. Construct a parallelogram $ABCD$ in which $AB = 2.5''$, $AD = 2''$, $BD = 3.4''$. Divide the parallelogram into three equal parts by two lines parallel to diagonal AC.

(d) $AB : AC = 4 : 3$ $\angle B = 50°$ ಮತ್ತು ಸುತ್ತಳತೆ 15 ಸೆಂ. ಮಿಾ.

(e) $BC = 2{\cdot}9''$ $AB : AC = 3 : 5$ ಮತ್ತು A ಕೋನದ ಅಂತರೀಯ ಸಮಭಾಜಕ$= 2{\cdot}3''$.

(f) $BC = 5{\cdot}3$ ಸೆಂ. ಮಿಾ. $AB : AC = 5 : 2$ ಮತ್ತು A ಕೋನದ ಬಾಹ್ಯ ಸಮಭಾಜಕ$= 3{\cdot}5$ ಸೆಂ. ಮಿಾ.

7. $AB = 4.2$ ಸೆಂ.ಮಿಾ., $AC = 5.3$ ಸೆಂ.ಮಿಾ. ಮತ್ತು $\angle ABC = 60°$ ಇರುವಂತೆ ABC ತ್ರಿಭುಜವನ್ನು ರಚಿಸಿ. ಇದಕ್ಕೆ ಸಮರೂಪವಾಗಿ 12 ಸೆಂ.ಮಿಾ. ಸುತ್ತಳತೆ ಇರುವ ಒಂದು ತ್ರಿಭುಜವನ್ನು ರಚಿಸಿ.

8. $BC = 7$ ಸೆಂ.ಮಿಾ. $\angle B = 65°$ ಮತ್ತು $AB = 5$ ಸೆಂ.ಮಿಾ. ಇರುವಂತೆ ABC ತ್ರಿಭುಜವನ್ನು ರಚಿಸಿ. ಇದರ ಕ್ಷೇತ್ರ ಫಲದ $\frac{2}{3}$ ಭಾಗವನ್ನು (i) BC ಗೆ ಸಮಾನಾಂತರ ರೇಖೆಯನ್ನೆಳೆಯುವುದರಿಂದ, (ii) BC ಗೆ ಲಂಬವಾದ ರೇಖೆಯನ್ನೆಳೆಯುವುದರಿಂದ, ವಿಭಾಗಿಸಿ.

9. ಬಾಹುಗಳು $5 : 7 : 9$ ಪ್ರಮಾಣದಲ್ಲಿಯೂ, ಕ್ಷೇತ್ರಫಲವು 10 ಚ.ಸೆಂ.ಮಿಾ.ಗಳೂ ಇರುವಂತೆ ಒಂದು ತ್ರಿಭುಜವನ್ನು ರಚಿಸಿ.

10. 16 ಚ. ಸೆಂ.ಮಿಾ. ಕ್ಷೇತ್ರಫಲವಿರುವ ಒಂದು ಸಮಬಾಹುತ್ರಿಭುಜವನ್ನು ರಚಿಸಿ.

11. $BC = 6.4$ ಸೆಂ.ಮಿಾ., $AB : AC = 5 : 3$ ಮತ್ತು ಮಧ್ಯರೇಖೆ $BE = 6.6$ ಸೆಂ.ಮಿಾ. ಇರುವಂತೆ ABC ತ್ರಿಭುಜವನ್ನು ರಚಿಸಿ.

12. 60 ಚ. ಸೆಂ.ಮಿಾ. ಕ್ಷೇತ್ರಫಲವಿರುವ ಒಂದು ಸಮ ಷಡ್ಭುಜವನ್ನು ರಚಿಸಿ. (ಸೂಚನೆ: 10 ಚ. ಸೆಂ. ಮಿಾ. ಕ್ಷೇತ್ರಫಲವಿರುವ ಸಮಬಾಹು ತ್ರಿಭುಜವನ್ನು ರಚಿಸಿ.)

13. $AB = 2.5''$, $AD = 2''$, ಮತ್ತು $BD = 3.4''$ ಇರುವಂತೆ $ABCD$ ಸಮಾನಾಂತರ ಚತುರ್ಭುಜವನ್ನು ರಚಿಸಿ. AC ಕರ್ಣಕ್ಕೆ ಸಮಾನಾಂತರವಾಗಿರುವ ರೇಖೆಗಳಿಂದ ಅದನ್ನು ಮೂರು ಸಮಭಾಗಗಳಾಗಿ ಮಾಡಿ.

CHAPTER 4

PRELIMINARY CONCEPTS OF ANALYTIC GEOMETRY

Analytic geometry is the study of geometry using the methods of algebra. In this subject we study how the positions of points may be determined by means of numbers and how equations can be used to study the properties of curves. The French Mathematician Rene Decartes (1596—1650) was the first who started this method of studying geometry and experience has shown that this method, in many cases, is more powerful and shorter than other methods

4.1. Rectangular Co-ordinates—

Let $X'X$ and $Y'Y$ be two perpendicular straight lines in a plane intersecting each other at O and let P be a point in this plane. Let PM and PN be drawn perpendicular to $X'X$ and $Y'Y$ respectively. The position of P, then, is known relatively to the given lines $X'X$ and $Y'Y$ when the magnitudes and directions of OM and ON are given. (See Fig. 4.1).



Fig. 4.1

ಅಧ್ಯಾಯ 4

ಬೀಜ ರೇಖಾಗಣಿತದ ಪ್ರಾರಂಭಿಕ ಭಾವನೆಗಳು

ಬೀಜಗಣಿತದ ವಿಧಾನಗಳಿಂದ ರೇಖಾಗಣಿತವನ್ನು ಅಭ್ಯಸಿಸುವುದು ಬೀಜರೇಖಾ ಗಣಿತವೆನಿಸುತ್ತದೆ. ಈ ಗಣಿತ ವಿಭಾಗದಲ್ಲಿ ನಾವು ಸಂಖ್ಯೆಗಳ ಮೂಲಕ ಬಿಂದುಗಳ ಸ್ಥಾನಗಳನು । ಹೇಗೆ ನಿರ್ಧರಿಸಬಹುದು ಹಾಗೂ ಸಮೀಕರಣಗಳ ಸಹಾಯದಿಂದ ರೇಖೆಗಳ ಲಕ್ಷಣಗಳನ್ನು ಹೇಗೆ ತಿಳಿಯಬಹುದು ಎಂಬುದನ್ನು ಕಲಿಯುತ್ತೇವೆ. ಈ ವಿಧಾನವನ್ನು ಮೊಟ ಮೊದಲನೆಯದಾಗಿ ರೇನೆ ಡೆಕಾರ್ಟ್ (1596–1650) ಎಂಬ ಫ್ರೆಂಚ್ ಗಣಿತಜ್ಞನು ಪ್ರಾರಂಭಿಸಿದನು. ಈ ವಿಧಾನವು ಅನೇಕ ಸಂದರ್ಭಗಳಲ್ಲಿ ಇತರ ವಿಧಾನಗಳಿಗಿಂತ ಹೆಚ್ಚು ಪ್ರಬಲವಾಗಿ, ಸಂಕ್ಷಿಪ್ತವಾಗಿ ಹಾಗೂ ಅನುಕೂಲಕರವಾಗಿ ಇರುವುದಾಗಿ ಅನುಭವದಿಂದ ತಿಳಿದುಬಂದಿದೆ.

4.1 ಲಂಬ ನಿರ್ದೇಶಕಗಳು

$X'X$ ಮತ್ತು $Y'Y$ ಗಳು ಒಂದು ಸಮತಲದಲ್ಲಿರುವ ಹಾಗೂ ಪರಸ್ಪರ ಲಂಬವಾಗಿ O ಎಂಬಲ್ಲಿ ಛೇದಿಸುವ ಎರಡು ಸರಳರೇಖೆಗಳಾಗಿರಲಿ ಮತ್ತು P ಎಂಬುದು ಈ ಸಮತಲದಲ್ಲಿರುವಒಂದು ಬಿಂದುವಾಗಿರಲಿ, PM ಮತ್ತು PN ಗಳನ್ನು ಕ್ರಮವಾಗಿ $X'X$ ಮತ್ತು $Y'Y$ ಗಳಿಗೆ ಲಂಬವಾಗಿ ಎಳೆಯಲಾಗಿರಲಿ. ಆಗ, OM ಮತ್ತು ONಗಳ ಪರಿಮಾಣ ಮತ್ತು ದಿಕ್ಕುಗಳನ್ನು ಕೊಟ್ಟಾಗ $X'X$ ಮತ್ತು $Y'Y$ಗಳಿಗೆ ಸಂಬಂಧಿಸಿದಂತೆ Pಯ ಸ್ಥಾನವು ಗೊತ್ತಾಗುತ್ತದೆ. (ಚಿತ್ರ 4.1 ನೋಡಿ)

ಚಿತ್ರ, 4.1

As a convention let us take the distances measured i the directions of OX and OY as positive and those measure in the directions of OX' and OY' as negative. We shal call the distances with the proper signs attached to ther using the above convention as '**directed distances**'. T distinguish between 'distance' and 'directed distance we write P_1P_2, to denote the distance between P_1 and P_2 and $\overrightarrow{P_1P_2}$, to denote the directed distance from P_1 to P_2

Accordingly $\overrightarrow{P_1P_2} = -\overrightarrow{P_2P_1}$ and $P_1P_2 = |\overrightarrow{P_1P_2}| = |\overrightarrow{P_2P_1}|$ It can be easily deduced from this that if P_1, P_2, P_3 ar three points on a straight line, then $\overrightarrow{P_1P_2} + \overrightarrow{P_2P_3} = \overrightarrow{P_1P_3}$ an $\overrightarrow{{}_1P_3} - \overrightarrow{P_1P_2} = \overrightarrow{P_2P_3}$.

$$\text{Now let } \overrightarrow{OM} = \overrightarrow{NP} \text{ be } x$$

$$\text{and } \overrightarrow{ON} = \overrightarrow{MP} \text{ be } y.$$

Then x and y define (or determine) the position of th point P in the plane so that if we are given x and y, w can find the point P (why ?).

For example, suppose we are required to mark th point P indicated by $x = 4$ and $y = -3$. measure along OX $OM = 4$ units and measure a length MP $(= ON)$ in th direction of OY', *i.e* parallel to OY' equal to 3 units. W arrive at the point P required.

Here We call $\overrightarrow{OM} = x$ and $\overrightarrow{ON} = y$ as the **rectangula cartesian coordinates** of the point P *w.r.t.* $X'X$ and $Y'Y$ We write this as $P \equiv (x, y)$. $X'X$ and $Y'Y$ together are called **the co-ordinate axes** and O is called **the origin.** I particular x is called **the abscissa or the x-co-ordinate,** y i called **the ordinate or the y-co-ordinate.** $X'X$ is called th **x-axis and** $Y'Y$ is called **the y-axis.**

ಸಾಂಕೇತಿಕವಾಗಿ OX ಮತ್ತು OY ಗಳ ದಿಕ್ಕುಗಳಲ್ಲಿ ಅಳೆದ ದೂರಗಳನ್ನು ಧನವಾಗಿಯೂ ಮತ್ತು OX' ಮತ್ತು OY'ಗಳ ದಿಕ್ಕುಗಳಲ್ಲಿ ಅಳೆದ ದೂರಗಳನ್ನು ಋಣವಾಗಿಯೂ ಪರಿಗಣಿಸೋಣ. ಈ ಸಂಕೇತಕ್ಕನುಗುಣವಾಗಿ ಸೂಕ್ತ ಚಿಹ್ನೆಗಳಿಂದೊಡ ಗೂಡಿದ ದೂರಗಳನ್ನು 'ನಿರ್ದೇಶಿತ ದೂರ' ಗಳೆಂದು ಕರೆಯೋಣ. 'ದೂರ' ಮತ್ತು 'ನಿರ್ದೇಶಿತ ದೂರ' ಗಳಿಗಿರುವ ವ್ಯತ್ಯಾಸವನ್ನು ಸೂಚಿಸಲು ನಾವು P_1 ಮತ್ತು P_2 ಗಳಿಗಿರುವ ದೂರವನ್ನು ಸೂಚಿಸಲು $P_1 P_2$ ಎಂದೂ, P_1 ನಿಂದ P_2 ಗಿರುವ ನಿರ್ದೇಶಿತ ದೂರವನ್ನು ಸೂಚಿಸಲು $\overrightarrow{P_1P_2}$ ಎಂದೂ ಬರೆಯೋಣ. ಈ ಪ್ರಕಾರ $\overrightarrow{P_1P_2} = -\overrightarrow{P_2P_1}$ ಮತ್ತು $P_1 P_2 \equiv \overrightarrow{P_1 P_2} = \overrightarrow{P_2 P_1}$ ಆಗಿರುತ್ತದೆ. P_1, P_2, P_3 ಗಳು ಒಂದೇ ಸರಳ ರೇಖೆಯಲ್ಲಿರುವ ಮೂರು ಬಿಂದುಗಳಾದಾಗ $\overrightarrow{P_1P_2} + \overrightarrow{P_2P_3} = \overrightarrow{P_1P_3}$ ಮತ್ತು $\overrightarrow{P_1P_3} - \overrightarrow{P_1P_2} = \overrightarrow{P_2P_3}$ ಎಂದು ಇದರಿಂದ ಸುಲಭವಾಗಿ ಪಡೆಯಬಹುದು.

ಈಗ, $\overrightarrow{OM} = \overrightarrow{NP}$ ಯು x

ಮತ್ತು $\overrightarrow{ON} = \overrightarrow{MP}$ ಯು y ಯೂ ಆಗಿರಲಿ.

ಆಗ, x ಮತ್ತು y ಗಳನ್ನು ಕೊಟ್ಟಾಗ P ಯನ್ನು ಕಂಡು ಹಿಡಿಯಲಾಗುವಂತೆ, x ಮತ್ತು y ಗಳು Pಯ ಸ್ಥಾನವನ್ನು ನಿರ್ಧರಿಸುತ್ತವೆ.

ಉದಾಹರಣೆಗೆ, $x = 4$ ಮತ್ತು $y = -3$ ಸೂಚಿಸುವ ಬಿಂದು P ಯನ್ನು ಗುರುತಿಸಬೇಕಾದರೆ, OX ನಲ್ಲಿ $OM = 4$ ಮಾನಗಳನ್ನೂ ಮತ್ತು OY' ನ ದಿಕ್ಕಿನಲ್ಲಿ ಎಂದರೆ ಅದಕ್ಕೆ ಸಮಾನಾಂತರವಾಗಿ $MP \ (=ON) = 3$ ಮಾನಗಳನ್ನೂ ಅಳೆಯಿರಿ. ಆಗ ನಾವು ಗುರುತಿಸಬೇಕಾಗಿದ್ದ Pಯ ಸ್ಥಾನವನ್ನು ಸೇರುತ್ತೇವೆ.

ಇಲ್ಲಿ ನಾವು $\overrightarrow{OM} = x$ ಮತ್ತು $\overrightarrow{ON} = y$ ಗಳನ್ನು $X'X$ ಮತ್ತು $Y'Y$ ಗಳಿಗೆ ಸಂಬಂಧಿಸಿದಂತೆ Pಯ ಕಾರ್ಟೇಸಿಯನ್ ಲಂಬನಿರ್ದೇಶಕಗಳು ಎಂದು ಕರೆಯುತ್ತೇವೆ. ಇದನ್ನು $P \equiv (x, y)$ ಎಂದು ಬರೆಯಲಾಗುತ್ತದೆ. $X'X$ ಮತ್ತು $Y'Y$ ಗಳನ್ನು ಒಟ್ಟಾಗಿ ನಿರ್ದೇಶಕಾಕ್ಷಗಳೆಂದೂ, Oವನ್ನು ಮೂಲಬಿಂದುವೆಂದೂ ಕರೆಯಲಾಗುತ್ತದೆ. xನ್ನು ಕೋಟಿ ಅಥವಾ x-ನಿರ್ದೇಶಕವೆಂದೂ yನ್ನು ಭುಜ ಅಥವಾ y-ಸ್ಥಾನನಿರ್ದೇಶಕ ವೆಂದೂ, $X'X$ ನ್ನು x-ಅಕ್ಷವೆಂದೂ, $Y'Y$ ಯನ್ನು y-ಅಕ್ಷವೆಂದೂ ಪ್ರತ್ಯೇಕವಾಗಿ ಕರೆಯಲಾಗುತ್ತದೆ.

It is to be noted that in this process of finding the co-or(
nates of a point, we assign to each point P, a pair of numbe
(x, y). Conversely, it is also to be noted that to ea
pair of numbers there corresponds one and only one poi
in the plane.

It is customory to take a horizontal line as x-axis a
a vertical line as y-axis such that X lies to the right of a
Y lies above the origin (see Fig. 4.2). Hence hereafter
shall consider x to be positive or negative according as M li
to the right or to the left of the origin on the x-ax
Simlarly y is considered to be positive or negative accor
ing as N lies above or below the origin on the y-axis.



Fig. 4.2

ಒಂದು ಬಿಂದುವಿನ ನಿರ್ದೇಶಕಗಳನ್ನು ಕಂಡುಹಿಡಿಯುವ ಈ ಕಾರ್ಯವಿಧಾನದಲ್ಲಿ ನಾವು ಪ್ರತಿಯೊಂದು ಬಿಂದು Pಗೂ ಒಂದು ಜೊತೆ ಸಂಖ್ಯೆಗಳನ್ನು [(x, y) ಗಳನ್ನು] ಗೊತ್ತು ಮಾಡುತ್ತೇವೆ ಎಂಬುದನು ಗಮನಿಸಬೇಕು. ವಿಲೋಮವಾಗಿ ಪ್ರತಿಯೊಂದು ಜೊತೆ ಸಂಖ್ಯೆಗಳಿಗೂ ಒಂದು ಸಮತಲದಲ್ಲಿ ಒಂದೇ ಒಂದು ಬಿಂದುವು ಹೊಂದಿಕೆಯಾಗುತ್ತದೆ ಎಂಬುದೂ ಗಮನಾರ್ಹ.

X ಬಿಂದುವು ಮೂಲಬಿಂದು Oನ ಬಲಭಾಗಕ್ಕೂ, Y ಬಿಂದುವು ಮೂಲಬಿಂದುವಿನ ಮೇಲ್ಭಾಗದಲ್ಲಿಯೂ ಇರುವಂತೆ ಅಡ್ಡರೇಖೆಯೊಂದನ್ನು x-ಅಕ್ಷವಾಗಿಯೂ ಊರ್ಧ್ವರೇಖೆಯೊಂದನ್ನು y–ಅಕ್ಷವಾಗಿಯೂ ತೆಗೆದುಕೊಳ್ಳುವುದು ವಾಡಿಕೆಯಾಗಿದೆ. (ಚಿತ್ರ 4·2 ನೋಡಿ) ಆದುದರಿಂದ, ಇನ್ನು ಮುಂದೆ, M ಬಿಂದುವು x–ಅಕ್ಷದ ಮೇಲೆ ಮೂಲ ಬಿಂದುವಿನ ಬಲಭಾಗದಲ್ಲಿದ್ದರೆ ಧನವಾಗಿಯೂ, ಎಡಭಾಗದಲ್ಲಿದ್ದರೆ ಋಣವಾಗಿಯೂ, xನ್ನು ಪರಿಗಣಿಸೋಣ. ಹಾಗೆಯೇ N ಬಿಂದುವು y–ಅಕ್ಷದ ಮೇಲೆ ಮೂಲಬಿಂದುವಿನ ಮೇಲ್ಭಾಗದಲ್ಲಿದ್ದರೆ ಧನವಾಗಿಯೂ, ಕೆಳಭಾಗದಲ್ಲಿದ್ದರೆ ಋಣವಾಗಿಯೂ y ಯನ್ನು ಪರಿಗಣಿಸಲಾಗುವುದು.



ಚಿತ್ರ 4.2

We observe that the two axes $X'X$ and $Y'Y$ divide th whole plane in to four parts called quadrants as in Fig. 4.2 and they are numbered in the counterclock wise order, the first quadrant being the one above the x-axi and to the right of the y-axis. In accordance to ou convention a table can be formed for ready reference o the signs of the coordinates of the points in various quad rants, as given below.

	quadrant I	quadrant II	quadrant III	quadrant IV
Sign of x	+	—	—	+
Sign of y	+	+	—	—

It is also to be noted that the order of mentioning th co-ord nates is important. The definitions of x and y show that the point (x, y) is different from the point (y, x) unless $x=y$. For example, we see that the point $(3, -4)$ is different from the point $(-4, 3)$. In fact, the firs one is in the IV quadrant and the second one is in the II quadrant. [For other illustrations see Fig. 4.2] Hence in the pair (x, y), the order of writing also plays a very important role. We call such pairs as **ordered pairs**

Thus, in conclusion, we may state that a point in a plane is represented by an ordered pair of numbers The signs of these numbers determine the quadrant in which a point lies. This forms the fundamental idea behind analytic geometry.

ಚಿತ್ರ (4·2)ರಲ್ಲಿ ತೋರಿಸಿರುವಂತೆ $X'X$ ಮತ್ತು $Y'Y$ ಈ ಎರಡು ಅಕ್ಷಗಳು ಟ್ಟಿ ಸಮತಲವನ್ನು ಪಾದಗಳೆಂದು (Quadrants) ಕರೆಯಲಾಗುವ ನಾಲ್ಕು ಭಾಗ ಾಗಿ ವಿಂಗಡಿಸುತ್ತವೆ. ಮೊದಲನೆಯ ಪಾದವು x–ಅಕ್ಷದ ಮೇಲ್ಭಾಗಕ್ಕೂ y-ಅಕ್ಷದ ಲ ಭಾಗಕ್ಕೂ ಬರುವಂತೆ ಪಾದಗಳನ್ನು ಅಪ್ರದಕ್ಷಿಣೆಯಾಗಿ ಅಂಕಿತಗೊಳಿಸುವುದು ಡಿಕೆಯಾಗಿದೆ. ಅದರಂತೆ ನಮ್ಮ ಸಂಕೇತಕ್ಕನುಸಾರವಾಗಿ ವಿವಿಧ ಪಾದಗಳಲ್ಲಿನ ಬಿಂದು ನಿರ್ದೇಶಕಗಳ ಚಿಹ್ನೆಗಳನ್ನು ತೋರಿಸುವ ಪಟ್ಟಿಯೊಂದನ್ನು ಈ ಕೆಳಕಂಡಂತೆ ಪಡಿಸಬಹುದು.

	ಪಾದ I	ಪಾದ II	ಪಾದ III	ಪಾದ IV
-ನಿರ್ದೇಶಕದ ಚಿಹ್ನೆ	+	—	—	+
-ನಿರ್ದೇಶಕದ ಚಿಹ್ನೆ	+	+	—	—

ಇಲ್ಲಿ ನಾವು ನಿರ್ದೇಶಕಗಳನ್ನು ಸಮೂದಿಸುವ ಕ್ರಮವೂ ಪ್ರಮುಖವಾದುದೆಂಬು ನ್ನು ಗಮನಿಸಬೇಕಾಗಿದೆ. $x=y$ ಅಲ್ಲದಿದ್ದರೆ (x, y) ಬಿಂದುವು (y, x) ಬಿಂದುವಿ ಂತ ಬೇರೆಯಾಗಿರುತ್ತದೆ ಎಂಬುದಾಗಿ x, y ಗಳ ವ್ಯಾಖ್ಯೆಗಳು ತೋರಿಸುತ್ತವೆ. ುದಾಹರಣೆಗೆ, (3, —4) ಬಿಂದುವು (—4, 3) ಬಿಂದುವಿಗಿಂತ ಬೇರೆಯಾಗಿದೆ ಂಬುದನ್ನು ನಾವು ಗಮನಿಸುತ್ತೇವೆ. ವಾಸ್ತವವಾಗಿ ಮೊದಲನೆಯ ಬಿಂದುವು ಾಲ್ಕನೆಯ ಪಾದದಲ್ಲಿಯೂ ಎರಡನೆಯದು ಎರಡನೆಯ ಪಾದದಲ್ಲಿಯೂ ಇವೆ. ಇತರ ದೃಷ್ಟಾಂತಗಳಿಗೆ ಚಿತ್ರ 4·2 ನೋಡಿ). ಆದುದರಿಂದ (x, y) — ಜೊತೆಯಲ್ಲಿ ಬರೆಯುವ ಕ್ರಮವೂ ಪ್ರಮುಖಪಾತ್ರ ವಹಿಸುತ್ತದೆ. ಅಂತಹ ಜೊತೆಗಳನ್ನು ನಾವು ಕ್ರಮಾನುಗತ ಜೊತೆಗಳೆಂದು ಕರೆಯುತ್ತೇವೆ.

ಹೀಗೆ, ಉಪಸಂಹಾರವಾಗಿ, ಸಮತಲದಲ್ಲಿನ ಒಂದು ಬಿಂದುವು ಒಂದು ಕ್ರಮಾನು ತ ಜೊತೆ ಸಂಖ್ಯೆಗಳಿಂದ ನಿರೂಪಿತವಾಗುತ್ತದೆ ಎಂದು ಹೇಳಬಹುದು. ಈ ಸಂಖ್ಯೆಗಳ ಚಿಹ್ನೆಗಳು ಬಿಂದುಗಳು ಯಾವ ಪಾದದಲ್ಲಿರುತ್ತವೆ ಎಂದು ತಿಳಿಸುತ್ತವೆ. ಇದು ಬೀಜ ಗಣಿತದ ಹಿನ್ನೆಲೆಯಲ್ಲಿನ ಮೂಲಭಾವನೆಯಾಗಿದೆ.

Exercises 4.1

1 Read off the co-ordinates of the points A B, C, E shown in the figure below :



Fig 4.3

2 If p is a negative number and q a positive numb inwhich quadrant wil' each of the following points lie ?

(i) (p, q) (iv) $(-p, -q)$ (vii) $(q, -$
(ii) $(p, -q)$ (v) (q, p) (viii) $(-q, -$
(iii) $(-p, q)$ (vi) $(-q, p)$

ಅಭ್ಯಾಸಗಳು 4.1

1 ಈ ಕೆಳಕಂಡ ಚಿತ್ರದಲ್ಲಿ ತೋರಿಸಿರುವ A, B, C, D, E ಬಿಂದುಗಳ ನಿರ್ದೇಶಕಗಳನ್ನು ಓದಿ ಹೇಳಿರಿ.



ಚಿತ್ರ 4.3

2 pಯು ಒಂದು ಋಣ ಸಂಖ್ಯೆಯೂ, qಯು ಒಂದು ಧನ ಸಂಖ್ಯೆಯೂ ಆದಾಗ ಈ ಕೆಳಕಂಡ ಬಿಂದುಗಳು ಯಾವ ಪಾದದಲ್ಲಿರುತ್ತವೆ ?

(i) (p, q)	(iv) $(-p, -q)$	(vii) $(q, -p)$
(ii) $(p, -q)$	(v) (q, p)	(viii) $(-q, -p)$
(iii) $(-p, q)$	(vi) $(-q, p)$.	

3 Where do the points lie for which

(i) the x—co-ordinate is zero ;
(ii) the y—co-ordinate is zero ;
$$\frac{y_2+y_1}{x_1+x_2}=-\frac{x_2-x_1}{y_2-y_1}$$

i.e., if $y_2^2-y_1^2=x_1^2-x_2^2$

i.e., if $x_1^2+y_1^2=x_2^2+y_2^2$ which is true since A and B lie on the circle.

ಇದು ವೃತ್ತದ ಮೇಲಿನ ಯಾವೊಂದು ಬಿಂದು Pಗೂ ಸರಿಹೊಂದುವಂತೆ ಹಾಗೂ ವೃತ್ತದ ಮೇಲಿಲ್ಲದ ಯಾವಬಿಂದುವಿಗೂ ಸರಿಹೊಂದದಂತೆ ಇರುವುದು. ಆದ್ದರಿಂದ ಇದು ಬೇಕಾದ ವೃತ್ತದ ಸಮೀಕರಣ.

ವೃತ್ತದ ಕೇಂದ್ರದ ಅಂದರೆ ದತ್ತ ಬಿಂದುಗಳನ್ನು ಸೇರಿಸುವ ರೇಖೆಯು ಮಧ್ಯ ಬಿಂದುವಿನ ನಿರ್ದೇಶಕಗಳನ್ನು ಮತ್ತು ವೃತ್ತದ ತ್ರಿಜ್ಯದ ಅಂದರೆ ದತ್ತ ಬಿಂದುವಿನ ನಡುವಿನ ಅರ್ಧದಷ್ಟು ದೂರವನ್ನು ಕಂಡು ಹಿಡಿದೂ ಸಹ ಈ ಲೆಕ್ಕವನ್ನು ಬಿಡಿಸಬಹುದು. ಆದರೆ ಮೇಲಿನ ವಿಧಾನವು ಚಿಕ್ಕದಾದ ಹಾಗೂ ಚೊಕ್ಕವಾದ ವಿಧಾನ.

5 AB ಎನ್ನುವುದು ವೃತ್ತದ ಒಂದು ಜ್ಯಾ ಆದರೆ ABಯ ಲಂಬಾರ್ಧಕವು ವೃತ್ತದ ಕೇಂದ್ರದ ಮೂಲಕ ಸಾಗುವುದು ಎಂದು ತೋರಿಸಿ.

ಮೂಲ ಬಿಂದುವು ವೃತ್ತದ ಕೇಂದ್ರದಲ್ಲಿರುವಂತೆ ಅಕ್ಷರಗಳನ್ನು ಆರಿಸಿಕೊಳ್ಳೋಣ. ಆಗ ವೃತ್ತದ ಸಮೀಕರಣವನ್ನು $x^2+y^2=r^2$ ಎಂದು ಬರೆಯಬಹುದು.

$A\equiv(x_1, y_1)$ ಮತ್ತು $B\equiv(x_2, y_2)$ ಆಗಿರಲಿ. C ಮತ್ತು Dಗಳು ಕ್ರಮವಾಗಿ ವೃತ್ತದ ಕೇಂದ್ರ ಮತ್ತು ABಯ ಮಧ್ಯಬಿಂದು ಆದಾಗ

$C\equiv(0, 0)$ ಮತ್ತು

$$D\equiv\left(\frac{x_1+x_2}{2}, \frac{y_1+y_2}{2}\right).$$

ABಯ ಓಟ $\dfrac{y_2-y_1}{x_2-x_1}$ ಆಗಿರುವುದರ ಕಾರಣ ಅದರ ಲಂಬಾರ್ಧಕದ ಓಟ

$$-\frac{x_2-x_1}{y_2-y_1}$$

CDಯ ಓಟ $\dfrac{y_1+y_2}{x_1+x_2}$

ABಯ ಲಂಬಾರ್ಧಕವು Cಯ ಮೂಲಕ ಹಾದು ಹೋಗಬೇಕಾದರೆ CDಯ ಮತ್ತು ಅರ್ಧಕದ ಓಟಗಳು ಸಮನಾಗಬೇಕು.

$$\text{ಇದು } \frac{y_2+y_1}{x_1+x_2}=-\frac{x_2-x_1}{y_2-y_1}$$

ಅಂದರೆ $y_2^2-y_1^2=x_1^2-x_2^2$ ಅಥವಾ $x_1^2+y_1^2=x_2^2+y_2^2$ ಆದಾಗ ಮಾತ್ರಸಾಧ್ಯ. A ಮತ್ತು B ಗಳು ವೃತ್ತದ ಮೇಲಿರುವುದರಿಂದ ಇದು ಸತ್ಯ.

Exercises 6.1

1 Find the equations of the circles whose centres and radii are respectively

(i) (1, 2), 3 (iii) (—1, —8), 5

(ii) (1, 0), 1 (iv) $(\frac{3}{2}, -2\frac{1}{2})$, 1.

2 Find the centre and radius of each of the following circles :—

(i) $3x^2+3y^2+8x+4y+1=0$,

(ii) $x^2+y^2-25=0$,

(iii) $x^2+y^2+x+y-2=0$.

3 A circle passes through the three points (5, —8), (—2, 9), (2, 1). Find the co-ordinates of its centre and the radius.

4 Find the equation of the circle circumscribing the triangle formed by the lines $x+y=6$, $2x+y=4$ and $x+2y=5$.

5 Find the equation of the diameter of the circle $x^2+y^2+6x-2y=6$, which when produced passes through (1, 2).

6 Find the circle which passes through (—2, 0) and (4, 0) and whose radius is 5.

7 Find the circle which passes through (3, 0) and (5, 0) and has its centre on $2x+y=1$.

8 Show that the points (—3, 11), (5, 9), (8, 0) and (6, 8) lie on a circle. Find the radius and centre of the circle.

6.2 Equation of the Tangent to a Circle—

Let $x^2+y^2+2gx+2fy+c=0$ be the equation of a circle. Then its centre C is $(-g, -f)$ and radius is $\sqrt{g^2+f^2-c}$.

Let P (x_1, y_1) be a point on the circle. Then the slope of CP is $\dfrac{y_1+f}{x_1+g}$.

ಅಭ್ಯಾಸಗಳು 6.1

1 (i) (1, 2), 3, (iii) (—1, —8), 5

(ii) (1, 0), 1, (iv) ($\frac{3}{2}$, $-2\frac{1}{2}$), 1

ಗಳು ಕ್ರಮವಾಗಿ ಕೇಂದ್ರ ಹಾಗೂ ತ್ರಿಜ ಗಳಾಗಿರುವ ವೃತ್ತದ ಸಮೀಕರಣವನ್ನು ಗೊತ್ತು ಮಾಡಿ.

2 ಈ ಕೆಳಗೆ ಕೊಟ್ಟಿರುವ ಪ್ರತಿ ಸಮೀಕರಣವೂ ನಿರೂಪಿಸುವ ವೃತ್ತದ ಕೇಂದ್ರ ಮತ್ತು ತ್ರಿಜ್ಯವನ್ನು ಗೊತ್ತು ಮಾಡಿ.

(i) $3x^2+3y^2+8x+4y+1=0$

(ii) $x^2+y^2-25=0.$

(iii) $x^2+y^2+x+y-2=0.$

3 ಒಂದು ವೃತ್ತವು (5, —8), (—2, 9), (2, 1) ಬಿಂದುಗಳ ಮೂಲಕ ಹಾದು ಹೋಗುತ್ತದೆ. ಅದರ ಕೇಂದ್ರದ ನಿರ್ದೇಶಕಗಳು ಹಾಗೂ ತ್ರಿಜ್ಯವನ್ನು ಗೊತ್ತುಮಾಡಿ.

4 $x+y=6$, $2x+y=4$ ಮತ್ತು $x+2y=5$ ರೇಖೆಗಳಿಂದ ಏರ್ಪಟ್ಟ ತ್ರಿಭುಜದ ಪರಿವೃತ್ತದ ಸಮೀಕರಣವೇನು ?

5 ಲಂಬಿಸಿದಾಗ (1, 2) ಬಿಂದುವಿನ ಮೂಲಕ ಹಾದು ಹೋಗುವ $x^2+y^2+6x-2y=6$ ವೃತ್ತದ ವ್ಯಾಸದ ಸಮೀಕರಣವೇನು ?

6 (—2, 0) ಮತ್ತು (4, 0) ಬಿಂದುಗಳ ಮೂಲಕ ಹಾದು ಹೋಗುವ ಮತ್ತು ತ್ರಿಜ್ಯ 5 ಆಗಿರುವ ವ ತ್ತವನ್ನು ಗೊತ್ತು ಮಾಡಿ.

7 (3, 0) ಮತ್ತು (5, 0) ಬಿಂದುಗಳ ಮೂಲಕ ಹಾದು ಹೋಗುವ ಮತ್ತು $2x+y=1$ ರೇಖೆಯ ಮೇಲೆ ಕೇಂದ್ರವನ್ನುಳ್ಳ ವೃತ್ತವನ್ನು ಗೊತ್ತು ಮಾಡಿ.

8 (—3, 11), (5, 9), (8, 0) ಮತ್ತು (6, 8) ಬಿಂದುಗಳು ಒಂದು ವೃತ್ತದ ಮೇಲಿವೆ ಎಂದು ತೋರಿಸಿ. ಆ ವೃತ್ತದ ತ್ರಿಜ್ಯ ಹಾಗೂ ಕೇಂದ್ರವನ್ನು ಗೊತ್ತುಮಾಡಿ.

6.2 ವೃತ್ತದ ಸ್ಪರ್ಶರೇಖೆಯ ಸಮೀಕರಣ

$x^2+y^2+2gx+2fy+c=0$ ವೃತ್ತವೊಂದರ ಸಮೀಕರಣವಾಗಿರಲಿ. ಆಗ ಅದರ ಕೇಂದ್ರ Cಯು $(-g, -f)$ ಮತ್ತು ತ್ರಿಜ್ಯ $\sqrt{g^2+f^2-c}$

$P(x_1, y_1)$ ವೃತ್ತದ ಮೇಲಿನ ಒಂದು ಬಿಂದುವಾಗಿರಲಿ. ಆಗ CPಯ ಓಟ $\frac{y_1+f}{x_1+g}$.



Fig 6.4

We know that the tangent PT at P to the circle is perpendicular to the radius CP.

$\therefore$ Slope of PT is $-\dfrac{x_1+g}{y_1+f}$

$\therefore$ Its equation is (since it passes through P),

$$y-y_1 = -\frac{x_1+g}{y_1+f}(x-x_1)$$

i.e., $xx_1+yy_1+gx+fy=x_1^2+y_1^2+gx_1+fy_1$.

Adding gx_1+fy_1+c to both sides and noting that $x_1^2+y_1^2+2gx_1+2fy_1+c=0$ ($\because$ (x_1, y_1) is a point on the circle), we see that

> the equation of the tangent at P (x_1, y_1) to the ci cle
> $x^2+y^2+2gx+2fy+c=0$ is
> $xx_1+yy_1+g(x+x_1)+f(y+y_1)+c=0$.

Note :—The reader who is familiar with calculus will notice that the slope of the tangent at (x_1, y_1) to the circle $x^2+y^2+2gx+2fy+c=0$ is

$$\left(\frac{dy}{dx}\right)_{(x_1, y_1)} = -\frac{x_1+g}{y_1+f}$$ which agrees with the expression given above.



ಚಿತ್ರ 6.4

Pಯಲ್ಲಿ ವೃತ್ತದ ಸ್ಪರ್ಶರೇಖೆ PTಯು CP ತ್ರಿಜ್ಯಕ್ಕೆ ಲಂಬವಾಗಿರುವುದು ಎಂದು ತಿಳಿದಿದೆ.

$\therefore PT$ಯ ಓಟ $-\dfrac{x_1+g}{y_1+f}$

$\therefore$ ಅದರ ಸಮೀಕರಣ (ಅದು Pಯ ಮೂಲಕ ಸಾಗುವುದರಿಂದ),

$$y-y_1 = -\frac{x_1+g}{y_1+f}(x-x_1)$$

ಅಥವಾ $x x_1+y y_1+gx+fy=x^2_1+y^2_1+gx_1+fy_1$.

ಎರಡೂ ಕಡೆಗೆ gx_1+fy_1+c ಯನ್ನು ಸೇರಿಸಿ, [(x_1,y_1) ಬಿಂದುವು ವೃತ್ತದ ಮೇಲಿರುವುದರಿಂದ] $x^2_1+y^2_1+2gx_1+2fy_1+c=0$ ಎಂದು ಗಮನಿಸಿದಾಗ,

$P(x_1, y_1)$ನಲ್ಲಿ $x^2+y^2+2gx+2fy+c=o$ ವೃತ್ತದ ಸ್ಪರ್ಶರೇಖೆಯ ಸಮೀಕರಣವು $xx_1+yy_1+g(x+x_1)+f(y+y_1)+c=0$ ಎಂದಾಗುವುದು.

ಸೂಚನೆ: ಕಲನಶಾಸ್ತ್ರದ ಪರಿಚಯವಿರುವ ಓದುಗರು (x_1, y_1) ನಲ್ಲಿ $x^2+y^2+2gx+2fy+c=0$ ವೃತ್ತದ ಸ್ಪರ್ಶರೇಖೆಯ ಓಟವು

$$\left(\frac{dy}{dx}\right)_{(x_1,\, y_1)} = -\frac{x_1+g}{y_1+f}$$ ಎಂಬುದಾಗಿ ಮೇಲೆ ತಿಳಿಸಿರುವಂತೆ

ಇರುವುದನ್ನು ಗಮನಿಸಬಹುದು.

1 *Find the equations of the tangents to the circle given by the equation $x^2+y^2+3x-2y-4=0$ at the points where the circle cuts the x-axis.*

The points where the circle cuts the axis of x have their y- co-ordinates zero. Hence those points can be obtained by putting $y=0$ in the given equation.

$$i.e. \quad x^2+3x-4=0 \quad \text{or} \quad (x-3)\,(x-1)=0.$$

$\therefore$ The circle meets the x-axis at (3, 0) and (1, 0).

The tangent at (3, 0) has the equation

$$x.3+y.0+\frac{3}{2}\,(x+3)-\frac{2}{2}\,.\,(y+0)-4=0.$$

$$i.e. \; 9x-2y+1=0.$$

Similarly the tangent at (1, 0) is $5x-2y-5=0$.

2 *If the line $lx+my=1$ touches $x^2+y^2=a^2$, then show that the point (l, m) lies on a circle.*

Given that $lx+my=1$ touches $x^2+y^2=a^2$.

$\therefore$ Perpendicular distance of $lx+my=1$ from the centre (0, 0) is equal to the radius a of the circle.

$$i.e. \quad \frac{1}{\sqrt{l^2+m^2}}=\pm a \quad \text{or} \quad l^2+m^2=\frac{1}{a^2}.$$

$\therefore$ (l, m) satisfies the equation $x^2+y^2=\frac{1}{a^2}$ which clearly represents a circle.

3 *Obtain the condition that the line $y=mx+c$ may touch the circle $x^2+y^2=a^2$. Find the point of contact if the condition is satisfied.*

ಉದಾಹರಣೆಗಳು

1 $x^2+y^2+3x-2y-4=0$ ಸಮೀಕರಣವು ನಿರೂಪಿಸುವ ವೃತ್ತದ ಸ್ಪರ್ಶರೇಖೆಗಳನ್ನು ಅದು x–ಅಕ್ಷರೇಖೆಯನ್ನು ಛೇದಿಸುವ ಬಿಂದುಗಳಲ್ಲಿ ಪಡೆಯಿರಿ.

ವೃತ್ತವು x–ಅಕ್ಷವನ್ನು ಛೇಧಿಸುವ ಬಿಂದುಗಳ y—ನಿರ್ದೇಶಕಗಳು ಶೂನ್ಯವಾಗಿರುವುದರಿಂದ, ಆ ಬಿಂದುಗಳನ್ನು ವೃತ್ತದ ಸಮೀಕರಣದಲ್ಲಿ $y=0$ ಎಂದು ತೆಗೆದುಕೊಂಡು ಕಂಡುಹಿಡಿಯಬಹುದು.

ಅಂದರೆ $x^2+3x-4=0$ ಅಥವಾ $(x-3)\ (x-1)\ =0.$

$\therefore$ ವೃತ್ತವು x—ಅಕ್ಷವನ್ನು $(3, 0)$ ಮತ್ತು $(1, 0)$ ಬಿಂದುವಿನಲ್ಲಿ ಛೇದಿಸುತ್ತದೆ.

$(3, 0)$ ಬಿಂದುವಿನಲ್ಲಿ ವೃತ್ತಕ್ಕಿರುವ ಸ್ಪರ್ಶರೇಖೆಯ ಸಮೀಕರಣ

$$x.3 + y.0 + \frac{2}{2}.(x+3) - 1.(y+0) - 4=0$$

ಅಥವಾ $9x-2y+1=0.$

ಹೀಗೆಯೇ $(1, 0)$ ಬಿಂದುವಿನಲ್ಲಿನ ಸ್ಪರ್ಶರೇಖೆಯ ಸಮೀಕರಣ $5x-2y-5=0$

2 $lx+my = 1$ ರೇಖೆಯು $x^2+y^2=a^2$ ವೃತ್ತವನ್ನು ಸ್ಪರ್ಶಿಸಿದರೆ (l, m) ಬಿಂದುವು ಒಂದು ವೃತ್ತದ ಮೇಲಿರುತ್ತದೆ ಎಂದು ತೋರಿಸಿ.

$lx+my = 1$ ರೇಖೆಯು $x^2+y^2=a^2$ ವೃತ್ತವನ್ನು ಸ್ಪರ್ಶಿಸುತ್ತದೆ ಎಂದು ಕೊಟ್ಟಿದೆ.

$\therefore$ ವೃತ್ತದ ಕೇಂದ್ರ $(0, 0)$ ಯಿಂದ $lx+my = 1$ ರೇಖೆಗಿರುವ ಲಂಬ ದೂರವು ವೃತ್ತದ ತ್ರಿಜ್ಯ a ಗೆ ಸಮವಾಗಿರುತ್ತದೆ.

ಅಂದರೆ $\dfrac{1}{\sqrt{l^2+m^2}} = \pm\ a$ ಅಥವಾ $l^2+m^2 = \dfrac{1}{a^2}.$

$\therefore$ (l, m) ಬಿಂದುವು $x^2 + y^2 = \dfrac{1}{a^2}$ ಸಮೀಕರಣವನ್ನು ಸಿದ್ಧಿಸುತ್ತದೆ.

ಇದು ವೃತ್ತದ ಸಮೀಕರಣವೆನ್ನುವುದು ಸ್ಪಷ್ಟ.

3 $y=mx+c$ ರೇಖೆಯು $x^2+y^2=a^2$ ವೃತ್ತವನ್ನು ಸ್ಪರ್ಶಿಸಲು ಬೇಕಾದ ನಿಬಂಧನೆಯನ್ನು ಪಡೆಯಿರಿ. ಈ ನಿಬಂಧನೆಯು ಸಿದ್ಧಿಸಿದಾಗ ಸ್ಪರ್ಶಬಿಂದುವನ್ನು ಗೊತ್ತುಮಾಡಿ.

The given line touches the given circle if the distance of the line from the centre (0, 0) of the circle is equal to its radius a.

$$i.e.\ \pm \frac{c}{\sqrt{1+m^2}} = a \text{ or } c = \pm a\sqrt{1+m^2}.$$

$\therefore y=mx+c$ touches $x^2+y^2=a^2$ if $c=\pm a\sqrt{1+m^2}$ whatever m may be.

In other words, the line $y=mx\pm a\sqrt{1+m^2}$ touches the circle $x^2+y^2=a^2$ irrespective of the value of m.

Let the point of contact in this case be (x', y').

The radius of the circle through (x', y) has the equation $y=-\frac{1}{m}x$ ($\because m$ is the slope of the tangent).

Since (x', y') is common to the radius and the tangent,

$$\text{we have } y'=-\frac{1}{m}x' \text{ and } y'=mx'\pm a\sqrt{1+m^2}$$

$$\text{Solving, we get } x'=\frac{-(\pm am)}{\sqrt{1+m^2}},\ y'=\frac{(\pm a)}{\sqrt{1+m^2}}$$

$\therefore$ The line $y=mx+a\sqrt{1+m^2}$ touches the circle at

$$\left(\frac{-am}{\sqrt{1+m^2}}, \frac{a}{\sqrt{1+m^2}}\right)$$

and the line $y=mx-a\sqrt{1+m^2}$ touches the circle at

$$\left(\frac{am}{\sqrt{1+m^2}}, \frac{-a}{\sqrt{1+m^2}}\right).$$

Aliter :

The co-ordinates of points of intersection of the line and the circle satisfy the equations $y=mx+c$ and $x^2+y^2=a^2$ simultaneously.

ದತ್ತ ವೃತ್ತದ ಕೇಂದ್ರ (0, 0) ದಿಂದ ದತ್ತರೇಖೆ $y=mx+c$ ಗಿರುವ ಲಂಬ ದೂರವು ವತ್ತದ ತ್ರಿಜ್ಯಕ್ಕೆ ಸಮನಾದಾಗ ದತ್ತರೇಖೆಯು ವೃತ್ತವನ್ನು ಸ್ಪರ್ಶಿಸುತ್ತದೆ.
∴ ಬೇಕಾದ ನಿಬಂಧನೆ

$$\pm \frac{c}{\sqrt{1+m^2}} = a \text{ ಅಥವಾ } c = \pm a\sqrt{1+m^2}$$

∴ $y=mx+c$ ರೇಖೆಯು $c = \pm a\sqrt{1+m^2}$ ಆದಾಗ mನ ಬೆಲೆ ಏನೇ ಆದರೂ $x^2+y^2=a^2$ ವೃತ್ತವನ್ನು ಸ್ಪರ್ಶಿಸುತ್ತದೆ.

ಅಥವಾ $y=mx\pm a\sqrt{1+m^2}$ ರೇಖೆಯು m ನ ಬೆಲೆಯು ಯಾವುದೇ ಆಗಲಿ, $x^2+y^2=a^2$ ವೃತ್ತವನ್ನು ಯಾವಾಗಲೂ ಸ್ಪರ್ಶಿಸುತ್ತದೆ.
ಇಂತಹ ಸಂದರ್ಭದಲ್ಲಿ ಸ್ಪರ್ಶ ಬಿಂದುವು (x', y') ಆಗಿರಲಿ. ಆಗ (x', y') ಮೂಲಕ ಹಾದು ಹೋಗುವ ವೃತ್ತದ ತ್ರಿಜ್ಯದ ಸಮೀಕರಣ $y=-\frac{1}{m}x$. (∵ ಸ್ಪರ್ಶ ರೇಖೆಯ ಓಟ m).

(x', y') ಬಿಂದುವು ತ್ರಿಜ್ಯ ಮತ್ತು ಸ್ಪರ್ಶರೇಖೆಗಳಿಗೆ ಸಾಮಾನ್ಯವಾಗಿರುವುದರಿಂದ

$$y'=-\frac{1}{m}x' \text{ ಮತ್ತು } y'=mx'\pm a\sqrt{1+m^2}.$$

ಬಿಡಿಸಿದರೆ ; $x'=-\dfrac{(\pm am)}{\sqrt{1+m^2}}$, $y'=\dfrac{(\pm a)}{\sqrt{1+m^2}}$

∴ $y=mx+a\sqrt{1+m^2}$ ರೇಖೆಯು ವೃತ್ತವನ್ನು

$\left[\dfrac{-am}{\sqrt{1+m^2}}, \dfrac{a}{\sqrt{1+m^2}}\right]$ ಬಿಂದುವಿನಲ್ಲೂ,

$y=mx-a\sqrt{1+m^2}$ ರೇಖೆಯು ವೃತ್ತವನ್ನು

$\left[\dfrac{am}{\sqrt{1+m^2}}, \dfrac{-a}{\sqrt{1+m^2}}\right]$ ಬಿಂದುವಿನಲ್ಲೂ ಸಂಧಿಸುತ್ತದೆ.

ಎರಡನೆಯ ವಿಧಾನ :

ದತ್ತರೇಖೆ ಹಾಗೂ ದತ್ತವೃತ್ತಗಳ ಛೇದನಾ ಬಿಂದುಗಳ ನಿರ್ದೇಶಕಗಳು $y=mx+c$ ಮತ್ತು $x^2+y^2=a^2$ ಸಮೀಕರಣಗಳನ್ನು ಏಕಕಾಲದಲ್ಲಿ ಸರಿದೂಗಿಸುತ್ತದೆ.

i.e., the x-co-ordinates of the points of intersection satisfy the equation $x^2+(mx+c)^2=a^2$. .... (1)

or $x^2(1+m^2)+2cmx+(c^2-a^2)=0$.

If the line touches the circle, the two points of intersection coincide and so the equation (1) should have equal roots. The condition for this is,

$$c^2m^2-(1+m^2)(c^2-a^2)=0$$

or, $c^2=a^2(1+m^2)$ or $c=\pm a\sqrt{1+m^2}$.

If the condition is satisfied, the sum of the roots of (1) is $2x=-2cm/(1+m^2)$,

$$\text{or } x=-\frac{m}{1+m^2}\left[\pm a\sqrt{1+m^2}\right]=\pm\left(\frac{(-am)}{\sqrt{1+m^2}}\right)$$

The corresponding value of y is

$$y=m\left[\pm\frac{(-am)}{\sqrt{1+m^2}}\right]+c=\pm\left[\frac{-am}{\sqrt{1+m^2}}+a\sqrt{1+m^2}\right]$$

$$=\pm\frac{a}{\sqrt{1+m^2}}.$$

These give the co-ordinates of the point of contact.

Note :—The above discussion shows that for a circle there are two tangents parallel to a given direction.

Similarly one can obtain the condition that the line $lx+my+n=0$ may touch $x^2+y^2+2gx+2fy+c=0$. (The student may take up this as an exercise).

4 *Find the circle which passes through the point* (2, —1) *and is tangent to the line* $x+y+1=0$ *at the point* (0, —1).

Since the circle must pass through the points (2, —1) and (0, —1), its centre will lie on the perpendicular bisector of the segment connecting these points.

i.e., on the line $x=1$ .... (1)

The centre must also lie on the line perpendicular to $x+y+1=0$

at the point (0, —1). *i.e.*, on the line $x-y-1=0$.... (2)

∴ ಈ ಬಿಂದುಗಳ x–ನಿರ್ದೇಶಕಗಳು

$$x^2+(mx+c)^2=a^2 \quad \ldots\ldots\ldots\ldots\ldots (1)$$

ಅಥವಾ $x^2(1+m^2)+2cmx+c^2-a^2=0$ ಸಮೀಕರಣವನು ಸಿದ್ಧಿಸುತ್ತವೆ.

ದತ್ತ ರೇಖೆಯು ದತ್ತ ವೃತ್ತವನ್ನು ಸ್ಪರ್ಶಿಸಿದರೆ, ಎರಡು ಸಂಗಮ ಬಿಂದುಗಳು ಪರಸ್ಪರ ಐಕ್ಯವಾಗುವುದರಿಂದ ಈ ಸಮೀಕರಣದ ಎರಡು ಮೂಲಗಳು ಸಮವಾಗ ಬೇಕಾಗುತ್ತವೆ.

ಇದಕ್ಕೆ ಬೇಕಾದ ನಿಬಂಧನೆ $c^2m^2-(1+m^2)(c^2-a^2)=0$

ಅಥವಾ $c^2=a^2(1+m^2)$ ಅಥವಾ $c=\pm a\sqrt{1+m^2}$.

ಈ ನಿಬಂಧನೆಯು ಸಿದ್ಧಿತವಾದಾಗ, ಸಮೀಕರಣ (1) ರ ಮೂಲಗಳ ಮೊತ್ತ $2x=-2cm/(1+m^2)$.

ಅಥವಾ $x=-\dfrac{m}{1+m^2}\left[\pm a\sqrt{1+m^2}\right]=\pm\left(\dfrac{-am}{\sqrt{1+m^2}}\right)$

ಇದಕ್ಕೆ ಹೊಂದಿಕೊಂಡ y ನ ಬೆಲೆ

$$y=m\left[\pm\frac{(-am)}{\sqrt{1+m^2}}\right]+c=\pm\left[\frac{-am}{\sqrt{1+m^2}}+a\sqrt{1+m^2}\right]$$

$$=\pm\frac{a}{1+m^2}.$$

ಇವು ಸ್ಪರ್ಶ ಬಿಂದುವಿನ ನಿರ್ದೇಶಕಗಳನ್ನು ಕೊಡುತ್ತವೆ.

ಸೂಚನೆ : ಈ ಮೇಲಿನ ಪರಿಶೀಲನೆಯಿಂದ, ಒಂದು ವೃತ್ತಕ್ಕೆ ಕುರಿತ ದಿಕ್ಕಿಗೆ ಸಮಾನಾಂತರವಾಗಿರತಕ್ಕ ಎರಡು ಸ್ಪರ್ಶ ರೇಖೆಗಳಿರುತ್ತವೆ ಎಂದು ಸ್ಪಷ್ಟವಾಗುತ್ತದೆ.

ಇದರಂತೆಯೇ $lx+my+n=0$ ರೇಖೆಯು $x^2+y^2+2gx+2fy+c=0$ ವೃತ್ತವನ್ನು ಸ್ಪರ್ಶಿಸಲು ಬೇಕಾದ ನಿಬಂಧನೆಯನ್ನು ಕಂಡು ಹಿಡಿಯಬಹುದು. (ವಿದ್ಯಾರ್ಥಿಯು ಇದನ್ನು ಅಭ್ಯಾಸಕ್ಕಾಗಿ ಮಾಡಬಹುದು.)

4 (2, −1) ಬಿಂದುವಿನ ಮೂಲಕ ಸಾಗುವ $x+y+1=0$ ರೇಖೆಯನು (0, −1) ಬಿಂದುವಿನಲ್ಲಿ ಸ್ಪರ್ಶಿಸುವ ವೃತ್ತವನ್ನು ಗೊತ್ತುಮಾಡಿ.

ವೃತ್ತವು (2, −1) ಮತ್ತು (0, −1) ಬಿಂದುಗಳ ಮೂಲಕ ಹೋಗ ಬೇಕಾಗಿರುವುದರಿಂದ, ಅದರ ಕೇಂದ್ರವು ಈ ಬಿಂದುಗಳನ್ನು ಸೇರಿಸುವ ರೇಖಾಭಾಗದ ಲಂಬಾರ್ಧಕದ ಮೇಲೆ ಅಂದರೆ $x=1$ ....(1)
ರೇಖೆಯ ಮೇಲೆ ಇರುವುದು.

ಅಲ್ಲದೆ ಕೇಂದ್ರವು $x+y+1=0$ ರೇಖೆಗೆ (0, −1) ಬಿಂದುವಿನಲ್ಲಿರುವ ಲಂಬದ ಮೇಲೂ ಅಂದರೆ $x-y-1=0$....(2)
ರೇಖೆಯ ಮೇಲೂ ಇರುವುದು.

Solving (1) and (2), we get $x=1$, $y=0$.

$\therefore$ The centre is (1, 0) ...

and the radius is $\sqrt{(2-1)^2+(-1)^2} = \sqrt{2}$.

$\therefore$ The required equation is $(x-1)^2+y^2=2$

or $x^2+y^2-2x-1=0$.

5 *Find the equations of the tangents from the origin to the circle* $x^2+y^2-6x-2y+8=0$.

The centre of the given circle is (3, 1).

The radius is $\sqrt{3^2+1^2-8} = \sqrt{2}$.

The equation of any line through the origin is $y=mx$. This line will be a tangent to the circle if the length of the perpendicular drawn from the centre (3, 1) to the line is equal to the radius $\sqrt{2}$.

$$i.e., \text{ if } \pm\frac{3m-1}{\sqrt{1+m^2}}=\sqrt{2}$$

$$i.e. \text{ if } 2(1+m^2) = (3m-1)^2$$

$$\text{or } 2+2m^2=9m^2-6m+1$$

$$i.e., \text{ if } 7m^2-6m-1=0.$$

$$\text{or } m=1 \text{ or } -\frac{1}{7}.$$

$\therefore$ The equations of the tangents are $y=x$ and

$$y=-\frac{1}{7}x.$$

Exercises 6.2

1 Write down the equation of the tangent to each of the following circles at the given point.

(i) $x^2+y^2-4=0$ at (2, 2).

(ii) $x^2+y^2+8x-y=0$ at (0, 0).

(iii) $x^2+y^2+5x+3y-4=0$ at (1, -1).

(1) ಮತ್ತು (2) ನ್ನು ಬಿಡಿಸಿದರೆ $x=1,\ y=0$ ಎಂದಾಗುವುದು.

$\therefore$ ವೃತ್ತದ ಕೇಂದ್ರ $(1,\ 0)$.

ತ್ರಿಜ್ಯ $\sqrt{(2-1)^2+(-1)^2}=\sqrt{2}.$

$\therefore$ ಬೇಕಾಗಿರುವ ವೃತ್ತದ ಸಮೀಕರಣ $(x-1)^2+y^2=2$

ಅಥವಾ $x^2+y^2-2x-1=0.$

5 $x^2+y^2-6x-2y+8=0$ ವೃತ್ತಕ್ಕೆ ಮೂಲ ಬಿಂದುವಿನ ಮೂಲಕ ಹೋಗುವ ಸ್ಪರ್ಶರೇಖೆಗಳ ಸಮೀಕರಣಗಳನ್ನು ಕಂಡುಹಿಡಿಯಿರಿ.

ದತ್ತ ವೃತ್ತದ ಕೇಂದ್ರ $(3,\ 1)$.

ಅದರ ತ್ರಿಜ್ಯ $\sqrt{3^2+1^2-8}=\sqrt{2}.$

ಮೂಲ ಬಿಂದುವಿನ ಮೂಲಕ ಹಾದುಹೋಗುವ ರೇಖೆಯೊಂದರ ಸಮೀಕರಣ

$$y=mx.$$

ವೃತ್ತದ ಕೇಂದ್ರದಿಂದ ಈ ರೇಖೆಗಿರುವ ಲಂಬದೂರ ವೃತ್ತದ ತ್ರಿಜ್ಯಕ್ಕೆ ಸಮವಾದರೆ,

ಅಂದರೆ $\pm\dfrac{3m-1}{\sqrt{1+m^2}}=\sqrt{2}$ ಅಥವಾ $7m^2-6m-1=0$

ಆಗುತ್ತದೆ.

ಅಂದರೆ $m=1$, ಅಥವಾ $m=-\dfrac{1}{7}$ ಆದಾಗ $y=mx$ ರೇಖೆಯು ದತ್ತ ವೃತ್ತವನ್ನು ಸ್ಪರ್ಶಿಸುತ್ತದೆ.

$\therefore$ $y=x$ ಮತ್ತು $y=-\dfrac{1}{7}x$ ಗಳು ಮೂಲಬಿಂದುವಿನಿಂದ ದತ್ತ ವೃತ್ತಕ್ಕೆಳೆದ ಸ್ಪರ್ಶರೇಖೆಗಳ ಸಮೀಕರಣಗಳು.

ಅಭ್ಯಾಸಗಳು 6.2

1 ಈ ಕೆಳಗೆ ಕೊಟ್ಟಿರುವ ಪ್ರತಿ ವೃತ್ತಕ್ಕೂ ದತ್ತ ಬಿಂದುವಿನಲ್ಲಿ ಇರುವ ಸ್ಪರ್ಶರೇಖೆಯ ಸಮೀಕರಣವನ್ನು ಬರೆಯಿರಿ.

(i) $x^2+y^2-4=0$, $(2,\ 2)$ ಬಿಂದುವಿನಲ್ಲಿ.

(ii) $x^2+y^2+8x-y=0$, $(0,\ 0)$ ಬಿಂದುವಿನಲ್ಲಿ.

(iii) $x^2+y^2+5x+3y-4=0$, $(1,-1)$ ಬಿಂದುವಿನಲ್ಲಿ.

2 Write down the equations of the tangents to each of the following circles at the points where they cross the co-ordinate axes.

(i) $x^2+y^2-16=0$.
(ii) $x^2+y^2+3x+5y+4=0$.
(iii) $x^2+y^2+x-2=0$.

3 Find the tangents to

(i) $x^2+y^2=1$ parallel to $3x=4y$.
(ii) $x^2+y^2=2$ perpendicular to $x+5y=0$.
(iii) $x^2+y^2-2x-2y+1=0$ parallel to the x—axis.
(iv) $x^2+y^2-6x-2y+9=0$ through the origin.

4 (i) Show that $y=x+5\sqrt{2}$ touches the circle $x^2+y^2=25$.
(ii) For what values of k will the straight line $6x+y=k$ touch the circle $x^2+y^2=16$?
(iii) Show that $5x+12y-4=0$ touches the circle $x^2+y^2-6x+4y+12=0$.

Find the point of contact in each case.

5 A circle passes through the points $(-1, 1)$, $(0, 6)$ and $(5, 5)$. Find the equations of the tangents which are parallel to the line joining the origin and the centre.

6 Find the equation of the circle which

(i) has its centre at $(1, 2)$ and touches $x-y+2=0$.
(ii) touches the axes and also $3x+4y-1=0$.
(iii) touches the axes of co-ordinates and also the line $\frac{x}{a}+\frac{y}{b}=1$, the centre being in the first quadrant.

2 ಈ ಕೆಳಗಿನ ವೃತ್ತಗಳಿಗೆ ಅವು ಅಕ್ಷಗಳನ್ನು ಛೇದಿಸುವ ಬಿಂದುಗಳಲ್ಲಿ ಇರುವ ಸ್ಪರ್ಶರೇಖೆಗಳ ಸಮೀಕರಣಗಳನ್ನು ಬರೆಯಿರಿ.

(i) $x^2+y^2-16=0$

(ii) $x^2+y^2+3x+5y+4=0$

(iii) $x^2+y^2+x-2=0$.

(i) $x^2+y^2=1$ ಕ್ಕೆ $3x=4y$ಗೆ ಸಮಾನಾಂತರವಾಗಿ

(ii) $x^2+y^2=2$ ಕ್ಕೆ $x+5y=0$ಗೆ ಲಂಬವಾಗಿ

(iii) $x^2+y^2-2x-2y+1=0$ಗೆ x ಅಕ್ಷಕ್ಕೆ ಸಮಾನಾಂತರವಾಗಿ

(iv) $x^2+y^2-6x-2y+9=0$ಗೆ ಮೂಲಬಿಂದುವಿನ ಮೂಲಕ ಇರುವ ಸ್ಪರ್ಶರೇಖೆಗಳನ್ನು ಗೊತ್ತುಮಾಡಿ.

4 (i) $y=x+5\sqrt{2}$ ರೇಖೆಯು $x^2+y^2=25$ ವೃತ್ತವನ್ನು ಸ್ಪರ್ಶಿಸುತ್ತದೆ ಎಂದು ತೋರಿಸಿ.

(ii) kಯು ಯಾವ ಬೆಲೆಗೆ $6x+y=k$ ರೇಖೆಯು $x^2+y^2=16$ ವೃತ್ತವನ್ನು ಸ್ಪರ್ಶಿಸುತ್ತದೆ ?

(iii) $5x+12y-4=0$ ರೇಖೆಯು $x^2+y^2-6x+4y+12=0$ ವೃತ್ತವನ್ನು ಸ್ಪರ್ಶಿಸುತ್ತದೆ ಎಂದು ತೋರಿಸಿ.

ಮೇಲಿನ ಪ್ರತಿಯೊಂದರಲ್ಲೂ ಸ್ಪರ್ಶ ಬಿಂದುಗಳನ್ನು ಗೊತ್ತುಮಾಡಿ.

5 ಒಂದು ವೃತ್ತವು $(-1, 1)$, $(0, 6)$ ಮತ್ತು $(5, 5)$ ಬಿಂದುಗಳ ಮೂಲಕ ಸಾಗುತ್ತದೆ. ಮೂಲ ಬಿಂದುವಿನಿಂದ ವೃತ್ತದ ಕೇಂದ್ರಕ್ಕೆಳೆದ ರೇಖೆಗೆ ಸಮಾನಾಂತರವಾಗಿರುವ ಸ್ಪರ್ಶರೇಖೆಗಳನ್ನು ಗೊತ್ತುಮಾಡಿ.

6 (i) $(1, 2)$ ಬಿಂದುವಿನಲ್ಲಿ ಕೇಂದ್ರವಿರುವ, $x-y+2=0$ ರೇಖೆಯನ್ನು ಸ್ಪರ್ಶಿಸುವ ;

(ii) ಅಕ್ಷಗಳನ್ನು ಮತ್ತು $3x+4y-1=0$ ರೇಖೆಯನ್ನು ಸ್ಪರ್ಶಿಸುವ ;

(iii) ಕೇಂದ್ರವನ್ನು ಮೊದಲನೆಯ ಪಾದದಲ್ಲಿ ಹೊಂದಿ, ಅಕ್ಷಗಳನ್ನೂ

$\frac{x}{a}+\frac{y}{b}=1$ ರೇಖೆಯನ್ನೂ ಸ್ಪರ್ಶಿಸುವ,

ವೃತ್ತದ ಸಮೀಕರಣವನ್ನು ಗೊತ್ತುಮಾಡಿ.

6.3 Length of a tangent from a point to the circle—

Let $x^2+y^2+2gx+2fy+c=0$ be a circle. Then its centre is $C\equiv(-g, -f)$ and radius is $r=\sqrt{g^2+f^2-c}$.

Let $P\ (x_1, y_1)$ be a point not on the circle. Let a tangent from P touch the circle at T.



Fig 6.5

Since $CT \pm PT$, $\perp$ have

$$CP^2=CT^2+TP^2 \text{ or } CP^2=r^2+TP^2$$

But $CP^2=(x_1+g)^2+(y_1+f)^2$

$$\therefore \quad TP^2=(x_1+g)^2+(y_1+f)^2-r^2$$

$$=(x_1^2+y_1^2+g^2+f^2+2gx_1+2fy_1)-(g^2+f^2-c)$$

$$=x_1^2+y_1^2+2gx_1+2fy_1+c$$

$$\therefore \quad TP=[x_1^2+y_1^2+2gx_1+2fy_1+c]^{\frac{1}{2}}$$

Thus,

> The length of the tangent from $(x_1 y_1)$ to the circle $x_1^2+y_1^2+2gx_1+2fy_1+c=0$ is $\sqrt{x_1^2+y_1^2+2gx_1+2fy_1+c}$

Cor. :—Length of the tangent from (x_1, y_1) to the circle $x^2+y^2=r^2$ is $\left|[x_1^2+y_1^2-r^2]^{\frac{1}{2}}\right|$

Note :—TP^2 is positive if P is outside the circle, TP^2 is negative if P is inside the circle and TP^2 is zero if P is on the circle.

6.3 ಒಂದು ಬಿಂದುವಿನಿಂದ ವೃತ್ತಕ್ಕೆ ಎಳೆವ ಸ್ಪರ್ಶರೇಖೆಯ ಉದ್ದ

$x^2+y^2+2gx+2fy+c=0$ ವೃತ್ತವೊಂದರ ಸಮೀಕರಣವಾಗಿರಲಿ. ಅದರ ಕೇಂದ್ರ $C\equiv(-g,-f)$ ಮತ್ತು ತ್ರಿಜ್ಯ $r=\sqrt{g^2+f^2-c}$.

P (x_1, y_1) ಎಂಬುದು ವೃತ್ತದ ಮೇಲಿಲ್ಲದ ಯಾವುದಾದರೊಂದು ಬಿಂದುವಾಗಿರಲಿ. P ಯಿಂದ ವೃತ್ತಕ್ಕೆ ಎಳೆವ ಒಂದು ಸ್ಪರ್ಶರೇಖೆಯು ವೃತ್ತವನು T ಯಲ್ಲಿ ಸ್ಪರ್ಶಿಸಲಿ.



Fig. 6·5

$CT \perp PT$ ಆಗಿರುವುದರಿಂದ

$$CP^2=CT^2+TP^2=r^2+TP^2$$

ಆದರೆ $CP^2=(x_1+g)^2+(y_1+f)^2$

$$\therefore TP^2=(x_1+g)^2+(y_1+f)^2-r^2$$
$$=(x_1^2+y_1^2+2gx_1+2fy_1+g^2+f^2)-(g^2+f^2-c)$$
$$=x_1^2+y_1^2+2gx_1+2fy_1+c$$
$$\therefore TP=[x_1^2+y_1^2+2gx_1+2fy_1+c]^{\frac{1}{2}}$$

ಆದ್ದರಿಂದ,

(x_1, y_1) ಬಿಂದುವಿನಿಂದ $x^2+y^2+2gx+2fy+c=0$ ವೃತ್ತಕ್ಕೆ ಎಳೆದ ಸ್ಪರ್ಶರೇಖೆಯ ಉದ್ದ $\sqrt{x_1^2+y_1^2+2gx_1+2fy_1+c}$

ಉ.ಪ್ರ.— (x_1, y_1) ಬಿಂದುವಿನಿಂದ $x^2+y^2=r^2$ ವೃತ್ತಕ್ಕಿರುವ ಸ್ಪರ್ಶರೇಖೆಯ ಉದ್ದ $\left|[x_1^2+y_1^2-r^2]^{\frac{1}{2}}\right|$

ಸೂಚನೆ:— P ಬಿಂದುವು ವೃತ್ತದ ಹೊರಗಡೆ ಇದ್ದರೆ TP^2 ಧನವಾಗಿಯೂ, P ಬಿಂದುವು ವೃತ್ತದ ಒಳಗಡೆ ಇದ್ದರೆ TP^2 ಋಣವಾಗಿಯೂ, P ಬಿಂದುವು ವೃತ್ತದ ಮೇಲಿದ್ದರೆ TP^2 ಶೂನ್ಯವಾಗಿಯೂ ಇರುವುದು.

Exercises 6.3

1 Without drawing a figure determine whether the points (0, 0), (1, 0), (—1, —1) lie outside, on the circumference, or inside the circle $x^2+y^2+4x+8y-5=0$.

2 Prove that the tangents from (1, 8) to the circles $x^2+y^2+6x-5=0$ and $x^2+y^2=6$ are equal in lengths.

3 Find the length of the tangent from a point of the circle $x^2+y^2+2x+2y-8=0$ to $x^2+y^2+2x+2y-1=0$.

4 Find the points on the line $x-y+1=0$, the tangents from which to the circle $x^2+y^2-3x=0$ are of length 2.

5 Find the locus of points, the lengths of tangents from which to the circle $4x^2+4y^2=9$ and $9x^2+9y^2=16$ are in the ratio 1 : 2.

6 Two circles are such that the length of the tangent from a point on one of them to the other is always a constant. Show that the circles are concentric. Find the difference of their radii.

6.4 Orthogonal Circles—

Let S and S' be two intersecting circles. Let P be a point of intersection. Then we define the angle between the two circles at P as the angle between the tangents to the two circles at that point. If this angle is $\frac{\pi}{2}$, we say that the circles are mutually orthogonal. From the definition of orthogonal circles, it follows that the two circles are orthogonal if the radii of the two circles through the point of intersection are perpendicular.



Fig. 6.6

ಅಭ್ಯಾಸಗಳು 6.3

1 ಚಿತ್ರವನ್ನು ಬರೆಯದೆಯೇ (0, 0), (1, 0), (—1, —1) ಬಿಂದುಗಳು $x^2+y^2+4x+8y-5=0$ ವೃತ್ತದ ಹೊರಗಡೆ, ಒಳಗಡೆ ಅಥವಾ ಮೇಲೆ ಇವೆಯೋ ನಿರ್ಧರಿಸಿ.

2 (1, 8) ಬಿಂದುವಿನಿಂದ $x^2+y^2+6x-5=0$ ಮತ್ತು $x^2+y^2=6$ ವ ತ್ತಗಳಿಗಿರುವ ಸ್ಪರ್ಶರೇಖೆಗಳ ಉದ್ದಗಳು ಸಮವೆಂದು ತೋರಿಸಿ.

3 $x^2+y^2+2x+2y-8=0$ ವೃತ್ತದ ಬಿಂದುವೊಂದರಿಂದ

$$x^2+y^2+2x+2y-1=0$$

ವೃತ್ತಕ್ಕೆ ಎಳೆದ ಸ್ಪರ್ಶರೇಖೆಯ ಉದ್ದವೇನು ?

4 $x^2+y^2-3x=0$ ವೃತ್ತಕ್ಕೆ $x-y+1=0$ ರೇಖೆಯ ಮೇಲಿನ ಯಾವುದೋ ಬಿಂದುಗಳಿಂದ ಎಳೆದ ಸ್ಪರ್ಶರೇಖೆಗಳ ಉದ್ದವು 2 ಆಗಿದ್ದರೆ ಆ ಬಿಂದುಗಳಾವುವು ?

5 $4x^2+4y^2=9$ ಮತ್ತು $9x^2+9y^2=16$ ವೃತ್ತಗಳಿಗೆ ಎಳೆದ ಸ್ಪರ್ಶ ರೇಖೆಗಳ ಉದ್ದಗಳ ಪ್ರಮಾಣವು 1 : 2 ಆಗಿರುವಂತಹ ಬಿಂದುಗಳ ಪಥವೇನು ?

6 ಎರಡು ವೃತ್ತಗಳಲ್ಲಿ ಒಂದು ವೃತ್ತದ ಯಾವುದೇ ಬಿಂದುವಿನಿಂದ ಇನ್ನೊಂದಕ್ಕೆ ಎಳೆದ ಸ್ಪರ್ಶರೇಖೆಯ ಉದ್ದವು ಯಾವಾಗಲೂ ಒಂದು ಸ್ಥಿರ ಸಂಖ್ಯೆ ಆಗಿದೆ. ಆ ವೃತ್ತಗಳು ಏಕ ಕೇಂದ್ರ ವ ತ್ತಗಳೆಂದು ತೋರಿಸಿ. ಅವುಗಳ ತ್ರಿಜ್ಯಗಳ ವ್ಯತ್ಯಾಸವನ್ನು ಕಂಡುಹಿಡಿಯಿರಿ.

6.4 ಲಂಬ ವೃತ್ತಗಳು

S ಮತ್ತು S' ಗಳು ಪರಸ್ಪರ ಛೇದಿಸುವ ಎರಡು ವೃತ್ತಗಳಾಗಿರಲಿ. Pಯು ಒಂದು ಸಂಗಮ ಬಿಂದುವಾಗಿರಲಿ. ಆಗ ನಾವು Pಯಲ್ಲಿ ಎರಡೂ ವೃತ್ತಗಳಿಗಿರುವ ಸ್ಪರ್ಶರೇಖೆಗಳ ನಡುವಿನ ಕೋನವನ್ನು ವೃತ್ತಗಳ ನಡುವಿನ ಕೋನವೆನ್ನುತ್ತೇವೆ. ಈ ಕೋನವು 90° ಆದಾಗ ವೃತ್ತಗಳು ಪರಸ್ಪರ ಲಂಬವಾಗಿವೆ ಎನ್ನುತ್ತೇವೆ. ಲಂಬ ವೃತ್ತಗಳ ಈ ವ್ಯಾಖ್ಯೆಯಿಂದ, ವೃತ್ತಗಳ ಸಂಗಮ ಬಿಂದುವಿನ ಮೂಲಕ ಹೋಗುವ ತ್ರಿಜ್ಯಗಳು ಪರಸ್ಪರ ಲಂಬವಾಗಿದ್ದರೆ ವೃತ್ತಗಳು ಲಂಬವಾಗಿರುವುವು ಎಂದು ತಿಳಿದು ಬರುತ್ತದೆ.



ಚಿತ್ರ 6.6

Let the equations of S and S' be

$$x^2+y^2+2gx+2fy+c=0$$

and $x^2+y^2+2g'x+2f'y+c'=0$

Their centres, say C and C', are respectively $(-g, -f)$ and $(-g', -f')$

and $PC^2=g^2+f^2-c, \quad PC'^2=g'^2+f'^2-c'$

The condition that S and S' may be orthogonal is that PC is perpendicular to PC'

$$\therefore \quad CC'^2=PC^2+PC'^2$$

i.e. $(-g+g')^2+(-f+f')^2=g^2+f^2-c+g'^2+f'^2-c'$

Simplifying this we find that

the condition that the circles $x^2+y^2+2gx+2fy+c=0$ and $x^2+y^2+2g'x+2f'y+c'=0$ may cut orthogonally is $2gg'+2ff'=c+c'$.

Examples

1 *Show that, whatever may be the value of k, the circles $x^2+y^2+2x+2yk+3=0$ and $x^2+y^2+3x+y+k=0$ cut each other orthogonally.*

Here $g=1$; $g'=\dfrac{3}{2}$, $f=k$; $f'=\dfrac{1}{2}$, $c=3$, $c'=k$

The two circles cut each other if

$$2.1.\ \frac{3}{2}+2.k.\ \frac{1}{2}=3+k.$$

i.e. if $3+k=3+k$

which is true whatever value k may have.

2 *Find the equation of the circle which has its centre at $(-2, 2)$ and cutting the circle $x^2+y^2+2x+2y+2=0$ orthogonally.*

Let the equation of the required circle be

$$x^2+y^2+2gx+2fy+c=0.$$

Then by hypothesis $-g=-2$; $-f=2$.

S ಮತ್ತು S' ಗಳ ಸಮೀಕರಣಗಳು

$$x^2+y^2+2gx+2fy+c=0 \qquad (1)$$

ಮತ್ತು $x^2+y^2+2g'x+2f'y+c'=0$ (2) ಆಗಿರಲಿ.

ಅವುಗಳ ಕೇಂದ್ರಗಳು C ಮತ್ತು C' ಆದರೆ $(-g, -f)$ ಮತ್ತು $C'\equiv(-g', -f')$. ಮತ್ತು $PC^2=g^2+f^2-c$, $PC'^2=g'^2+f'^2-c'$ ವೃತ್ತಗಳು ಪರಸ್ಪರ ಲಂಬವಾಗಿರಬೇಕಾದ ನಿಬಂಧನೆ $PC\perp PC'$.
ಅಂದರೆ $CC'^2=PC^2+PC'^2$.

ಅಂದರೆ $(-g+g')^2+(-f+f')^2=g^2+f^2-c+g'^2+f'^2-c'$
ಸಂಕ್ಷೇಪಿಸಿದರೆ,

$$x^2+y^2+2gx+2fy+c=0$$
ಮತ್ತು $x^2+y^2+2gx'+2f'y+c'=0$
ಲಂಬವಾಗಿರಲು ಬೇಕಾಗಿರುವ ನಿಬಂಧನೆ $2gg'+2ff'=c+c'$

ಉದಾಹರಣೆಗಳು

1 k ಯ ಬೆಲೆ ಯಾವುದೇ ಆಗಿರಲಿ,

$x^2+y^2+2x+2ky+3=0$ ಮತ್ತು
$x^2+y^2+3x+y+k=0$ ವೃತ್ತಗಳು ಪರಸ್ಪರ ಲಂಬವಾಗಿ ಛೇದಿಸುವುವು ಎಂದು ತೋರಿಸಿ.

ಇಲ್ಲಿ $g=1,\ g'=\frac{3}{2},\quad f=k,\quad f'=\frac{1}{2},\quad c=3,\ c'=k.$

ವೃತ್ತಗಳು ಪರಸ್ಪರ ಲಂಬವಾಗಿ ಛೇದಿಸಲು ಬೇಕಾದ ನಿಬಂಧನೆ

$$2\cdot1\cdot\frac{3}{2}+2\cdot k\quad\frac{1}{2}=3+k \text{ ಅಥವಾ } 3+k=3+k.$$

kಯ ಬೆಲೆ ಯಾವುದಾದರೂ ಇದು ಸತ್ಯ.

2 $x^2+y^2+2x+2y+2=0$ ವೃತ್ತವನ್ನು ಲಂಬವಾಗಿ ಛೇದಿಸುವಂತೆ $(-2, 2)$ ಬಿಂದುವನ್ನು ಕೇಂದ್ರವನ್ನಾಗಿ ಉಳ್ಳ ವೃತ್ತದ ಸಮೀಕರಣವನ್ನು ಗೊತ್ತು ಮಾಡಿ.

ಬೇಕಾಗಿರುವ ವೃತ್ತದ ಸಮೀಕರಣ

$x^2+y^2+2gx+2fy+c=0$ ಆಗಿರಲಿ.

ದತ್ತದ ಪ್ರಕಾರ $-g=-2$; $-f=2$.

Since this circle cuts the given circle orthogonally

$$2g.1+2f.1=c+2$$

i.e. $2-4=c+2$ or $c=-4$.

$\therefore$ The required circle is $x^2+y^2+4x-4y-4=0$.

Exercises **6.4**

1 Show that the following pairs of circles are mutuall orthogonal.

(i) $x^2+y^2-4x+2y-2=0$ and $x^2+y^2+6x-2y-12=0$.

(ii) $x^2+y^2+4x-4y+2=0$ and $x^2+y^2+2x+2y-2=0$.

(iii) $x^2+y^2+2gx+c=0$ and $x^2+y^2+2fy-c=0$.

2 Find the equations to two equal circles wit centres at (2, 3) and (5, 6) which cut each other orthogonall

3 Find the circle which passes through (1, 0) an (−1, 0) and cuts $x^2+y^2+2x+2y-1=0$ orthoganally.

4 Find the equation of the circle which passes throug the origin, has its centre on $x+y=4$ and cuts orthogonall the circle $x^2+y^2-4x+2y+4=0$.

6.5 Radical Axis of two Circles—

Let S and S' be two circles and P be a point. Let P b such that the lenghts of tangents from P to the two circle are equal. Then the locus of P is called the radical axis c the circles. *Thus by a radical axis of two circles, we mea the locus of a point such that the lengths of tangents from to the two circles are equal.* It will be seen shortly that th locus is a line perpendicular to the line joining the centre of the circles. Also, the radical axis passes through th

ಈ ವೃತ್ತವು ದತ್ತ ವೃತ್ತವನ್ನು ಲಂಬವಾಗಿ ಛೇದಿಸುವುದರಿಂದ

$$2g.1+2f.1=c+2$$

ಅಂದರೆ $2-4=c+2$ ಅಥವಾ $c=-4$.

$\therefore$ ಬೇಕಾಗಿರುವ ವೃತ್ತ

$$x^2+y^2+4x-4y-4=0.$$

ಅಭ್ಯಾಸಗಳು 6.4

1 ಈ ಕೆಳಕಂಡ ವೃತ್ತ ದ್ವಯಗಳು ಪರಸ್ಪರ ಲಂಬವಾಗಿರುವುವೆಂದು ತೋರಿಸಿ.

(i) $x^2+y^2-4x+2y-2=0$; $x^2+y^2+6x-2y-12=0$.

(ii) $x^2+y^2+4x-4y+2=0$; $x^2+y^2+2x+2y-2=0$.

(iii) $x^2+y^2+2gx+c=0$; $x^2+y^2+2fy-c=0$.

2 ಪರಸ್ಪರ ಲಂಬವಾಗಿ ಛೇದಿಸುವ, (2, 3) ಮತ್ತು (5, 6) ಬಿಂದುಗಳಲ್ಲಿ ಕೇಂದ್ರಗಳನ್ನುಳ್ಳ ಎರಡು ಸಮವೃತ್ತಗಳ ಸಮೀಕರಣಗಳನ್ನು ಗೊತ್ತು ಮಾಡಿ.

3 (1, 0) ಮತ್ತು (—1, 0) ಬಿಂದುಗಳ ಮೂಲಕ ಸಾಗುವ ಹಾಗೂ $x^2+y^2+2x+2y-1=0$ ವೃತ್ತವನ್ನು ಲಂಬವಾಗಿ ಛೇದಿಸುವ ವೃತ್ತವನ್ನು ಗೊತ್ತು ಮಾಡಿ.

4 ಮೂಲ ಬಿಂದುವಿನ ಮೂಲಕ ಸಾಗುವ, $x+y=4$ ರೇಖೆಯ ಮೇಲೆ ಕೇಂದ್ರವನ್ನು ಹೊಂದಿರುವ ಮತ್ತು $x^2+y^2-4x+2y+4=0$ ವೃತ್ತವನ್ನು ಲಂಬವಾಗಿ ಛೇದಿಸುವ ಸಮಿಾಕರಣವನ್ನು ಗೊತ್ತುಮಾಡಿ.

6.5 ಎರಡು ವೃತ್ತಗಳ ಮೂಲಾಕ್ಷ ರೇಖೆ

S ಮತ್ತು S' ಎಂಬುವು ಎರಡು ವೃತ್ತಗಳೂ P ಎಂಬುದು ಒಂದು ಬಿಂದುವೂ ಆಗಿರಲಿ. P ಯಿಂದ ಎರಡೂ ವೃತ್ತಗಳಿಗೆ ಎಳೆದ ಸ್ಪರ್ಶರೇಖೆಗಳ ಉದ್ದಗಳು ಸಮವಾಗಿರುವಂತೆ P ಇರಲಿ. ಆಗ P ಯ ಬಿಂದು ಪಥವನ್ನು ವೃತ್ತಗಳ ಮೂಲಾಕ್ಷ ರೇಖೆ ಎಂದು ಕರೆಯುತ್ತೇವೆ. ಹೀಗೆ ಎರಡು ವೃತ್ತಗಳ ಮೂಲಾಕ್ಷ ರೇಖೆಯೆಂದರೆ, ಎರಡೂ ವೃತ್ತಗಳಿಗೆ ಸಮಾನ ಉದ್ದವುಳ್ಳ ಸ್ಪರ್ಶರೇಖೆಗಳನ್ನೆಳೆಯಬಹುದಾದ ಬಿಂದುಗಳೆಲ್ಲವುಗಳ ಗಣ ಎಂದು ಅರ್ಥಮಾಡಿಕೊಳ್ಳುತ್ತೇವೆ. ಮುಂದೆ ನೋಡುವಂತೆ ಈ (ಬಿಂದು ಪಥವು) ವೃತ್ತಗಳ ಕೇಂದ್ರಗಳನ್ನು ಸೇರಿಸುವ ರೇಖೆಗೆ ಲಂಬವಾಗಿರುವ ರೇಖೆ

points of intersection of the circles if they intersect, and i touches both of them at the point of contact if they touch each other. (See Fig., 6.7 (a), (b), (c) and (d).



Fig. 6.7 (*a*)



Fig. 6.7 (*b*)



Fig. 6.7 (*c*)



Fig. 6.7 (*d*)

Let $S \equiv x^2+y^2+2gx+2fy+c=0$ ....(1)

and $S' \equiv x^2+y^2+2g'x+2f'y+c'=0$ ....(2)

be two circles.

Let (x_1, y_1) be any point on the radical axis. Then the lengths of tangents from this point to (1) and (2) are equal.

i.e. $x_1{}^2+y_1{}^2+2gx_1+2fy_1+c=x_1{}^2+y_1{}^2+2g'x_1+2f'y_1+c'$

or $2(g-g')\,x_1+2\,(f-f')\,y_1+c-c'=0$

ಾಗಿರುತ್ತದೆ. ಅಲ್ಲದೆ, ಈ ರೇಖೆಯು, ವೃತ್ತಗಳು ಪರಸ್ಪರ ಛೇಧಿಸಿದರೆ, ಸಂಗಮ ಂದುಗಳ ಮೂಲಕ ಸಾಗುವುದು. ವೃತ್ತಗಳು ಪರಸ್ಪರ ಸ್ಪರ್ಶಿಸಿದರೆ, ಸ ರ್ಶ ಬಿಂದು ಲ್ಲಿ ಅವೆರಡನ್ನೂ ಸ ರ್ಶಿಸುತ ದೆ. (ಚಿತ್ರ 6.7 (a), (b), (c) ಮತ್ತು (d) ನೋಡಿ).



ಚಿತ್ರ 6.7(a)



ಚಿತ್ರ 6.7 (b)



ಚಿತ್ರ 6.7 (c)



ಚಿತ್ರ 6.7 (d)

$$S \equiv x^2+y^2+2\ x+2fy+c=0 \quad ....$$

ಮತ್ತು $S' \equiv x^2+y^2+2g'x+2f'y+c'=0 ....(2)$ ಎರಡು ವೃತ್ತಗಳಾಗಿರಲಿ.

(x_1, y_1) ಎನ್ನುವುದು ಮೂಲಾಕ್ಷರೇಖೆಯ ಮೇಲಿನ ಯಾವುದಾದರೂ ಒಂದು ಬಿಂದುವಾಗಿರಲಿ. ಆಗ ಈ ಬಿಂದುವಿನಿಂದ (1) ಮತ್ತು (2) ವೃತ್ತಗಳಿಗೆ ಎಳೆದ ಸ್ಪರ್ಶರೇಖೆಗಳ ಉದ ಗಳು ಸಮ.

ಅಂದರೆ $x_1^2+y_1^2+2gx_1+2fy_1+c=x_1^2+y_1^2+2g'x_1+2f'y_1+c'$

ವಾ $2(g-g')x_1+2(f-f')y_1+c-c'=0.$

But this is the condition that the point (x_1, y_1) should lie on the locus

$$S-S' \equiv 2(g-g')x+2(f-f')\,y+c-c'=0. \qquad ....(3)$$

This is therefore the equation of the radical axis, and it is clearly a straight line.

Also, its slope is $-\dfrac{g-g'}{f-f'}$ ....(4)

But, the slope of the line joining the centres is

$$\frac{f-f'}{g-g'} \qquad ....(5)$$

From (4) and (5) it follows that the radical axis is perpendicular to the line joining the centres of the circles.

Moreover from the equation (3), it follows that the co-ordinates of a point which satisfy $S=0$ and $S'=0$ simultaneously will satisfy $S-S'=0$ also. That means the radical axis passes through the points of intersection of the two circles.

We notice that if we have a set of circles all of which have the same two common points, the radical axis of each pair taken from this set is the same. (*i.e.* the line passing through the common points). We call such a set of circles which every pair taken out of them have the same radical axis, as a system of *Co axal circles.*



Fig. 6.8

ಅದರೆ ಇದು (x_1, y_1) ಬಿಂದುವು

$S-S' \equiv 2(g-g')x+2(f-f')y+(c-c')=0$ .... (3) ಬಿಂದು ಪಥದ ಮೇಲಿರಬೇಕಾದ ನಿಬಂಧನೆ.

$\therefore$ $S-S'=0$ ಎಂಬುದು ಮೂಲಾಕ್ಷರೇಖೆಯ ಸಮೀಕರಣ. ಇದೊಂದು ಸರಳರೇಖೆ ಎಂಬುದು ಸ್ಪಷ್ಟ.

$$\text{ಇದರ ಓಟ} - \frac{g-g'}{f-f'} \quad .... (4)$$

$$\text{ಕೇಂದ್ರಗಳನ್ನು ಸೇರಿಸುವ ರೇಖೆಯ ಓಟ} = \frac{f-f'}{g-g'} \quad .... (5)$$

(4) ಮತ್ತು (5)ರಿಂದ, ಮೂಲಾಕ್ಷ ರೇಖೆಯು ಕೇಂದ್ರಗಳನ್ನು ಸೇರಿಸುವ ರೇಖೆಗೆ ಲಂಬವಾಗಿರುವುದೆಂಬುದು ಸ್ಪಷ್ಟ.

ಅಲ್ಲದೆ ಸಮೀಕರಣ 3 ರಿಂದ, $S=0$ ಮತ್ತು $S'=0$ ಸಮೀಕರಣಗಳನ್ನು ಸಿದ್ಧಿಸುವ ಬಿಂದುವಿನ ನಿರ್ದೇಶಕಗಳು $S-S'=0$ ಎಂಬುದನ್ನು ಸಿದ್ಧಿಸುತ್ತವೆ ಎಂಬುದೂ ಸ್ಪಷ್ಟ. ಹಾಗೆಂದರೆ ಮೂಲಾಕ್ಷರೇಖೆಯು ವೃತ್ತಗಳ ಸಂಗಮ ಬಿಂದುಗಳ ಮೂಲಕ ಸಾಗುತ್ತದೆ ಎಂದರ್ಥ.

ಎರಡು ಬಿಂದುಗಳ ಮೂಲಕ ಸಾಗುವ ವೃತ್ತಗಳ ಗಣವೊಂದನ್ನು ತೆಗೆದುಕೊಂಡರೆ ಈ ಗಣದಿಂದ ಆರಿಸಿದ ಯಾವೆರಡು ವೃತ್ತಗಳ ಮೂಲಾಕ್ಷರೇಖೆಯು ಒಂದೇ ಆಗಿರುತ್ತದೆ (ಅಂದರೆ, ಸಾಮಾನ್ಯ ಬಿಂದುಗಳ ಮೂಲಕ ಹೋಗುವ ರೇಖೆಯೇ ಎಲ್ಲ ವೃತ್ತಗಳ ದ್ವಯ ಮೂಲಾಕ್ಷರೇಖೆ) ಎಂಬುದನ್ನು ಇಲ್ಲಿ ಗಮನಿಸಬಹುದು.

ಒಂದು ವೃತ್ತಗಣದಿಂದ ಆರಿಸಿದ ಯಾವುದೇ ಎರಡು ವೃತ್ತಗಳು ಒಂದೇ ಮೂಲಾಕ್ಷ ರೇಖೆಯನ್ನು ಹೊಂದಿರುವಂತಹ ವೃತ್ತಗಣವನ್ನು ನಾವು ಏಕಾಕ್ಷ ವೃತ್ತಗಳ ವ್ಯೂಹ ಎನ್ನುತ್ತೇವೆ.



ಚಿತ್ರ 6.8

We also notice that, if $S=0$, $S'=0$, $S''=0$ be three circles, the radical axes of these circles taken in pairs are

$S-S'=0$; $S'-S''=0$; $S''-S=0$ which are clearly three concurrent lines, as the sum of the left sides of these equations vanish. We call such a point at which the radical axes of three circles taken in pairs meet, as the *radical centre* of the three circles.



Fig. 6.9

Examples

1 *Find the radical centre of the sets of circles*

$$x^2+y^2+x+2y+3=0,$$
$$x^2+y^2+2x+4y+5=0, \text{ and}$$
$$x^2+y^2-7x-8y-9=0.$$

Denoting the equations of the circles respectively b $S=0$; $S'=0$; $S''=0$; we have the radical axis of first tw as $S-S'=0$ *or* $x+2y+2=0$ (1)

and the radical axis of the last two as $S'-S''=0$

or $9x+12y+14=0$. (2).

The radical centre is the intersection of (1) and (2), a the radical axis of the first and the last circle should als pass through this point.

Solving (1) and (2) we get

$$x=-\tfrac{2}{3}, \quad y=-\tfrac{2}{3}$$

$\therefore (-\tfrac{2}{3}, \ -\tfrac{2}{3})$ is the radical centre.

$S=0$, $S'=0$, $S''=0$ ಎಂಬುವು ಮೂರು ವೃತ್ತಗಳಾದಾಗ, ಈ ಮೂರು ವೃತ್ತಗಳಿಂದ ಆರಿಸಿದ ವೃತ್ತದ್ವಯಗಳ ಮೂಲಾಕ್ಷಗಳು $S-S'=0$; $S'-S''=0$ $S''-S=0$ ಆಗಿರುತ್ತವೆ. ಈ ಸಮೀಕರಣಗಳ ಎಡಭಾಗಗಳ ಮೊತ್ತವು ಶೂನ್ಯವಾಗುವುದರಿಂದ, ಈ ಸಮೀಕರಣಗಳು ನಿರೂಪಿಸುವ ರೇಖೆಗಳು ಏಕಬಿಂದು ಸಂಪಾತಗಳೆಂದು ಸ್ಪಷ್ಟವಾಗುತ್ತದೆ. ಮೂರು ವೃತ್ತಗಳಲ್ಲಿ ಎರಡೆರಡನ್ನು ತೆಗೆದುಕೊಂಡು ನಿರ್ಧರಿಸಿದ ಮೂಲಾಕ್ಷ ರೇಖೆಗಳ ಸಂಗಮ ಬಿಂದುವನ್ನು ನಾವು ಆ ಮೂರು ವೃತ್ತಗಳ ಮೂಲಾಕ್ಷ ಕೇಂದ್ರ ಎನ್ನುತ್ತೇವೆ.

ಚಿತ್ರ 6.9

ಉದಾಹರಣೆಗಳು

1 $x^2+y^2+x+2y+3=0$, $x^2+y^2+2x+4y+5=0$, ಮತ್ತು $x^2+y^2-7x-8y-9=0$ ಈ ವೃತ್ತಗಣದ ಮೂಲಾಕ್ಷ ಕೇಂದ್ರವನ್ನು ಕಂಡು ಹಿಡಿಯಿರಿ.

ದತ್ತ ಸಮೀಕರಣಗಳನ್ನು ಕ್ರಮವಾಗಿ $S=0$, $S'=0$, $S''=0$ ಎಂದು ಬರೆದರೆ, ಮೊದಲೆರಡು ವೃತ್ತಗಳ ಮೂಲಾಕ್ಷರೇಖೆ $S-S'=0$ ಅಥವಾ $x+2y+2=0$ (1) ಮತ್ತು ಕೊನೆಯ ಎರಡು ವೃತ್ತಗಳ ಮೂಲಾಕ್ಷರೇಖೆ $S'-S''=0$ ಅಥವಾ

$$9x+12y+14=0 \quad (2).$$

ಮೊದಲನೆಯ ಮತ್ತು ಕೊನೆಯ ವೃತ್ತಗಳ ಮೂಲಾಕ್ಷವು ಈ ಎರಡು ಮೂಲಾಕ್ಷಗಳೊಂದಿಗೆ ಸಂಪಾತವಾಗಬೇಕಾಗಿರುವುದರಿಂದ ಮೂಲಾಕ್ಷ ಕೇಂದ್ರವು (1) ಮತ್ತು (2) ರ ಸಂಗಮ ಬಿಂದುವಾಗಿರಬೇಕಾಗುವುದು.

(1) ಮತ್ತು (2) ನ್ನು ಬಿಡಿಸಿದರೆ $x=-\frac{2}{3}$, $y=-\frac{2}{3}$.

$\therefore\ (-\frac{2}{3}, -\frac{2}{3})$ ಬಿಂದುವೇ ಮೂಲಾಕ್ಷ ಕೇಂದ್ರ

2 *Prove that the two circles*
$x^2+y^2+2ax+c=0$ *and* $x^2+y^2+2by+c=0$ *touch if*
$$\frac{1}{a^2}+\frac{1}{b^2}=\frac{1}{c}.$$

We use the fact that if the radical axis of two circles touches one of them, it touches the other also, and the circles touch.

The radical axis of the two circles is
$$2ax-2by=0 \quad or \quad ax-by=0.$$

This will be a tangent to one of the circles, say the first one if (distance of the centre $(-a, 0)$ from the line is equal to the radius $\sqrt{a^2-c}$).
$$\frac{-a^2}{\sqrt{a^2+b^2}}=\sqrt{a^2-c}.$$
i.e., if $a^4=(a^2-c)(a^2+b^2)$
i.e., if $a^2b^2=c(a^2+b^2)$
$$or \ \frac{1}{c}=\frac{1}{a^2}+\frac{1}{b^2}$$

Exercises 6.5

1 Find the radical axis of each of the following pairs of circles

(i) $x^2+y^2-4x-2y-11=0, \quad x^2+y^2-2x-6y+1=0$
(ii) $4x^2+4y^2-16y+5=0, \quad x^2+y^2+y-1=0$
(iii) $x^2+y^2+ax+by+c=0, \quad x^2+y^2+bx+ay+c=0.$

2 Find the radical centre of each of the following sets of circles.

(i) $x^2+y^2=9$, $x^2+y^2-2x-2y=5$, $x^2+y^2+4x+6y=19$.
(ii) $x^2+y^2+4x+7=0$, $2x^2+2y^2+3x+5y+9=0$, $x^2+y^2+y=0$.
(iii) $x^2+y^2+x+2y+3=0$, $x^2+y^2+2x+4y+5=0$ $x^2+y^2-7x-8y-9=0$.

2 $x^2+y^2+2ax+c=0$ ಮತ್ತು $x^2+y^2+2by+c=0$

ವೃತ್ತಗಳು $\frac{1}{a^2} + \frac{1}{b^2} = \frac{1}{c}$ ಆದಾಗ ಸ್ಪರ್ಶಿಸುವುವು ಎಂದು ತೋರಿಸಿ.

ಎರಡು ವೃತ್ತಗಳ ಮೂಲಾಕ್ಷವು ಒಂದು ವೃತ್ತವನ್ನು ಸ್ಪರ್ಶಿಸಿದರೆ, ಮತ್ತೊಂದನ್ನೂ ಸ್ಪರ್ಶಿಸಬೇಕು. ಹಾಗೂ ವೃತ್ತಗಳು ಪರಸ್ಪರ ಸ್ಪರ್ಶಿಸುತ್ತವೆ.

ದತ್ತ ವೃತ್ತಗಳ ಮೂಲಾಕ್ಷ ರೇಖೆ $ax-by=0$. ಈ ರೇಖೆಯು ವೃತ್ತಕ್ಕೆ ಸ್ಪರ್ಶರೇಖೆಯಾಗಬೇಕಾದರೆ ಕೇಂದ್ರ $(-a, 0)$ ನಿಂದ, ಈ ರೇಖೆಗಿರುವ ಲಂಬದೂರ ವೃತ್ತದ ತ್ರಿಜ್ಯ $\sqrt{a^2-c}$ ಕ್ಕೆ ಸಮನಾಗಬೇಕಾಗುವುದು.

ಅಂದರೆ $\frac{-a^2}{\sqrt{a^2+b^2}} = \sqrt{a^2-c}$

ಅಥವಾ $a^4=(a^2-c)(a^2+b^2)$

ಅಥವಾ $a^2b^2=c(a^2+b^2)$

ಅಂದರೆ $\frac{1}{c} = \frac{1}{a^2} + \frac{1}{b^2}$ ಆಗಬೇಕಾಗುವುದು.

ಅಭ್ಯಾಸಗಳು 6.5

1 ಈ ಕೆಳಗಿನ ವೃತ್ತದ್ವಯಗಳ ಮೂಲಾಕ್ಷ ರೇಖೆಯನ್ನು ಕಂಡು ಹಿಡಿಯಿರಿ.

(i) $x^2+y^2-4x-2y-11=0,\ x^2+y^2-2x-6y+1=0.$

(ii) $4x^2+4y^2-16y+5=0,\ x^2+y^2+y-1=0.$

(iii) $x^2+y^2+ax+by+c=0,\ x^2+y^2+bx+ay+c=0.$

2 ಈ ಕೆಳಗಿನ ವೃತ್ತ ಗಣಗಳ ಮೂಲಾಕ್ಷ ಕೇಂದ್ರವನ್ನು ಕಂಡು ಹಿಡಿಯಿರಿ.

(i) $x^2+y^2=9,\ x^2+y^2-2x-2y=5,$
$x^2+y^2+4x+6y=19$

(ii) $x^2+y^2+4x+7=0,\ 2x^2+2y^2+3x+5y+9=0,$
$x^2+y^2+y=0$

(iii) $x^2+y^2+x+2y+3=0,\ x^2+y^2+2x+4y+5=0,$
$x^2+y^2-7x-8y-9=0$

3 Show that the circles

$$x^2+y^2=1,\ x^2+y^2+2x=0,\ 2x^2+2y^2+6x+1=0$$

are such that the radical axes of them taken in pairs are identical, (*i.e.* the circles are co-axal).

4 Show that the circles belonging to each of following pairs touch each other.

(i) $x^2+y^2=2,\ x^2+y^2-6x-6y+10=0$

(ii) $x^2+y^2=25,\ 2x^2+2y^2-4x-3y=25$

(iii) $x^2+y^2-4x+6y+8=0,$
$x^2+y^2-10x-6y+14=0$

Find the point of contact in each case.

5 Show that each of the circles

$$x^2+y^2+4y-1=0,\ x^2+y^2+6x+y+8=0,$$
$$x^2+y^2-4x-4y-37=0$$

touches the other two.

6 If the two circles

$$x^2+y^2+2gx+2fy=0 \text{ and}$$
$$x^2+y^2+2g'x+2f'y=0$$

touch each other show that $f'g=fg'$.

3 $x^2+y^2=1$, $x^2+y^2+2x=0$, $2x^2+2y^2+6x+1=0$ ವೃತ್ತಗಳಲ್ಲಿ ಯಾವೆರಡನ್ನು ತೆಗೆದುಕೊಂಡು ಮೂಲಾಕ್ಷ ರೇಖೆಯನ್ನು ಕಂಡು ಹಿಡಿದರೂ ಅದು ಒಂದೇ ಆಗಿರುವುದು (ಅಂದರೆ ವೃತ್ತಗಳು ಏಕಾಕ್ಷ ವೃತ್ತಗಳಾಗಿರುವುವು) ಎಂದು ತೋರಿಸಿ.

4 ಈ ಕೆಳಗಿನ ವೃತ್ತದ್ವಯಗಳಲ್ಲಿ ಒಂದು ವೃತ್ತವು ಮತ್ತೊಂದನ್ನು ಸ್ಪರ್ಶಿಸುತ್ತದೆ ಎಂದು ತೋರಿಸಿ.

(i) $x^2+y^2=2$, $x^2+y^2-6x-6y+10=0$

(ii) $x^2+y^2=25$, $2x^2+2y^2-4x-3y=25$

(iii) $x^2+y^2-4x+6y+8=0$, $x^2+y^2-10x-6y+14=0$.

ಪ್ರತಿಯೊಂದರಲ್ಲೂ ಸ್ಪರ್ಶಬಿಂದುವನ್ನು ಕಂಡುಹಿಡಿಯಿರಿ.

5 $x^2+y^2+4y-1=0$, $x^2+y^2+6x+y+8=0$, $x^2+y^2-4x-4y-37=0$ ವೃತ್ತಗಳಲ್ಲಿ ಪ್ರತಿ ವೃತ್ತವು ಉಳಿದೆರಡು ವೃತ್ತಗಳನ್ನು ಸ್ಪರ್ಶಿಸುತ್ತದೆ ಎಂದು ತೋರಿಸಿ.

6 $x^2+y^2+2gx+2fy=0$ ಮತ್ತು $x^2+y^2+2g'x+2f'y=0$ ವೃತ್ತಗಳು ಪರಸ್ಪರ ಸ್ಪರ್ಶಿಸಿದರೆ $f'g=fg'$ ಎಂದು ತೋರಿಸಿ.

TRIGONOMETRY

ತ್ರಿಕೋಣಮಿತಿ

CHAPTER 7

7.1 Trigonometry—

The word 'trigonometry' means measurement of a triangle. In ancient days man had felt intuitively or otherwise that a certain relationship existed between the sides and angles of a triangle. In some of the special cases he was even able to calculate an unknown side or angle of a triangle. This process inevitably led him to the definition of certain functions of angles which are called the 'trigonometric functions'. To day the word '*trigonometry*' means the study of the properties of these trigonometric functions.

7.2 Rotation and Revolution—

If an object spins round itself like a top it is said to rotate. This motion is called *rotation.* If an object moves round another object, *e.g.*, a mile runner in a round track race, it is said to revolve. This motion is called *revolution.* We say the earth is rotating about itself and revolving round the Sun.

7.3 Direction of Revolution—

Consider a point P moving on the circumference of a circle of centre O. P can move in the direction either $PQRP$ or $PRQP$. Though the total effect when it revolves once round O is the same, the directions of revolution are different. In the first case P is revolving in the anti-clockwise direction and in the second case in the clockwise direction. It is customary to denote the former motion as positive and the latter as negative.



Fig. 7.1

ಅಧ್ಯಾಯ 7

ತ್ರಿಕೋಣಮಿತಿ

7.1 ತ್ರಿಕೋಣಮಿತಿ

'ತ್ರಿಕೋಣಮಿತಿ' ಪದದ ಅರ್ಥ ತ್ರಿಕೋಣದ ಅಳತೆ. ಪ್ರಾಚೀನಕಾಲದಲ್ಲಿ ಮನುಷ್ಯ ಒಂದು ತ್ರಿಕೋಣದಲ್ಲಿ ಭುಜಗಳಿಗೂ ಕೋಣಗಳಿಗೂ ಏನೋ ಒಂದು ಸಂಬಂಧ ವಿದೆಯೆಂದು ಅಂತರ್ಬೋಧೆಯಿಂದ ಅಥವಾ ಬೇರೆ ಕಾರಣದಿಂದ ಅರಿತಿದ್ದ. ಕೆಲವು ವಿಶೇಷ ಉದಾಹರಣೆಗಳಲ್ಲಿ ಅವನು ಒಂದು ಅವ್ಯಕ್ತ ಭುಜವನ್ನೋ ಕೋನವನ್ನೋ ಗಣನೆಯಿಂದ ಕಂಡುಹಿಡಿಯಲೂ ಶಕ್ತನಾಗಿದ್ದ. ಈ ಕ್ರಮದಲ್ಲಿ ಮುಂದುವರಿದಂತೆ ಕೋನಗಳ ಉತ್ಪನ್ನ ಫಲಗಳನ್ನು ಸೂಚಿಸುವುದು ಅನಿವಾರ್ಯವಾಯಿತು. ಇವು ಗಳನ್ನು 'ತ್ರಿಕೋಣಮಿತೀಯ ಉತ್ಪನ್ನ ಫಲಗಳು' ಎಂದು ಕರೆಯುತ್ತೇವೆ. ತ್ರಿಕೋಣ ಮಿತೀಯ ಉತ್ಪನ್ನ ಫಲಗಳ ಅಭ್ಯಾಸವೇ 'ತ್ರಿಕೋಣಮಿತಿ'.

7.2 ಆವರ್ತನೆ ಮತ್ತು ಪರಿಭ್ರಮಣೆ

ಒಂದು ವಸ್ತು ಬುಗುರಿಯಂತೆ ತನ್ನ ಸುತ್ತಲೂ ಸುತ್ತುತ್ತಿದ್ದರೆ ಅದು ಆವರ್ತಿಸುತ್ತಿದೆ ಎನ್ನುತ್ತೇವೆ. ಈ ಚಲನೆಯ ಹೆಸರು ಆವರ್ತನೆ. ವರ್ತುಳಾಕಾರದ ಪಥದಲ್ಲಿ ಓಡುವ ಮೈಲು ಓಟಗಾರನಂತೆ ಒಂದು ವಸ್ತು ಇನ್ನೊಂದರ ಸುತ್ತಲೂ ಸುತ್ತು ತ್ತಿದ್ದರೆ ಅದು ಪರಿಭ್ರಮಿಸುತ್ತಿದೆ ಎನ್ನುತ್ತೇವೆ. ಈ ಚಲನೆಯ ಹೆಸರು ಪರಿಭ್ರಮಣೆ. ಭೂಮಿಯು ತನ್ನ ಸುತ್ತಲೂ ಆವರ್ತಿಸುತ್ತಿದೆ ಮತ್ತು ಸೂರ್ಯನ ಸುತ್ತಲೂ ಪರಿಭ್ರಮಿಸುತ್ತಿದೆ ಎನ್ನುತ್ತೇವೆ.

7.3 ಪರಿಭ್ರಮಣೆಯ ದಿಶೆ

O ಕೇಂದ್ರವಾಗಿರುವ ವೃತ್ತದ ಪರಿಧಿಯ ಮೇಲೆ ಚಲಿಸುತ್ತಿರುವ P ಎನ್ನುವ ಬಿಂದುವನ್ನು ಪರಿಶೀಲಿಸಿ. Pಯು $PQRP$ ಅಥವಾ $PRQP$ ದಿಶೆಯಲ್ಲಿ ಚಲಿಸಬಹುದು. ಅದು ಒಂದು ಸಲ O ಸುತ್ತಲೂ ಪರಿಭ್ರಮಿಸಿದಾಗ ಆಗುವ ಸಮಗ್ರ ಪರಿಣಾಮ ಒಂದೇ ಆದರೂ ಪರಿಭ್ರಮಣೆಯ ದಿಶೆಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ. ಮೊದಲಿನ ಪರಿಸ್ಥಿತಿಯಲ್ಲಿ P ಯು ಅಪ್ರದಕ್ಷಿಣ ದಿಶೆಯಲ್ಲಿ ಪರಿಭ್ರಮಿಸುವುದು ; ಎರಡ ನೆಯದರಲ್ಲಿ ಪ್ರದಕ್ಷಿಣ ದಿಶೆಯಲ್ಲಿ ಪರಿ ಭ್ರಮಿಸುವುದು. ಮೊದಲಿನ ಚಲನೆ ಯನ್ನು ಧನಾತ್ಮಕವೆಂದೂ ಎರಡನೆಯ ದನ್ನು ಋಣಾತ್ಮಕವೆಂದೂ ರೂಢಿಯಲ್ಲಿ ಸೂಚಿಸುತ್ತೇವೆ.



ಚಿತ್ರ. 7.1

7.4 Angle generated by a revolving Straight Line— In the previous example let the straight line OP revolve from the position OP to the position OQ. In this process it is said to generate the angle POQ. It is measured by the amount of revolution of OP from OP to OQ. Thus a straight line revolving about a fixed point on it generates an angle at that point.

7.5 Let $X'OX$ be a fixed straight line in which O is a fixed point. Let a revolving straight line start from OX revolve about O in the positive direction and assume the positions OP, OQ, etc. The angles generated by it are XOP, XOQ, XOR, XOS (all measured in the positive sense). When the revolving line coincides with OX' the angle generated is 180° or a *straight angle.*

$$\angle XOX' = 180°$$



Fig. 7.2

When the line has revolved half this amount coming to the position OY it is said to have generated a *right angle.* One right angle is equal to 90°. When it coincides with OY' the angle generated is 270° or three right angles.

$$\angle XOY' = 270°$$

7.4 ಒಂದು ಸರಳರೇಖೆಯ ಪರಿಭ್ರಮಣೆಯಿಂದ ಜನಿಸುವ ಕೋನ

ಹಿಂದಿನ ಉದಾಹರಣೆಯಲ್ಲಿ OP ಸರಳರೇಖೆಯು OP ಸ್ಥಾನದಿಂದ PQ ಸ್ಥಾನಕ್ಕೆ ಪರಿಭ್ರಮಿಸಲಿ. ಈ ಕ್ರಿಯೆಯಲ್ಲಿ ಅದು PQR ಕೋನವನ್ನು ರಚಿಸುತ್ತದೆ. ಇದನ್ನು OP ಯು OP ಸ್ಥಾನದಿಂದ OQ ಸ್ಥಾನಕ್ಕೆ ಎಷ್ಟು ಪರಿಭ್ರಮಿಸಿದೆ ಎಂಬುದರ ಮೂಲಕ ಅಳೆಯಲಾಗುವುದು. ಹೀಗೆ ತನ್ನ ಮೇಲೆ ಇರುವ ಒಂದು ಸ್ಥಿರ ಬಿಂದುವಿನ ಸುತ್ತಲೂ ಪರಿಭ್ರಮಿಸುವ ಒಂದು ಸರಳರೇಖೆ ಆ ಬಿಂದುವಿನಲ್ಲಿ ಒಂದು ಕೋನವನ್ನು ರಚಿಸುತ್ತದೆ.

7.5 $X'OX$ ಒಂದು ಸರಳ ರೇಖೆಯಾಗಿರಲಿ ಮತ್ತು O ಅದರ ಮೇಲಿನ ಒಂದು ಸ್ಥಿರಬಿಂದುವಾಗಿರಲಿ. ಒಂದು ಪರಿಭ್ರಮಿಸುವ ಸರಳರೇಖೆ OX ನಿಂದ ಪ್ರಾರಂಭಿಸಿ O ಸುತ್ತಲೂ ಅಪ್ರದಕ್ಷಿಣ ದಿಶೆಯಲ್ಲಿ ಪರಿಭ್ರಮಿಸಲಿ ಮತ್ತು OP, OQ ಇತ್ಯಾದಿ ಸ್ಥಾನಗಳನ್ನು ಹೊಂದಲಿ. ಅದು ರಚಿಸುವ ಕೋನಗಳು XOP, XOQ, XOR XOS (ಎಲ್ಲವನ್ನೂ ಅಪ್ರದಕ್ಷಿಣದಿಶೆಯಲ್ಲಿ ಅಳೆಯಬೇಕು). ಪರಿಭ್ರಮಿಸುವ ಸರಳ ರೇಖೆ OX' ನಲ್ಲಿ ಐಕ್ಯವಾದಾಗ ಅದು ರಚಿಸಿರುವ ಕೋನ $180°$ ಅಥವಾ ಒಂದು ಸರಳ ಕೋನ.

$$\angle XOX' = 180°$$



ಚಿತ್ರ 7.2

ಆ ಸರಳ ರೇಖೆಯು ಇದರ ಅರ್ಧಾಂಶ ಪರಿಭ್ರಮಿಸಿ OY ಸ್ಥಾನಕ್ಕೆ ಬಂದಾಗ ಅದು ಒಂದು ಸಮಕೋನವನ್ನು ರಚಿಸಿದೆ ಎಂದು ಹೇಳುತ್ತೇವೆ. ಒಂದು ಸಮಕೋನವು $90°$ ಗೆ ಸಮಾನ. ಸರಳರೇಖೆಯು OY' ನಲ್ಲಿ ಐಕ್ಯವಾದಾಗ ಅದು ರಚಿಸಿರುವ ಕೋನ $270°$ ಅಥವಾ ಮೂರು ಸಮಕೋನಗಳು.

$$\angle XOY' = 270°$$

When the line returns to OX after one revolution the total angle generated by it about O is 360° or 4 right angles.

If the straight line revolves further it will be generating angles of the form $n.\,360^\circ + \phi^\circ$ where n is a positive integer. n indicates the number of revolutions and ϕ° is the angle measured to the present position of the revolving line from Ox in the positive direction. If n is negative we shall still reach the same position (OP) but after completing n complete revolutions in the negative direction. [Fig. 7.3 (2)]



Fig. 7.3 (1)

ಸರಳ ರೇಖೆಯು ಒಂದು ಪರಿಭ್ರಮಣೆಯನ್ನು ಮುಗಿಸಿ OX ಗೆ ಮರಳುವಾಗ ಅದು ಸಮಾಗ್ರವಾಗಿ 360° ಅಥವಾ ನಾಲ್ಕು ಸಮಕೋನಗಳನ್ನು O ಬಿಂದುವಿನಲ್ಲಿ ರಚಿಸಿರುತ್ತವೆ.

ಆ ಸರಳರೇಖೆಯು ಮತ್ತೂ ಪರಿಭ್ರಮಿಸಿದರೆ ಅದು $n.360^\circ+\phi^\circ$ ಈ ರೂಪದ ಕೋನಗಳನ್ನು ರಚಿಸುವುದು ; ಇಲ್ಲಿ $n.360^\circ+\Phi^\circ$ ಧನ ಪೂರ್ಣಾಂಕ. n ಪರಿಭ್ರಮಣೆಗಳ ಸಂಖ್ಯೆಯನ್ನೂ ϕ° ಯು ಪರಿಭ್ರಮಿಸುವ ಸರಳರೇಖೆಯು ಪ್ರಕೃತ ಸ್ಥಾನಕ್ಕೆ OX ನಿಂದ ಅಪ್ರದಕ್ಷಿಣ ದಿಶೆಯಲ್ಲಿ ಉಂಟಾಗಿರುವ ಕೋನವನ್ನೂ ಸೂಚಿಸುತ್ತವೆ. n ಋಣವಾದರೂ ನಾವು ಪುನಃ ಮೊದಲಿನ (OP) ಸ್ಥಾನವನ್ನೇ ತಲಪುತ್ತೇವೆ ; ಆದರೆ ಈ ಸಲ n ಪೂರ್ಣ ಪರಿಭ್ರಮಣೆಗಳನ್ನು ಪ್ರದಕ್ಷಿಣ ದಿಶೆಯಲ್ಲಿ ಮಾಡಿರುತ್ತೇವೆ. ಚಿತ್ರ 7.3(2)]



ಚಿತ್ರ 7.3 (1)



Fig. 7·3 (2)

7.6 Measurement of an Angle—

The height of a person can be measured in meters or feet or in any other convenient unit. Each system has its own purpose to achieve and may have its own special advantages. The angle generated by a revolving line about a fixed point on it in one complete revolution is divided into 360 equal parts and each part is called one *degree*. One degree is divided into 60 equal parts and each part is called one *minute* (of arc); and finally, one minute is divided into 60 equal parts and each part is called a *second* (of arc).

x degrees are written x°
y minutes are written y'
z seconds are written z''



Fig. 7.3 (2)

7.6 ಕೋನಮಾನ

ಒಂದು ವ್ಯಕ್ತಿಯ ಎತ್ತರವನ್ನು ಮೀಟರ್‌ಗಳಲ್ಲಿ ಅಥವಾ ಅಡಿಗಳಲ್ಲಿ ಅಥವಾ ಇನ್ನಾವುದಾದರೂ ಅನುಕೂಲವಾದ ಮಾನದಲ್ಲಿ ಅಳೆಯಬಹುದು. ಪ್ರತಿಯೊಂದು ಪದ್ಧತಿಗೂ ಅದರದೇ ಆದ ಒಂದು ನಿಶ್ಚಿತ ಗುರಿಸಾಧನೆ ಇದೆ ; ಆದುದರಿಂದ ಈ ದಾರಿಯಲ್ಲಿ ಕೆಲವು ವಿಶೇಷ ಸೌಕರ್ಯಗಳೂ ಇವೆ. ತನ್ನ ಮೇಲಿರುವ ಒಂದು ಸ್ಥಿರ ಬಿಂದುವಿನ ಸುತ್ತಲೂ ಪರಿಭ್ರಮಿಸುವ ಒಂದು ಸರಳ ರೇಖೆ ಒಂದು ಪೂರ್ಣ ಪರಿಭ್ರಮಣೆಯಲ್ಲಿ ಉಂಟು ಮಾಡುವ ಕೋನವನ್ನು 360 ಸಮಭಾಗಗಳಾಗಿ ವಿಭಾಗಿಸಿ ಒಂದೊಂದು ಇಂಥ ಭಾಗವನ್ನೂ ಒಂದು ಡಿಗ್ರಿಯೆಂದು ಕರೆಯುತ್ತೇವೆ. ಒಂದು ಡಿಗ್ರಿಯನ್ನು 60 ಸಮಭಾಗಗಳಾಗಿ ವಿಭಾಗಿಸಿ ಪ್ರತಿಯೊಂದು ಇಂಥ ಭಾಗವನ್ನೂ ಒಂದು (ಕೋನದ) ಮಿನಿಟ್ ಎಂದು ಕರೆಯುತ್ತೇವೆ ; ಮತ್ತು ಕೊನೆಯದಾಗಿ ಒಂದು ಮಿನಿಟನ್ನು 60 ಸಮಭಾಗಗಳಾಗಿ ವಿಭಾಗಿಸಿ ಪ್ರತಿಯೊಂದು ಇಂಥ ಭಾಗವನ್ನೂ ಒಂದು (ಕೋನದ) ಸೆಕೆಂಡ್ ಎಂದು ಕರೆಯುತ್ತೇವೆ.

x ಡಿಗ್ರಿಗಳನ್ನು x° ಎಂದು ಬರೆಯುತ್ತೇವೆ.

y ಮಿನಿಟುಗಳನ್ನು y' ಎಂದು ಬರೆಯುತ್ತೇವೆ.

z ಸೆಕೆಂಡುಗಳನ್ನು z'' ಎಂದು ಬರೆಯುತ್ತೇವೆ.

70° 15′ 44″ means 70 degrees, 15 minutes, 44 seconds.

7·7 The above system of measuring angles is termed the *sexagesimal system.* Another more convenient system for measuring angles is the radian system. It will be explained in paragraph 10.

7.8 Two important properties of a Circle—

Consider two concentric circles C_1 and C_2 of radii r_1 and r_2 respectively. Mark n equal arcs $A_1 A_2$, $A_2 A_3$, ..., $A_n A_1$ on C_1. Produce the radii OA_1, OA_2, ... OA_n to intersect the circle C_2 in the points B_1, B_2, ... B_n. Then $B_1 B_2$, $B_2 B_3$, .. $B_n B_1$ are equal arcs on the circle C_2. From the similar triangles $OA_1 A_2$ and $OB_1 B_2$ we have



Fig. 7·4

$$\frac{A_1A_2}{B_1B_2} = \frac{OA_1}{OB_1} = \frac{r_1}{r_2}$$

70° 15′ 44″ ಎಂದರೆ 70 ಡಿಗ್ರಿಗಳು, 15 ಮಿನಿಟುಗಳು, 44 ಸೆಕೆಂಡುಗಳು ಎಂದರ್ಥ.

7.7 ಕೋನಗಳನ್ನು ಅಳೆಯುವ ಮೇಲಿನ ಕ್ರಮವನ್ನು ಷಷ್ಟ್ಯಂಶ ಪದ್ಧತಿ ಎಂದು ಕರೆಯುತ್ತೇವೆ. ಇದಕ್ಕಿಂತಲೂ ಅನುಕೂಲವಾದ ಇನ್ನೊಂದು ಕ್ರಮದ ಹೆಸರು ರೇಡಿಯನ್ ಪದ್ಧತಿ. ಅದನ್ನು ಪರಿಚ್ಛೇದ 7.10 ರಲ್ಲಿ ವಿವರಿಸಲಾಗುವುದು.

7·8 ವೃತ್ತದ ಎರಡು ಮುಖ್ಯ ಗುಣಗಳು

r_1, r_2 ತ್ರಿಜ್ಯಗಳಿರುವ C_1 ಮತ್ತು C_2 ಎನ್ನುವ ಎರಡು ಏಕಕೇಂದ್ರೀಯ ವೃತ್ತಗಳನ್ನು ಪರಿಶೀಲಿಸಿ. C_1ರ ಮೇಲೆ $A_1 A_2$, $A_2 A_3$,...., $A_n A_1$ ಎನ್ನುವ n ಸಮಾನ ಕಂಸಗಳನ್ನು ಗುರುತಿಸಿ. OA_1, OA_2,...., OA_n ತ್ರಿಜ್ಯಗಳು C_2 ವೃತ್ತವನ್ನು B_1, B_2,...., B_n ಬಿಂದುಗಳಲ್ಲಿ ಸಂಧಿಸುವಂತೆ ವೃದ್ಧಿಸಿ. ಆಗ B_1B_2, $B_2 B_3$,...., $B_n B_1$ ಇವು C_2 ವೃತ್ತದ ಮೇಲಿರುವ n ಸಮಾನ ಕಂಸಗಳಾಗುವುವು. $OA_1 A_2$ ಮತ್ತು $OB_1 B_2$ ಎನ್ನುವ ಸಮರೂಪ ತ್ರಿಭುಜಗಳಿಂದ



ಚಿತ್ರ 7.4

$$\frac{A_1 A_2}{B_1 B_2} = \frac{OA_1}{OB_1} = \frac{r_1}{r_2}$$, ಎಂದು ತಿಳಿಯುತ್ತೇವೆ.

$$\text{Similarly, } \frac{A_1A_2}{B_1B_2} = \frac{A_2A_3}{B_2B_3} = \ldots = \frac{A_nA_1}{B_nB_1} = \frac{r_1}{r_2}$$

$$\therefore \frac{r_1}{r_2} = \frac{A_1A_2+A_2A_3+\ldots+A_nA_1}{B_1B_2+B_2B_2+\ldots+B_nB_1}$$

$$= \frac{\text{perimeter of the polygon } A_1A_2\ldots A_n}{\text{perimeter of the polygon } B_1B_2\ldots B_n}$$

Let us now choose the successive points $A_1, A_2, \ldots A_n$ as close to one another as possible. In the limit when the number of points tends to infinity the polygon $A_1 A_2 \ldots A_n$ becomes the circle C_1 and the polygon $B_1 B_2 \ldots B_n$ the circle C_2.

$$\therefore \frac{r_1}{r_2} = \frac{\text{circumference of } C_1}{\text{circumference of } C_2}$$

$\therefore$ circumference of $C_1 \propto r_1$
circumference of $C_2 \propto r_2$

Hence the *ratio of the circumference of a circle to its diameter is a constant, the same for all circles.* This constant is denoted by the Greek letter π.

$\therefore$ The circumference of a circle of radius r is equal to πd or $2\pi r$ where d is the diameter.

π is an irrational number. Its value cannot be expressed as a fraction, but approximate values can be given. The Greek mathematician Archimedes gave the approximate value $\pi = \frac{22}{7}$. A more accurate value $\pi = 3.1416$ was given by the Indian mathematician Arya Bhata (499 *A.D*). To eight decimal places

$$\pi = 3.14159265$$

ಹೀಗೆಯೇ ಮುಂದುವರಿಸಿದರೆ—

$$\frac{A_1 A_2}{B_1 B_2} = \frac{A_2 A_3}{B_2 B_3} = \ldots\ldots = \frac{A_n A_1}{B_n B_1} = \frac{r_1}{r_2}$$

$$\therefore \frac{r_1}{r_2} = \frac{A_1 A_2 + A_2 A_3 + \ldots + A_n A_1}{B_1 B_2 + B_2 B_3 + \ldots + B_n B_1}$$

$$= \frac{A_1 A_2 \ldots A_n \text{ ಬಹುಭುಜದ ಸುತ್ತಳತೆ}}{B_1 B_2 \ldots B_n \text{ ಬಹುಭುಜದ ಸುತ್ತಳತೆ}}$$

ಈಗ, ಒಂದಾದನಂತರ ಇನ್ನೊಂದು ಬರುವ $A_1, A_2, \ldots, A_n$ ಬಿಂದುಗಳನ್ನು ಪರಸ್ಪರ ಆದಷ್ಟು ಸಮೀಪವಿರುವಂತೆ ಆರಿಸೋಣ. ಬಿಂದುಗಳ ಪರಮಾವಧಿ ಸಂಖ್ಯೆ ಅನಂತಕ್ಕೆ ಏರಿದಾಗ $A_1 A_2 \ldots A_n$ ಬಹುಭುಜವು C_1 ವೃತ್ತವಾಗುವುದು ಮತ್ತು $B_1 B_2 \ldots B_n$ ಬಹುಭುಜವು C_2 ವೃತ್ತವಾಗುವುದು.

$$\therefore \frac{r_1}{r_2} = \frac{C_1 \text{ ವೃತ್ತದ ಪರಿಧಿ}}{C_2 \text{ ವೃತ್ತದ ಪರಿಧಿ}}$$

$\therefore$ C_1 ವೃತ್ತದ ಪರಿಧಿ $\propto r_1$

C_2 ವೃತ್ತದ ಪರಿಧಿ $\propto r_2$

ಆದ್ದರಿಂದ ಒಂದು ವೃತ್ತದ ಪರಿಧಿ ಮತ್ತು ವ್ಯಾಸಗಳ ಪ್ರಮಾಣವು ಒಂದು ಸ್ಥಿರ ಸಂಖ್ಯೆ ; ಇದು ಎಲ್ಲ ವೃತ್ತಗಳಿಗೂ ಒಂದೇ ಆಗಿದೆ. ಈ ಸ್ಥಿರ ಸಂಖ್ಯೆಯನ್ನು π ಎನ್ನುವ ಗ್ರೀಕ್ ಸಂಕೇತದಿಂದ ಸೂಚಿಸಲಾಗಿದೆ.

ಆದ್ದರಿಂದ r ತ್ರಿಜ್ಯವಿರುವ ಒಂದು ವೃತ್ತದ ಪರಿಧಿ πd ಅಥವಾ $2\pi r$ (dಯು ವೃತ್ತದ ವ್ಯಾಸ) ಎಂದು ತಿಳಿಯುವುದು.

π ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ. ಇದರ ಬೆಲೆಯನ್ನು ಒಂದು ಭಿನ್ನ ರಾಶಿಯ ರೂಪದಲ್ಲಿ ಬರೆಯಲು ಸಾಧ್ಯವಿಲ್ಲ; ಆದರೆ ಸಮೀಪದ ಬೆಲೆಗಳನ್ನು ಕೊಡಬಹುದು. ಗ್ರೀಕ್ ಗಣಿತಜ್ಞ, ಆರ್ಕಿಮಿಡೀಸನು πಯ ಸ್ಥೂಲಬೆಲೆ $\frac{22}{7}$ ಆಗುವುದೆಂದು ಹೇಳಿದನು. ಭಾರತೀಯ ಗಣಿತಜ್ಞ ಆರ್ಯಭಟ್ಟ (499 ಕ್ರಿ. ಶ.) ನೀಡಿದ ಬೆಲೆ $\pi = 3.1416$ ಇದು ಇನ್ನಷ್ಟು ಸಮೀಪವಾಗಿದೆ; ದಶಮಾಂಶದ ಎಂಟು ಸ್ಥಾನಗಳಲ್ಲಿ π ಬೆಲೆ 3.14159265 ಆಗಿರುವುದು.

7.9 In the adjoining circle C

$A_1 A_2$, $A_2 A_3$, ... $A_n A_1$ are n equal chords. It is clear that

$O A_1 A_2$, $O A_2 A_3$ . . . $O A_n A_1$ are n equal triangles in the circle. If λ be the length of the altitude of any one of them, we have



Fig. 7 5

$$\Delta\, O A_1 A_2 = \tfrac{1}{2}\, A_1 A_2 \cdot \lambda$$
$$\Delta\, O A_2 A_3 = \tfrac{1}{2}\, A_2 A_3 \cdot \lambda$$
$$\Delta\, O A_n A_1 = \tfrac{1}{2}\, A_n A_1 \cdot \lambda$$

Adding—

$$\therefore\ \Sigma\, \Delta O\, A_1 A_2 = \tfrac{1}{2}\, \lambda\, \Sigma\, A_1\, A_2,$$

$\therefore$ Area of the polygon $A_1 A_2$ . . . . A_n

$= \frac{1}{2}\lambda$[perimeter of the polygon $A_1 A_2$ . . . . A_n]

Now increase the number of chords indefinitely. In the limit the polygon $A_1 A_2$ . . . A_n coincides with the circle C and λ becomes the radius r of the same circle.

$\therefore$ Area of the circle, $C = \dfrac{r}{2}$ [circumference of the circle, C]

$$= \frac{r}{2} \cdot\ 2\pi r = \pi r^2$$

